
# ಅಖಿಲ ಭಾರತ ಪತ್ರಿಕೆ

## ಏಪ್ರಿಲ್ 2021




ಬೆಲೆ : 15/-



ಗುಪ್ತವಾಗಿರುವ ಅಂತರಾಳದಾ ಸಂಗೀತ–ಗೀತ–ಸೂತ್ರ
ಆವರಣಗೊಳಿಸಿ ಅದನೀಗ ತಾನು ಈಗಿದೋ ಲಯದಿ–ಮಾತ್ರ
ಧರಾತಲದೊಳಗೆ ಸ್ವರಮೇಳವಾಗಿ ಪದತಾಲ–ಬಂಧದೊಳಗೆ
ಆಲಿಸದೆ ಉಳಿದ ಅವುಗಳಿಗೆ ಮಾರ್ಗ–ದರ್ಶನದ ಸೂತ್ರವಾಗೆ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 2 ರೇಣು 6 ಪುಟ 194)**

**ಅಖಿಲ ಭಾರತ ಪತ್ರಿಕೆ**

**ಏಪ್ರಿಲ್ 2021**

ಸಂಪುಟ: 31 ಸಂಚಿಕೆ: 04



**ಸಂಪಾದಕರು:**
ಶ್ರೀ ಪುಟ್ಟು ಕುಲಕರ್ಣಿ
ರಾಘವೇಂದ್ರ ಮಠದ ಹಿಂಭಾಗ,
ಗಿಬ್ ಸರ್ಕಲ್, ಹೆರವಟ್ಟ ರಸ್ತೆ,
ಕುಮಟಾ – 581 332.
ಫೋನ್: 9448774920
mayureshwarkp@gmail.com



**ಪರಿಶೀಲನಾ ಸಮಿತಿ**
ಡಾ॥ ಗುರುಲಿಂಗ ಕಾಪಸೆ
ಡಾ॥ ಆರ್.ಕೆ. ಕುಲಕರ್ಣಿ



**ಪ್ರಕಾಶಕರು:**
ಡಾ॥ ಅಜಿತ್ ಸಬ್ನೀಸ್
ಅಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ ಕರ್ನಾಟಕ,
ಶ್ರೀ ಅರವಿಂದ ಮಾರ್ಗ,
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು:**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.
ಫೋನ್: 080 – 2244 9882
http://abp.sirinudi.org

**ಡಿ.ಟಿ.ಪಿ.:**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ:**
ಶೇಷಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ.)
ಜೆ.ಪಿ. ನಗರ ಮೊದಲನೇ ಹಂತ,
ಬೆಂಗಳೂರು – 560 078.


## ಪರಿವಿಡಿ

# ಶ್ರೀಮಾತೆಯ ನಾಲ್ಕು ಸ್ವರೂಪಗಳು

ಜಡತ್ವದಲ್ಲಿ ದೈವತ್ವದ ಆವಿಷ್ಕಾರ. – ಶ್ರೀ ಅರವಿಂದರು


**ಆದ್ಯಶಕ್ತಿ** 7
ಅನು: ಪ್ರೊ. ವೀರಭದ್ರಪ್ಪ ಕೆ.

**ಶ್ರೀಮಾತೆಯ ನಾಲ್ಕು ಮಹದ್ ಸ್ವರೂಪಗಳು** 11
**ಮಾಹೇಶ್ವರಿ** 12
**ಮಹಾಕಾಳಿ** 14
ಅನು: ಡಾ॥ ಕೆ.ಎಸ್. ಆಮೂರ

**ಮಹಾಲಕ್ಷ್ಮೀ** 17
**ಮಹಾಸರಸ್ವತೀ** 23
ಅನು: ಪುಟ್ಟು ಕುಲಕರ್ಣಿ

**ತೋಷಪೂರ್ಣ ಶ್ರೀಮಾತೆ** 28
**ಆಕೃತಿಗಳು ಮತ್ತು ಭಾವಚಿತ್ರಗಳು** 35
ಅನು: ಡಾ॥ ಮಹಾದೇವ ಸಕ್ರಿ

**ದಿವ್ಯ ಜೀವನ** 44
– ಜಾನ್ವಿ

**ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು – 4** 53
– ಡಾ॥ ಶಂ.ಬಾ. ಜೋಶಿ

**‘ಭವಿಷ್ಯ ಕಾವ್ಯ’** 61
ಅನು: ಪುಟ್ಟು ಕುಲಕರ್ಣಿ

## ಸಂಪಾದಕರ ಟಿಪ್ಪಣಿ

ಬ್ರಹ್ಮಾಂಡದಲ್ಲಿ ನಿತ್ಯ ಕಾರ್ಯಪ್ರವೃತ್ತವಾಗಿರುವ ಈ ಶಕ್ತಿಗಳು ಕೇವಲ ಗುರಿಯಿರದ ಯಾಂತ್ರೀಕೃತ ಶಕ್ತಿಗಳಲ್ಲ, ಆದರೆ ಚಿತ್–ಶಕ್ತಿಗಳು (ಸಂಧಿನೀ ಶಕ್ತಿಗಳು) ಮತ್ತು ಶುದ್ಧ ಸನ್ಮಾತ್ರಗಳು ಸದಾ ಈ ಜಗತ್ತಿನ ಸಲುವಾಗಿ ಹಲವಾರು ಕ್ರಿಯಾ–ಕರ್ಮಗಳ ಅನುಷ್ಠಾನದಲ್ಲಿ ಸದಾ ತಮ್ಮನ್ನು ತೊಡಗಿಸಿಕೊಂಡಿವೆ. ಅವು ಅಗಣಿತವಾಗಿದ್ದರೂ, ಅವುಗಳನ್ನು ಏಕೈಕವಾಗಿರುವ ಮಹಾಮಾತೆಯ ನಾಲ್ಕು ಮಹತ್ತರ ಶಕ್ತಿಗಳನ್ನಾಗಿ ಸಂಕಲ್ಪಗೊಳಿಸಿಕೊಳ್ಳಬಹುದಾಗಿದೆ. ಜೊತೆಗೆ ಈ ಶಕ್ತಿಗಳು ಮಾನವನ ಆತ್ಮ ಮತ್ತು ಸ್ವಭಾವವು ಆ ಶ್ರೀಮಾತೆಯ ಕೃಪೆಯನ್ನು ಪಡೆದು–ಕೊಳ್ಳುವಂತೆ ಮತ್ತು ಅವೆಲ್ಲವೂ ಈ ಜಗತ್ತಿನಲ್ಲಿ ಅವಳ ಉಪಕರಣಗಳಾಗಿರುವಂತೆ ಸಹಾಯ ಮಾಡುತ್ತಿವೆ. ಶ್ರೀ ಅರವಿಂದರು ಈ ಶಕ್ತಿಗಳ ಮತ್ತು ಶುದ್ಧ ಸನ್ಮಾತ್ರಗಳ ನೇರಾನೇರ ಅನುಭೂತಿಯನ್ನು ಹೊಂದಿದ್ದೂ ಅಲ್ಲದೇ ಅವುಗಳ ದರ್ಶನವನ್ನೂ ಪಡೆದುಕೊಂಡಿದ್ದರು. ಅವುಗಳು ಸತ್ಯವಾಗಿಯೇ ಇರುವದನ್ನು ಮತ್ತು ಅವುಗಳ ಅಸ್ತಿತ್ವವನ್ನು ಕಂಡಿದ್ದರು, ಆದರೆ ಅವೆಲ್ಲವೂ ಆ ದಿವ್ಯಮಾತೆಯ ಮೂರ್ತಿವೆತ್ತ ರೂಪದಂತೆಯೇ ಪ್ರಸ್ತುತಃ ಸಾಕಾರಗೊಂಡಿರುವದನ್ನೂ ಕಂಡಿದ್ದಾರೆ.

ಶ್ರೀ ಅರವಿಂದರು ಈ ಶ್ರೀಮಾತೆಯ ಈ ನಾಲ್ಕು ಮಹತ್–ಸ್ವರೂಪಗಳ ಕುರಿತು ಶ್ರುತಿಸದೃಶ ವಾಣಿಯಲ್ಲಿ ಅಭಿವ್ಯಕ್ತಗೊಳಿಸಿರುವ ವಿಷಯಗಳ ಬಗೆಗೆ ಈ ಸಂಚಿಕೆಯನ್ನು ರೂಪಿಸಲಾಗಿದೆ. [ಎಐಎಮ್]

*

## ಸಂಪಾದಕೀಯ

ಮಾತೃ ಪೂಜಾ ವಿಧಾನ ಪ್ರಕೃತಿ ಸಹಜವಾದದ್ದು. ಹೀಗಾಗಿ ಯಾವುದೇ ಪಂಥ–ಮತ–ಧರ್ಮಗಳಲ್ಲೂ ಇಂದಿಗೂ "ಗ್ರಾಮದೇವತೆಗೇ" ಅಗ್ರ ಪ್ರಾಶಸ್ತ್ಯವಿದೆ. ದೇಶಾದ್ಯಂತ (ನಕಾಶೆಗೆ ಸೀಮಿತಗೊಳಿಸಬೇಡಿ. ಏಕೆಂದರೆ, ನಾವು ಈಗ ಕಾಣುತ್ತಿರುವ ನಕಾಶೆ ಪ್ರಚಲಿತ ಆಡಳಿತಾತ್ಮಕವಾಗಿ, ಸ್ವಾತಂತ್ರ್ಯಾ ನಂತರದಲ್ಲಿ ರೂಪುಗೊಂಡಿದೆ.) ಇದ್ದ ಈ ಮಾತೃ ಪೂಜೆಯ ಹಿನ್ನೆಲೆಯಲ್ಲಿ ಅದರಲ್ಲೂ ಅದೇ ಮೂಲಶಕ್ತಿ ಎಂದು ಸಂಪೂರ್ಣವಾಗಿ ಒಪ್ಪಿಕೊಂಡೇ, ಆ ವಿಧಾನದಲ್ಲಿ ಇದ್ದಿರಬಹುದಾದ, (ಇರಬಹುದಾದ), ಎಲ್ಲ ಪೂಜಾ ವಿಧಾನಗಳಿಗೂ ಒಂದು ಸೂತ್ರ ರೂಪವನ್ನು ಕೊಡುವಲ್ಲಿ, ಅಂದರೆ ಶಕ್ತಿ ಪಂಥದ, ಬದುಕಿಗೆ ನೇರವಾಗಿ ಸಂಬಂಧಿಸಿದಂತೆ ಇರುವ, ಆಚರಣಾ ವ್ಯವಸ್ಥೆಯನ್ನು ಗಮನಿಸಿಕೊಂಡು ಅದಕ್ಕೊಂದು ಆಯಾಮವನ್ನೂ ರೂಪಿಸಿ, ಸಮರ್ಪಕವಾಗಿ ಕಾಶ್ಮೀರ ಶೈವ ಪಂಥವು ಅಳವಡಿಸಲು ಯಶಸ್ವಿಯಾಗಿದೆ. ಶಕ್ತಿ ಪಂಥದ ಹಿನ್ನೆಲೆಯಲ್ಲಿ ಇರುವ ವಿಧಾನಗಳನ್ನು "ತಂತ್ರ"ದ ಮೂಲಕವೇ ಮತ್ತು ಶಿವ ಪರಂಪರೆಯಲ್ಲಿ ಇದ್ದ ವಿಧಾಗಳನ್ನೂ ತಂತ್ರದ ಹಿನ್ನೆಲೆಯಲ್ಲಿಯೇ ಅಳವಡಿಸಿ, ಒಂದು ನವೀನ ಪಥವನ್ನೇ ನಿರ್ಮಿಸಿತು. "ಏಕಾನನ ಚತುರಾನನ ಪಂಚಾನನ ರಾಜೆ/ಶಿವೆ ಪಂಚಾನನ ರಾಜೇ" ಎನ್ನುವ ಸಾಲು, ಎಲ್ಲವೂ ಶಕ್ತಿಮಯವಾಗಿದೆ ಎನ್ನುವದನ್ನು ಸಮರ್ಥವಾಗಿ ಬಿಂಬಿಸುತ್ತಿದೆ. ಸೃಷ್ಟಿ–ಸ್ಥಿತಿ–ಲಯ ಮತ್ತೆ ಮರುಸೃಷ್ಟಿಯ ಈ ನಾಲ್ಕು ಹಂತದ ವಿಕಸನವನ್ನು ನಿಯತಿ ನಿಗದಿಗೊಳಿಸಿದೆ. ಆ ನಿಯತಿಯನ್ನು ನಿಯಂತ್ರಿಸುವ ನಿಯಾಮಕಳು ಈ ದಿವ್ಯ–ಮಾತೆಯಾಗಿದ್ದಾಳೆ.

ತಂತ್ರದ ಹಿನ್ನಲೆಯಲ್ಲಿ ಇರುವ ಪ್ರಾರ್ಥನಾ ಪದ್ಯಗಳನ್ನು ವಿಶ್ಲೇಷಣಾತ್ಮಕವಾಗಿ ಅರ್ಥಯಸಿಕೊಳ್ಳಬೇಕಾಗಿದೆ. ಇದಕ್ಕೆ ಅತಿ ಮುಖ್ಯವಾಗಿ ನಿರ್ಲಿಪ್ತ ಮನೋಭಾವದ ವಿಶ್ಲೇಷಣಾ ಮಾರ್ಗವೇ ಬೇಕು. ಭಾರತೀಯ ವ್ಯವಸ್ಥೆಯ ಮನೋಭೂಮಿಕೆಯಿಂದ ಸಂಪೂರ್ಣವಾಗಿ ಬೇರೆಯದೇ ಆದ ಸಾಂಸ್ಕೃತಿಕ ಆಯಾಮ ಹೊಂದಿದ ಇಂಗ್ಲೀಷ ಭಾಷೆ, ಈ ದೃಷ್ಟಿಯಿಂದಲೆ, ಭಾರತೀಯ ಹಿನ್ನೆಲೆಯ ಧಾರ್ಮಿಕ, ತಾಂತ್ರಿಕ, ಬೌದ್ಧ ಪರಂಪರೆಯ, ಭಕ್ತಿ ಪರಂಪರೆಯ ಅಧ್ಯಯನ ನಡೆಸುತ್ತಿದೆ.

ನಮಗೆ ಇದೊಂದು ಸವಾಲಿನ ವಿಷಯ. ಯಾವುದಾದರೂ ಒಂದು “ವ್ಯವಸ್ಥೆಯಲ್ಲಿ” ನಮ್ಮ ವ್ಯಕ್ತಿತ್ವ ರೂಪುಗೊಂಡಿರುತ್ತದೆ. ಹೀಗಾಗಿ, ಇಲ್ಲಿ ಸಾಮುದಾಯಿಕ ಆಯಾಮಗಳ ಅಧ್ಯಯನ ಸಂದರ್ಭದಲ್ಲಿ, ಈ ವೈಯಕ್ತಿಕತೆ ತುಂಬ ಗೊಂದಲ ಎದುರಿಸುತ್ತದೆ. ಈ ಸವಾಲನ್ನು ದಾಟಿಕೊಂಡು ಮುಂದೆ ಬಂದಲ್ಲಿ, ಈ ಸುಸಂಬದ್ಧ ಸಂಯೋಜನೆಯ ರಹಸ್ಯ ಗೋಚರಿಸುತ್ತದೆ.

ಭೌತಿಕ ಬದುಕಿನ ಈ ಸುಸಂಬದ್ಧತೆಯು ಕ್ರಮೇಣವಾಗಿ, ಮನೋಭೂಮಿಕೆಯಲ್ಲಿ, ಅದರ ಮೂಲಕ ಪ್ರಜ್ಞೆಯಲ್ಲಿ ಮತ್ತೆ ಅದರ ಮೂಲಕ ಚಿತ್ತದಲ್ಲಿ ತರುವ ರೂಪಾಂತರಗಳ ಮೂಲಕ, ವಿಕಸನಗೊಳ್ಳುವ ಮಾನವನ ಚೇತನಾಭಾವವು, ಯಾವ ‘ಹಂತ’ವನ್ನು ತಲುಪಬಹುದು ಎನ್ನುವದನ್ನು “ಸಾವಿತ್ರೀ” ತೋರಿಸುತ್ತಿದೆ. ನೆಲದ ಬದುಕಿಗೆ, ನೆಲದ ಪರಂಪರೆಗೆ, ನೆಲದ ವಿಧಿ–ವಿಧಾನಗಳ ಮೂಲಕ ರೂಪುಗೊಂಡ ಮತಗಳಿಗೆ, ಪಂಥಗಳಿಗೆ, ಧರ್ಮಗಳಿಗೆ, ಇದೀಗ “ಆಧುನಿಕ ವಿಜ್ಞಾನದ” ಮೂಲಕ ಬಾಹ್ಯಾಕಾಶದ ಆಯಾಮವೂ ರೂಪುಗೊಳ್ಳುತ್ತಿದೆ. ಹೀಗಾಗಿ ಇದೀಗ ಮತ್ತೊಂದು ನವೀನ ಮಾದರಿಯ “ಪಂಥ”ವೊಂದು ಬೀಜಗೊಳ್ಳುತ್ತಿದೆ ಎನ್ನುವದನ್ನು ಅಧ್ಯಯನ ಮಾಡಬೇಕಿದೆ.

ನಾಲ್ಕನ್ನು ಬಿಚ್ಚಿ ಐದನ್ನು ತೋರಿಸು ಎನ್ನುವ ಸೂತ್ರವಿದೆ. ಮಾನವನನ್ನು ಸದಾ ಸಲಹಿ ಪ್ರಗತಿಯತ್ತ ಸಾಗಲು ಪ್ರೋತ್ಸಾಹಿಸುತ್ತಿರುವ ನಿಸರ್ಗವು ಈ ರಹಸ್ಯವನ್ನು ಸದಾ ತೆರೆದುಕೊಂಡೇ ಇದೆ. ಆದರೆ ಅದನ್ನು ಅರಿತುಕೊಳ್ಳುವ ಸೂಕ್ಷ್ಮ ಸ್ಪಂದನಶೀಲ ಸಂವೇದನಾಯುಕ್ತ ಹೃದಯ ಮತ್ತು ಮನಸ್ಸುಗಳನ್ನು ಮಾನವ ಇನ್ನೂ ರೂಪಿಸಿಕೊಂಡಿಲ್ಲ. ಮಾನವನಿಗೆ ಆ ಪಥದಲ್ಲಿ ಸಾಗಲು ಅನುಕೂಲವಾಗುವಂತೆಯೇ ಶ್ರೀಮಾತೆಯು ಈ ನಾಲ್ಕು ಸ್ವರೂಪಗಳನ್ನು ರೂಪಿಸಿ(ಕೊಂಡಿ)ದ್ದಾಳೆ.

ಮಾನವನ ಮನೋವಿಕಾಸವು ಶಿಕ್ಷಣದ ಮೂಲಕವೇ ಆಗಬೇಕಿದೆ. ಅದಕ್ಕಾಗಿ **ಶಿಕ್ಷಣದ ವ್ಯವಸ್ಥೆ**ಯಲ್ಲಿಯೂ ಭೌತಿಕ ಶಿಕ್ಷಣ, ಪ್ರಾಣಿಕ ಶಿಕ್ಷಣ, ಮಾನಸಿಕ ಶಿಕ್ಷಣ ಮತ್ತು ಆಧ್ಯಾತ್ಮಿಕ ಶಿಕ್ಷಣ ಎಂದು ನಾಲ್ಕು ಹಂತಗಳಿವೆ; ಅದೇ ರೀತಿ **ಮಾನಸಿಕ ಹಂತ**ದಲ್ಲೂ ಕ್ರಿಯಾಶೀಲ ಸ್ಮರಣಶಕ್ತಿ, ಮನಸ್ಸು (ಆರನೇ ಇಂದ್ರಿಯದ ಸ್ಥಾನದಲ್ಲಿ), ಬುದ್ಧಿ ಮತ್ತು ಸಾರ್ವಭೌಮ ವಿವೇಚನಾ ಶಕ್ತಿ ಎಂದು ನಾಲ್ಕು

ಹಂತಗಳಿವೆ; **ದೈವೀ ಸತ್ಯಕ್ಕೂ** ಸಹಿತ ಪ್ರೇಮ–ಜ್ಞಾನ–ಸಾಮರ್ಥ್ಯ–ಸೌಂದರ್ಯ ಎಂದು ನಾಲ್ಕು ಮುಖಗಳ ಸ್ವಯಂಪ್ರೇರಿತ ಅಭಿವ್ಯಕ್ತಿಗಳಿವೆ; ಇದನ್ನು ಸಾಧಿಸಿಕೊಳ್ಳುವ ಸಲುವಾಗಿ ಅವಶ್ಯವಿರುವ **ತಪಸ್ಸು** ಸಹಿತ ಪ್ರೇಮಕ್ಕಾಗಿ ತಪಸ್ಸು, ಜ್ಞಾನಕ್ಕಾಗಿ ತಪಸ್ಸು, ಸಾಮರ್ಥ್ಯಕ್ಕಾಗಿ ತಪಸ್ಸು ಮತ್ತು ಸೌಂದರ್ಯಕ್ಕಾಗಿ ತಪಸ್ಸು ಎಂದು ನಾಲ್ಕು ಹಂತದಲ್ಲಿದೆ; ಇದನ್ನೆಲ್ಲವನ್ನೂ ಮಾನವನು ತನ್ನ ಬದುಕಿನ ಸುಸಂಗತವಾಗಿರುವ ಅನುಭವಗಳ ಮೂಲಕವೇ ಸಾಕ್ಷಾತ್ಕಾರಗೊಳಿಸಿಕೊಳ್ಳುವ ಸಲುವಾಗಿಯೇ **'ಸಪ್ತ ಚತುಷ್ಟಯ'**ಗಳೂ ಇವೆ; ರಾಜಯೋಗ–ಕರ್ಮಯೋಗ–ಜ್ಞಾನಯೋಗ–ಭಕ್ತಿಯೋಗದ ನಾಲ್ಕು ಹಂತಗಳಿಂದಲೇ **"**ಪೂರ್ಣಯೋಗ**"**ವನ್ನು ಅನುಷ್ಠಾನಿಸಿಕೊಳ್ಳುವದಕ್ಕೆ ಸಾಧ್ಯವಾಗುತ್ತದೆ. ಈ ಎಲ್ಲ ನಾಲ್ಕು–ಹಂತಗಳ ಸ್ವರೂಪಗಳನ್ನು ಕಾಣಬಲ್ಲೆವಾದರೆ ಅದು ಸಹಜವಾಗಿಯೇ ನಮ್ಮನ್ನು ವಿಮುಕ್ತಿಯ ಹಂತಕ್ಕೆ ಕರೆದೊಯ್ಯುತ್ತದೆ. ಈ ವಿಮುಕ್ತಿಯೂ ಸಹಿತ ನಾಲ್ಕು ರೀತಿಯಾಗಿದೆ. ಭಾವನಾ ವಿಮುಕ್ತಿ – ನೋವಿನಿಂದ ವಿಮುಕ್ತಿ – ಮಾನಸಿಕ ವಿಮುಕ್ತಿ ಮತ್ತು ಅಜ್ಞಾನದಿಂದ ವಿಮುಕ್ತಿ ಹಂತಗಳನ್ನು ಹೊಂದಿದೆ.

ನಿರಾಕಾರವಾಗಿವೆ ಎಂದು ಪರಿಭಾವಿಸಲಾಗುತ್ತಿರುವ ಈ ತತ್ತ್ವಗಳು, ವಿಶ್ವ ಸತ್ಯಗಳು ಅಥವಾ ಋತದ ಸ್ವರೂಪಗಳು ಈ ನಾಲ್ಕು ಆಯಾಮದ ಹಂತದಲ್ಲಿಯೇ ವಿಕಾಸಗೊಳ್ಳುತ್ತಿರುತ್ತವೆ. ಏಕೆಂದರೆ ವಿಕಾಸದ ಪಥವು ಇದೇ ರೀತಿಯಲ್ಲಿಯೇ ನಿಯತಿಗೊಂಡಿದೆ. ವೈಶ್ವಿಕ ಪ್ರಕೃತಿಯು ತನ್ನ ಭೂಮ ಸ್ವರೂಪವನ್ನು ಪರಿಪೂರ್ಣಗೊಳಿಸಿಕೊಳ್ಳುತ್ತಿರುವ ಈ ರೀತಿಯ ರೂಪಾಂತರಣಗಳು ಉದಿತಗೊಳ್ಳುತ್ತವೆ. ಆ ಭೂಮ–ತತ್ತ್ವದ ಸ್ಪಂದನವನ್ನು ಮೃಣ್ಮಯದ ಬದುಕಿನ ಮೂಲಕವೇ – ಜೀವ ಸ್ವರೂಪ ಪಡೆದುಕೊಳ್ಳುತ್ತವೆ. ಇದು ವೈಶ್ವಿಕ ನಿಯತಿಯೂ ಹೌದು. [ಪಿಪಿಕೆ]



ದೈವವು ತನ್ನನ್ನು ಮಾನವ ಸ್ವರೂಪದಲ್ಲಿ ಪ್ರಕಟಿಸಿಕೊಳ್ಳುತ್ತದೆ, ತಾನು ಹೊರಗೆ ಪ್ರಕೃತಿಯನ್ನು ಧರಿಸಿ ಯಾವ ಮಾರ್ಗದಲ್ಲಿ ಸಾಗಬೇಕೆಂದು ಮನುಷ್ಯ ಜೀವಿಗಳಿಗೆ ತೋರಿಸಿಕೊಳ್ಳುತ್ತದೆ, ಆದರೆ ಇದರಿಂದ ತನ್ನ ದೈವವನ್ನು ಬಿಟ್ಟುಕೊಡುವುದಿಲ್ಲಾ. ದೈವತ್ವದ ಪ್ರಜ್ಞೆ ಬೆಳೆಯುವುದು ಪ್ರಕಟವಾಗುತ್ತದೆ, ಮನುಷ್ಯ ದೈವತ್ವವಾಗಿ ಬದಲಾಗುವುದಿಲ್ಲಾ, ಈ ರೀತಿಯ ಪ್ರಕಟಣೆಯಾಗುತ್ತದೆ. ಶ್ರೀಮಾತೆಯು ಅಂತರಂಗದಲ್ಲಿ ಬಾಲ್ಯದಲ್ಲಿಯೇ ಸಾಮಾನ್ಯ ಮನುಷ್ಯರಿಗಿಂತ ಉನ್ನತ–ಸ್ಥರದಲ್ಲಿದ್ದರು, ಆದುದರಿಂದ ಬಹಳಷ್ಟು ಜನರ ಅಭಿಪ್ರಾಯ ತಪ್ಪಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/31–32 – ಶ್ರೀ ಅರವಿಂದರು**

# ಆದ್ಯಶಕ್ತಿ

**– ಅನುವಾದ: ಪ್ರೊ. ವೀರಭದ್ರಪ್ಪ ಕೆ., ರಾಯಚೂರು**

## ಅದೊಂದು ವಿಶ್ವಾತೀತ ಶಕ್ತಿ

ಶ್ರೀಮಾತೆಯ ನಾಲ್ಕು ಶಕ್ತಿಗಳು ಆಕೆಯ ನಾಲ್ಕು ಅಸಾಧಾರಣ ವ್ಯಕ್ತಿತ್ವದ ಅಂಶಗಳು ಮತ್ತು ಆಕೆಯ ದೈವತ್ವದ ಮೂರ್ತ ರೂಪಗಳು, ಇವುಗಳ ಮುಖಾಂತರ ತನ್ನ ಸೃಷ್ಟಿಯಲ್ಲಿ ಕಾರ್ಯಪ್ರವೃತ್ತಗೊಳ್ಳುತ್ತಾಳೆ, ಕ್ರಮಬದ್ಧತೆ, ಸಾಮರಸ್ಯವನ್ನು ತನ್ನ ಸಾವಿರಾರು ಶಕ್ತಿಗಳ ಮೂಲಕ ಅವುಗಳಲ್ಲಿ ತರುತ್ತಾಳೆ. ಶ್ರೀಮಾತೆ ಮಾತ್ರ ಒಬ್ಬಳೇ ಆದರೂ, ನಮ್ಮ ಮುಂದೆ ಹಲವು ರೂಪಗಳ ಮೂಲಕ ಅವುಗಳಲ್ಲಿ ಬರುತ್ತಾಳೆ; ಹಲವು ಅಂಶಗಳು ಅವಳ ಶಕ್ತಿ ಮತ್ತು ವ್ಯಕ್ತಿತ್ವಗಳು, ಆಕೆಯಿಂದ ಹೊರಹೊಮ್ಮಿದ ಮತ್ತು ವಿಭೂತಿಗಳು ಈ ಜಗತ್ತಿನಲ್ಲಿ ಆಕೆಯ ಕೆಲಸಗಳನ್ನು ಮಾಡುತ್ತವೆ, ನಾವು ಯಾರನ್ನು ಶ್ರೀಮಾತೆಯೆಂದು ಆರಾಧಿಸುತ್ತೇವೆಯೋ, ಅವಳು ದೈವೀಪ್ರಜ್ಞಾಶಕ್ತಿ, ಅದು ಎಲ್ಲಾ ಅಸ್ತಿತ್ವಗಳನ್ನು ಮೀರಿರುತ್ತದೆ, ಆಕೆ ಏಕವಾಗಿದ್ದರೂ, ಆಕೆಯ ಚಲನವಲನಗಳನ್ನು ಬಹಳ ತೀವ್ರ ವೇಗವಾದ ಮನಸ್ಸಿಗೂ, ಮುಕ್ತವಾದ ಮತ್ತು ಬಹಳ ಅಗಾಧವಾದ ಬುದ್ಧಿವಂತಿಕೆಗೂ ಅನುಸರಿಸಲಾಗುವುದಿಲ್ಲಾ. ಶ್ರೀಮಾತೆ ಸರ್ವೋನ್ನತನ ಪ್ರಜ್ಞೆ ಮತ್ತು ಶಕ್ತಿಯಾಗಿದ್ದು ಎಲ್ಲಾ ಜೀವಿಗಳಿಗಿಂತ ಊರ್ಧ್ವದಲ್ಲಿ ಇದ್ದಾಳೆ. ಆದರೆ ಆಕೆಯ ಸ್ವಲ್ಪ ಅಸ್ತಿತ್ವವನ್ನು ಹಲವು ವಿವಿಧ ರೂಪದಲ್ಲಿ ಕಾಣಬಹುದು. ಹೆಚ್ಚು ಗ್ರಹಿಸಬಹುದು, ಏಕೆಂದರೆ ಹೆಚ್ಚು ಸ್ಪಷ್ಟವಾಗಿ ಮತ್ತು ಮಿತಿಯಾದ ಸ್ವಭಾವ ಮತ್ತು ದೇವತೆಯ ರೂಪದ ಕ್ರಿಯೆ ಇಂತಹದರಲ್ಲಿ ಶ್ರೀಮಾತೆ ಅನುಮತಿ ಪಡೆದು ಪ್ರಕಟವಾಗಿ ತನ್ನನ್ನು ಸೃಷ್ಠಿಗೆ ತೋರಿಸಿಕೊಳ್ಳುತ್ತಾಳೆ. ಯಾವ ಪ್ರಜ್ಞಾಶಕ್ತಿ ನಮ್ಮನ್ನು ಮತ್ತು ಈ ಜಗತ್ತನ್ನು ಎತ್ತಿ ಹಿಡಿಯುತ್ತದೆಯೋ, ಅದರೊಂದಿಗೆ ಒಂದಾದಂತಹ ಸಂಪರ್ಕಕ್ಕೆ ಬಂದಾಗ ಶ್ರೀಮಾತೆಯ ಮೂರು ವಿಧದ ಆಯಾಮಗಳು ನಮ್ಮ ಅರಿವಿಗೆ ಬರುತ್ತವೆ. ವಿಶ್ವಾತೀತ, ಮೂಲ ಪರಮೋಚ್ಛ ಶಕ್ತಿಯಾಗಿ, ಆಕೆ ಜಗತ್ತುಗಳನ್ನೆಲ್ಲಾ ಮೀರಿ ನಿಲ್ಲುತ್ತಾಳೆ. ಸೃಷ್ಟಿಯನ್ನು ಮತ್ತು ಎಂದೂ ಪ್ರಕಟವಾಗದಂತಹ ರಹಸ್ಯ ಪರಮೋಚ್ಛನೊಂದಿಗೆ ಜೋಡಿಸುತ್ತಾಳೆ. ವಿಶ್ವವ್ಯಾಪಿ, ವಿಶ್ವಾತ್ಮ ಮಹಾಶಕ್ತಿಯಾಗಿ, ಈಕೆಯು ಎಲ್ಲಾ ಜೀವಿಗಳನ್ನು ಸೃಷ್ಟಿಸುತ್ತಾಳೆ, ಒಳಗೊಳ್ಳುತ್ತಾಳೆ, ಪ್ರವೇಶಿಸುತ್ತಾಳೆ, ಬೆಂಬಲಿಸುತ್ತಾಳೆ ಮತ್ತು ಎಲ್ಲಾ ಲಕ್ಷಾಂತರ ಕ್ರಿಯೆಗಳನ್ನು ಮತ್ತು ಶಕ್ತಿಗಳನ್ನು ನಿರ್ವಹಿಸುತ್ತಾಳೆ. ವ್ಯಕ್ತಿಗತವಾಗಿ, ಆಕೆ ಈ

ಎರಡೂ ವಿಶಾಲವಾದ ಶಕ್ತಿಗಳನ್ನು ಉಪಯೋಗಿಸಿ ತನ್ನ ಅಸ್ತಿತ್ವವನ್ನು ಪ್ರಕಟಿಸುತ್ತಾಳೆ, ಅವುಗಳನ್ನು ಜೀವಂತಿಸುತ್ತಾಳೆ. ನಮ್ಮ ಸಮೀಪ ಮತ್ತು ಮನುಷ್ಯ ವ್ಯಕ್ತಿತ್ವ ಮತ್ತು ದೈವೀ ಪ್ರಕೃತಿ ನಡುವೆ ವ್ಯಕ್ತಿತ್ವಕ್ಕೆ ಸಂಪರ್ಕದ ಸ್ವರೂಪ ವಹಿಸುತ್ತಾಳೆ.

ಅದೊಂದು ಮೂಲ ವಿಶ್ವಾತೀತ ಶಕ್ತಿಯಾಗಿ ಶ್ರೀಮಾತೆ ಜಗತ್ತುಗಳನ್ನೆಲ್ಲಾ ಮೀರಿ ನಿಲ್ಲುತ್ತಾಳೆ ಅವಳೊಳಗೆ ಪರಮೋಚ್ಚ ದೈವದ ಶಾಶ್ವತ ಪ್ರಜ್ಞೆ ಹೊಂದಿದ್ದಾಳೆ. ಏಕಮೇವ, ಆಕೆ ಕೇವಲ ಶಕ್ತಿಗೆ ಮತ್ತು ಅನಿರ್ವಚನೀಯ ಸಾನಿಧ್ಯಕ್ಕೆ ಆಶ್ರಯ ಕೊಡುತ್ತಾಳೆ; ಪ್ರಕಟವಾಗಬೇಕಾದ ಸತ್ಯವನ್ನು ಹೊಂದಿದ್ದಾಳೆ ಅಥವಾ ಕರೆಯುತ್ತಾಳೆ, ಅವಳ ಅನಂತವಾದ ಪ್ರಜ್ಞೆಯ ಬೆಳಕಿನಲ್ಲಿ ಅಡಗಿರುವ ರಹಸ್ಯವನ್ನು ಅವತರಣಗೊಳಿಸಿ ತಂದು ಮತ್ತು ತನ್ನ ಸರ್ವಶಕ್ತವಾದ ಶಕ್ತಿಯ ಮೂಲಕ ಅವುಗಳಿಗೆ ರೂಪಗಳನ್ನು, ತನ್ನ ಸೀಮಾತೀತವಾದ ಪ್ರಾಣದ ಮೂಲಕ, ಪ್ರಾಣಿ ದೇಹಗಳನ್ನು ಈ ಜಗತ್ತಿನಲ್ಲಿ ಕೊಡುತ್ತಾಳೆ. ಸರ್ವೋಚ್ಚನು ಆಕೆಯಲ್ಲಿ ಯಾವಾಗಲೂ ಇರುವಂತಹ ಸಚ್ಚಿದಾನಂದನಾಗಿ ಪ್ರಕಟನಾಗುತ್ತಾನೆ, ಜಗತ್ತಿನಲ್ಲಿ ಏಕನಾಗಿ ಮತ್ತು ಈಶ್ವರ–ಶಕ್ತಿಯಾಗಿ, ಉಭಯ ಪ್ರಜ್ಞೆಯಾಗಿ ಮತ್ತು ಉಭಯ ತತ್ತ್ವಗಳಾದ ಪುರುಷ ಪ್ರಕೃತಿಯಾಗಿ, ಜಗತ್ತಿನಲ್ಲಿ ಮತ್ತು ಅವರ ಶಕ್ತಿಗಳಲ್ಲಿ ಆಕೆ ಅಲ್ಲೆಲ್ಲಾ ಆಕಾರ ತಾಳುತ್ತಾಳೆ. ಈ ಎಲ್ಲವೂ ಗೊತ್ತಿರುವ ಜಗತ್ತಿನಲ್ಲಿ ಮತ್ತು ಗೊತ್ತಿರದ ಜಗತ್ತಿನಲ್ಲಿ ಆ ಸರ್ವೋಚ್ಚನೊಂದಿಗಿನ ಆಕೆಯ ಲೀಲೆಯಾಗಿದೆ; ಶಾಶ್ವತನ ರಹಸ್ಯವನ್ನು ಮತ್ತು ಅನಂತನ ಪವಾಡಗಳು ಆಕೆಯ ದೈವೀ ಪ್ರಜ್ಞಾಶಕ್ತಿಯ ಅಂಗಗಳೇ ಆಗಿವೆ. ಆಕೆಯ ನಿರ್ಧಾರ ಮತ್ತು ಪರಮೋಚ್ಚನ ಸಮ್ಮತಿ ಇಲ್ಲದಿದ್ದರೆ, ಇಲ್ಲಿ ಅಥವಾ ಎಲ್ಲಿಯೋ ಆಗಲಿ ಏನು ಇರಲು ಸಾಧ್ಯವಿಲ್ಲಾ; ಆಕೆಯ ಪ್ರೇರಣೆ ಪರಮೋಚ್ಚನ ಒಪ್ಪಿಗೆಯಿಂದ ಮಾತ್ರ ಏನಾದರು ರೂಪಗೊಳ್ಳಲು ಸಾಧ್ಯ. ಆಗ ಆಕೆ ಬೀಜವನ್ನು ಬಿತ್ತಿ ತನ್ನ ಸೃಷ್ಟಿಯ ಆನಂದವನ್ನು ಪಡೆಯುತ್ತಾಳೆ.

ಮಹಾಶಕ್ತಿ, ವಿಶ್ವಾತ್ಮಕ ಮಾತೆ, ಪರಮೋಚ್ಚನಿಂದ ಪ್ರಸರಿಸಿದ ವಿಶ್ವಾತೀತ ಪ್ರಜ್ಞೆಯಿಂದ ಕೆಲಸ ಮಾಡುತ್ತಾಳೆ ಮತ್ತು ತಾನು ಮಾಡಿದ ಜಗದೊಳಗೆ ಪ್ರವೇಶಿಸುತ್ತಾಳೆ; ಆಕೆಯ ಸಾನಿಧ್ಯ ಮತ್ತು ಬೆಂಬಲ ದೈವೀ ಚೈತನ್ಯದೊಂದಿಗೆ ತುಂಬುತ್ತದೆ ಮತ್ತು ಎಲ್ಲವನ್ನು ತಾಳಿಕೊಳ್ಳುವ ಶಕ್ತಿ ಮತ್ತು ಆನಂದವಿಲ್ಲದ್ದಿದ್ದರೆ ಅವುಗಳು ಅಸ್ತಿತ್ವದಲ್ಲಿರುತ್ತಿರಲಿಲ್ಲಾ. ನಾವು ಯಾವುದನ್ನು ಪ್ರಕೃತಿಯೆಂದು ಕರೆಯುತ್ತೇವೆಯೋ ಅದು ಆಕೆಯ, ಬಹಳ ಬಹಿರಂಗದ ಕಾರ್ಯ ನಿರ್ವಾಹಕ ಅಂಶವಾಗಿದೆ; ಆಕೆ ತನ್ನ ಶಕ್ತಿ ಮತ್ತು ಕ್ರಿಯೆಗಳನ್ನು ಸಾಮರಸ್ಯದಿಂದ ಅಣಿಗೊಳಿಸಿ

ಸಜ್ಜು ಮಾಡುತ್ತಾಳೆ. ಪ್ರಕೃತಿಯು ಮಾಡುವ ಕೆಲವು ರಹಸ್ಯವಾದ ಅಥವಾ ಪ್ರಕಟವಾಗಿ ಕಾಣುವ ಅಥವಾ ಜೀವನದಲ್ಲಿ ಕಾಣುವ ಕ್ರಿಯೆಗಳಿಗೆ ಆಕೆ ಒತ್ತಾಯಿಸುತ್ತಾಳೆ. ಪ್ರತಿಯೊಂದು ಜಗತ್ತು ಆ ಮಹಾಶಕ್ತಿಯ ಒಂದು ಲೀಲೆ, ವಿಶ್ವಾತೀತದ ವಿಶ್ವಾತ್ಮಕ ಆತ್ಮ ಮತ್ತು ವ್ಯಕ್ತಿತ್ವವಾಗಿ ಆಕೆ ಇರುತ್ತಾಳೆ. ಎಲ್ಲವನ್ನೂ ಆಕೆಯ ದೂರದೃಷ್ಟಿಯಲ್ಲಿ ಕಂಡಿದ್ದಾಳೆ, ಆಕೆಯ ಸುಂದರವಾದ ಹೃದಯದಲ್ಲಿ ಮತ್ತು ಶಕ್ತಿಯಲ್ಲಿ ತೆಗೆದುಕೊಂಡು ಮತ್ತು ತನ್ನ ಆನಂದದಲ್ಲಿ ಸೃಷ್ಟಿಸುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/14–15**

**ಆದ್ಯಶಕ್ತಿ**

ಆದ್ಯಶಕ್ತಿಯು ಮೂಲಶಕ್ತಿ, ಆದುದರಿಂದ ಶ್ರೀಮಾತೆಯ ಉನ್ನತ ರೂಪ. ಯಾರು ಯಾವ ಸ್ಥರದಲ್ಲಿದ್ದು ಆಕೆಯನ್ನು ನೋಡುತ್ತಾರೆಯೋ ಅದೇ ರೀತಿಯಾಗಿ ಪ್ರಕಟವಾಗುತ್ತಾಳೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/66 – ಶ್ರೀ ಅರವಿಂದರು**

*ಶ್ರೀಮಾತೆ, ಯಾವಾಗ ದೈವವು ತನ್ನ ಮೇಲೆ ಮನುಷ್ಯರ ಕಷ್ಟಗಳನ್ನು......*

ಹೌದು.....

*......ಈ ರೀತಿಯ ಕಷ್ಟಗಳು ನಮ್ಮ ಮೇಲೆ ಆದಂತೆ ಆತನ ಮೇಲೂ ಕೂಡ ಆಗುತ್ತವೆಯೋ? ಅದೇನೆಂದರೆ, ನಮಗೆ ನೋವು ಮತ್ತು ದುಃಖ ಸಂವೇದಿಸಿದ ಹಾಗೆ ಆತನಿಗೂ ಕೂಡ?*

ಇಲ್ಲಾ! ನಾನು ಹೇಳುತ್ತೇನೆ, ಇಲ್ಲಾ! ಸ್ಪಷ್ಟವಾಗಿ ಹೇಳಬೇಕೆಂದರೆ ಅಜ್ಞಾನದ ಸ್ಥಿತಿಗೂ ಮತ್ತು ಜ್ಞಾನದ ಸ್ಥಿತಿಗೂ ಅಪಾರವಾದ ವ್ಯತ್ಯಾಸವಿದೆ. ಏನೋ ಒಂದು ನೋವಿನ ಘಟನೆ ನಿಮಗಾಗುತ್ತದೆ, ಅಂದುಕೊಳ್ಳೋಣ; ಇದು ಅಜ್ಞಾನದಲ್ಲಿ ಈ ನೋವಿನ ಸಂಗತಿ ನಿರ್ದಿಷ್ಟವಾದ ವೈಶಿಷ್ಟ್ಯವನ್ನು ಪಡೆಯುತ್ತದೆ. ಆದರೆ ಈ ನೋವಿನ ಸಂಗತಿಯನ್ನು ಜ್ಞಾನದ ಸ್ಥಿತಿಯಲ್ಲಿ ಪಡೆದಿದ್ದೆ ಆದರೆ, ಅದೇ ಪರಿಣಾಮವನ್ನು ಬೀರುವುದಿಲ್ಲಾ. ಭೌತಿಕ ಸಂಗತಿಯನ್ನೇ ತೆಗೆದುಕೊಳ್ಳೋಣ, ಒಂದು ಭೌತಿಕ ಹೊಡೆತ, ಒಂದು ಒಳ್ಳೆ ಹೊಡೆತ ಈ ರೀತಿ (ಭಾವಾಭಿನಯ).

ಸರಿ, ಯಾವಾಗ ಯಾರು ಸಾಮಾನ್ಯವಾದ ಮನುಷ್ಯ ಸ್ಥಿತಿಯ ಅಜ್ಞಾನದಲ್ಲಿದ್ದಾಗ ಏಟು ಬೀಳುತ್ತದೆಯೋ ಅದು ಪೂರ್ಣ ಪ್ರಭಾವಬೀರುತ್ತೆ. ಅದು ಪ್ರತ್ಯೇಕವಾಗಿ ಹಿಂಸೆಯ ಮೇಲೆ ಯಾವುದು ಹೊಡೆತ ಕೊಟ್ಟಿದೆ ಮತ್ತು ಯಾರು ಅದನ್ನು ಸ್ವೀಕರಿಸಿದರು ಎನ್ನುವುದರ ಮೇಲೆ ಅವಲಂಬಿಸಿರುತ್ತದೆ. ಆದರೆ ಅದೇ ಹೊಡೆತ ಅದೇ ರೀತಿಯಾಗಿ ಅಜ್ಞಾನದ ಬದಲಾಗಿ ಜ್ಞಾನವಂತ ಜೀವಿಗೆ ಬಿದ್ದರೆ, ತತ್‌ಕ್ಷಣ ದೇಹದ ಪ್ರತಿಕ್ರಿಯೆ ಹೇಗಿರುತ್ತದೆ.. ಪರಿಣಾಮ... ಪರಿಣಾಮವನ್ನು ಕಡಿಮೆಯಾಗಿಸುತ್ತದೆ. ಮತ್ತು ಇದೊಂದು ಸಧೃಡ ಸತ್ಯಾಂಶ! ಇದು ಎಲ್ಲಿಯ ತನಕ ಹೋಗುತ್ತದೆಯೆಂದರೆ ಕೆಲವು ಸಲ ಪರಿಣಾಮವನ್ನು ಒಟ್ಟಾಗಿ ಅಳಿಸಿಹಾಕುತ್ತದೆ. ಅದು ಅಷ್ಟೊಂದು ಮುಂದುವರೆಯುತ್ತದೆ; ಅದೇನೆಂದರೆ, ಅದು ಪರಿಣಾಮವನ್ನು ಅಳಿಸಿಹಾಕುತ್ತದೆ. ಏಕೆಂದರೆ ಪ್ರತಿಕ್ರಿಯೆಯು ಅಜ್ಞಾನದ್ದಾಗಿರದೆ ಪ್ರತಿಕ್ರಿಯೆಯು ಜ್ಞಾನದ್ದಾಗಿರುತ್ತದೆ. ಆದ ಕಾರಣ ಎರಡು ಒಂದೇ ರೀತಿಯದ್ದಾಗಿರುವುದಿಲ್ಲಾ.

ನೈತಿಕತೆಯ ಸಂಗತಿಗಳಲ್ಲಿ ಇದು ಸ್ವಲ್ಪ ಸ್ಪಷ್ಟವಾಗಿರುತ್ತದೆ, ನೀವು ನೋಡಬಹುದು, ಭಾವನಾತ್ಮಕ ಆಘಾತ ಪಡೆಯುವದರ ಬದಲಾಗಿ, ಉದಾಹರಣೆಗೆ, ಸಾಮಾನ್ಯವಾದ ಅಹಂಕಾರದ ಕುರುಡು ಭಾವನೆಗಳಲ್ಲಿ, ವಸ್ತುನಿಷ್ಠಗೊಳಿಸಿ, ಅದೇನೆಂದು ನೋಡುತ್ತದೆ, ಕಂಪನಗಳಲ್ಲಿ ಸಂಯೋಜಿಸಿ ನೋಡುತ್ತದೆ; ತತ್‌ಕ್ಷಣ ಅದರ ಮೇಲೆ ಪ್ರಕಾಶ, ಜ್ಞಾನ ಮತ್ತು ಸತ್ಯವನ್ನು ಹರಡುತ್ತದೆ, ಮತ್ತು ಎಲ್ಲಾ ಸಂಗತಿಗಳನ್ನು ಮೂಲ ಸ್ಥಾನಗಳಲ್ಲಿ ಮರು ಸ್ಥಾಪಿಸುತ್ತದೆ. ಅದು ತಾನೇ ತಾನಾಗುತ್ತದೆ. ಆದರೆ ನಾನು ಒತ್ತುಕೊಟ್ಟು ಹೇಳುವದೆಂದರೆ, ಭೌತಿಕ ದೇಹದ ಮೇಲೂ ಮತ್ತು ಹೆಚ್ಚಾಗಿ ಭೌತಿಕ ರೀತಿಯಲ್ಲಿ, ಪರಿಣಾಮ ಒಂದೇ ಆಗಿದ್ದಾಗ, ದೈವವು ಕೆಟ್ಟ ಸಂಗತಿಗಳನ್ನು ತನ್ನ ಮೇಲೆ ತೆಗೆದುಕೊಂಡಾಗ ಅದಕ್ಕೇನು ಸಂತೋಷದ ಪರಿಣಾಮವಾಗುವುದಿಲ್ಲಾ! ಅವು ಏನಾಗಿದ್ದಾವೋ ಅವೇ ಆಗಿರುತ್ತವೆ, ಮತ್ತು ಜಗತ್ತು ಹೇಗೆ ಇತ್ತೋ ಹಾಗೆಯೇ ಮುಂದುವರಿಯುತ್ತದೆ. ಇದು ಏಕೆಂದರೆ ಅವನಿಗೆ ಪರಿವರ್ತಿಸುವ ಶಕ್ತಿಯಿರುವ ಕಾರಣದಿಂದ ಅಸ್ಪಷ್ಟ ಕಂಪನಗಳನ್ನು ಪ್ರಕಾಶಮಾನವಾದ ಕಂಪನಗಳನ್ನಾಗಿ ಮಾಡಿಕೊಂಡು ಎಲ್ಲವನ್ನು ತನ್ನ ಮೇಲೆ ತೆಗೆದುಕೊಳ್ಳುತ್ತಾನೆ. ಇಲ್ಲವೆಂದರೆ, ಇದೆಲ್ಲಾ ಅನುಪಯೋಗಿ ಆಗುತ್ತಿತ್ತು, ಆದರೆ, ಇದು ಅಸಾಧ್ಯ, ಇದೊಂದು ಅಸಂಗತ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/286–88 – ಶ್ರೀಮಾತೆ**

# ಶ್ರೀಮಾತೆಯ ನಾಲ್ಕು ಮಹದ್ ಸ್ವರೂಪಗಳು

**– ಅನುವಾದ: ಡಾ॥ ಕೆ.ಎಸ್. ಆಮೂರ**

ಪರಾಮಾತೆಯ ನಾಲ್ಕು ಸಾಮರ್ಥ್ಯಗಳು ಆಕೆಯ ನಾಲ್ಕು ಪ್ರಮುಖ ವ್ಯಕ್ತ ರೂಪಗಳಾಗಿವೆ, ಅವು ಆಕೆಯ ದಿವ್ಯತ್ವದ ಅಂಶಗಳು ಮತ್ತು ಮೂರ್ತ ಸ್ವರೂಪಗಳು. ಅವುಗಳ ಮುಖಾಂತರವೇ ಆಕೆ ತನ್ನ ಪ್ರಾಣಿಕೋಟಿಗಳನ್ನು ಪರಿಪಾಲಿಸುತ್ತಾಳೆ, ಅವುಗಳ ಮುಖಾಂತರವೇ ಲೋಕ ಲೋಕಾಂತರಗಳಲ್ಲಿಯ ತನ್ನ ಸೃಷ್ಟಿ ಜಾಲಗಳನ್ನು ಈ ನಾಲ್ಕು ಮೂರ್ತ ಸ್ವರೂಪಗಳ ಮುಖಾಂತರವೇ ಕ್ರಮಗೊಳಿಸಿ ಸಾಮರಸ್ಯವನ್ನುಂಟುಮಾಡುತ್ತಾಳೆ ಹಾಗೂ ತನ್ನ ಸಹಸ್ರ ಮುಖ ಶಕ್ತಿಗಳಿಗೆ ಕರ್ಮ ಪ್ರವರ್ತನೆಯನ್ನು ನಿರ್ದೇಶಿಸುತ್ತ ಇರುತ್ತಾಳೆ. ಪರಾಮಾತೆಯ ಚತುರ್ವಿಧ ಬೃಹದ್ರೂಪಗಳೂ, ಆಕೆಯ ಚತುರ್ವಿಧ ಪ್ರಮುಖ ಸಾಮರ್ಥ್ಯಗಳೂ, ವ್ಯಕ್ತ ರೂಪಗಳೂ ಈ ವಿಶ್ವದ ಪಾರ್ಥಿವ ಲೀಲಾ ವ್ಯಾಪಾರಗಳ ಪರಿಚಾಲನೆಗೆಂದು ಪ್ರಕಟವಾಗಿ ಬಂದು ನಿಂತಿವೆ.

ಆಕೆಯ ಒಂದು ವ್ಯಕ್ತ ರೂಪವು ಪ್ರಶಾಂತ ವಿಶಾಲತೆ, ಸರ್ವಗ್ರಾಹಿ ಪರಿಜ್ಞಾನ, ಶಾಂತ ದಯಾಪರತೆ, ಅಪಾರ ಕಾರುಣ್ಯ, ಸರ್ವ ಪರಮಾಧಿಕಾರದ ಸರ್ವ ಶ್ರೇಷ್ಠವಾದ ರಾಜದರ್ಪ ಹಾಗೂ ಸರ್ವಶಾಸಕ ಅಧಿಪತ್ಯ ಇವುಗಳಿಂದ ಕೂಡಿದ್ದಾಗಿದೆ. ಇನ್ನೊಂದು ಆಕೆಯ ಭವ್ಯ ಬಲದ ಸಾಮರ್ಥ್ಯದಿಂದ, ಅಪ್ರತಿರೋಧ್ಯ ರಾಗಾವೇಶದಿಂದ, ರಣೋತ್ಸಾಹದಿಂದ, ಸರ್ವಂಜಯ ಸಂಕಲ್ಪದಿಂದ, ಕ್ಷಿಪ್ರವಾದ ಖರವೇಗದಿಂದ ಹಾಗೂ ಪ್ರಳಯಾಂತಕ ಪ್ರತಾಪದಿಂದ ಮೂರ್ತರೂಪಗೊಂಡದ್ದಾಗಿದೆ. ಮೂರನೆಯದು ಆಕೆಯ ಚಲ್ವಿಕೆಯ ನಿಗೂಢ ರಹಸ್ಯದಿಂದ, ಸಾಮರಸ್ಯ, ಛಂದಲಾಲಿತ್ಯದಿಂದ ಹಾಗೂ ಲವಲವಿಕೆಯ ಮಾಧುರ್ಯದಿಂದ ಕೂಡಿದ್ದಾಗಿದೆ, ಆಕೆಯ ಗಹನ ಸೂಕ್ಷ್ಮ ಸಿರಿತನ, ಬರಸೆಳೆವ ಆಕರ್ಷಕತೆ, ಮನಸೆಳೆವ ಸುಕುಮಾರತೆಗಳು ವಿಸ್ಮಯಕರವಾಗಿವೆ. ನಾಲ್ಕನೆಯದು ಆಮೂಲಾಗ್ರ ಜ್ಞಾನದ, ಹತ್ತಿರದ ಹಾಗೂ ಗಾಢವಾದ ಸಾಮರ್ಥ್ಯ, ಕಾಳಜಿಪೂರ್ವಕವಾಗಿ ಕೈಕೊಳ್ಳುವ ತಪ್ಪರಿಯದ ಕಾರ್ಯ ಕೌಶಲ, ಮತ್ತು ಎಲ್ಲಾ ವಿಷಯಗಳಲ್ಲಿ ಪ್ರಶಾಂತವಾದ ಹಾಗೂ ನಿಖರವಾದ ಪರಿಪೂರ್ಣತೆ ಇವುಗಳಿಂದ ಸುಸಜ್ಜಿತವಾಗಿದೆ.

ದೈವೀ ಪರಿಜ್ಞಾನ, ದೈವೀ ಬಲ, ದೈವೀ ಸಾಮರಸ್ಯ ಹಾಗೂ ದೈವೀ ಪರಿಪೂರ್ಣತೆ ಇವು ಆ ನಾಲ್ಕು ವ್ಯಕ್ತ ರೂಪಗಳ ನಾನಾ ವಿಧ ಲಕ್ಷಣಗಳಾಗಿವೆ ಮತ್ತು ಈ ಸಾಮರ್ಥ್ಯಗಳನ್ನೇ ಆ ವ್ಯಕ್ತ ರೂಪಗಳು ತಮ್ಮ ಸಂಗಡ ಜಗತ್ತಿನಲ್ಲಿ ತಂದು ಮಾನವ ರೂಪದಲ್ಲಿದ್ದ ತಮ್ಮ ತಮ್ಮ ವಿಭೂತಿಗಳಲ್ಲಿ ಇವುಗಳನ್ನು ಪ್ರಕಟಿಸುತ್ತ ಇರುವುದುಂಟು. ಪರಾಮಾತೆಯ ಈ ನಾಲ್ಕು ಅಭಿವ್ಯಕ್ತ ಸಾಮರ್ಥ್ಯಗಳಿಗೆ ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ ಹಾಗೂ ಮಹಾಸರಸ್ವತಿ ಎಂಬ ಶ್ರೇಷ್ಠ ಹೆಸರುಗಳನ್ನು ಕೊಡುತ್ತೇವೆ.



## ಮಾಹೇಶ್ವರಿ

ರಾಜರಾಜೇಶ್ವರಿಯಾದ ಮಹೇಶ್ವರಿಯು ಯೋಚನಾಪರ ಮನಸ್ಸು ಹಾಗೂ ಸಂಕಲ್ಪ ಇವುಗಳ ಮೇಲ್ಗಡೆಯ ವಿಶಾಲತೆಯಲ್ಲಿ ವಿರಾಜಮಾನಳಾಗಿದ್ದಾಳೆ, ಮತ್ತು ಇವೆರಡೂ ವೃತ್ತಿಗಳನ್ನು ಆಕೆ ಜ್ಞಾನದ ಮತ್ತು ವಿಸ್ತೀರ್ಣದ ಘನತೆಗೆ ಎತ್ತರಿಸುತ್ತಾಳೆ, ಅಥವಾ ಅವು ಆಚೆಗಿರುವ ತೇಜಸ್ಸಿನಿಂದ ತುಂಬಿಕೊಳ್ಳುವಂತೆ ಮಾಡುತ್ತಾಳೆ. ಏಕೆಂದರೆ ಆಕೆ ಶಕ್ತಿಶಾಲಿನಿಯಾದ, ಜ್ಞಾನ ಸ್ವರೂಪಿಣಿಯಾದ ಏಕೇಶ್ವರಿಯು. ಆಕೆ ಅತಿಮಾನಸದ ಅನಂತತೆಗಳತ್ತ, ವಿಶ್ವವ್ಯಾಪಕ ವಿಸ್ತೀರ್ಣತೆಯತ್ತ, ಪರಂಜ್ಯೋತಿಯ ಮಹಿಮೆಯತ್ತ, ಅಲೌಕಿಕ ಜ್ಞಾನದ ಭಾಂಡಾರದತ್ತ ಮತ್ತು ತನ್ನ ಅಪರಿಮೇಯ ಚಿರಂತನ ಶಕ್ತಿಗಳ ವ್ಯಾಪಾರದತ್ತ ತಮ್ಮನ್ನು ತೆರೆದಿರಿಸುತ್ತಾಳೆ.

ಪ್ರಶಾಂತಳಾಗಿರುವ ಹಾಗೂ ಅದ್ಭುತಳಾಗಿರುವ ಆಕೆ ಎಂದೆಂದಿಗೂ ಮಹಿಮಾನ್ವಿತಳೂ, ಸ್ಥಿರಳೂ ಆಗಿದ್ದಾಳೆ. ಯಾವುದೂ ಅವಳನ್ನು ಅಲುಗಿಸಲಾರದು, ಏಕೆಂದರೆ ಜ್ಞಾನ ಸರ್ವಸ್ವವೂ ಆಕೆಯಲ್ಲಿ ಮನೆ ಮಾಡಿದೆ. ಆಕೆ ತಿಳಿಬಯಸಿದ್ದಾವುದೂ ಆಕೆಯಿಂದ ಮರೆಯಾಗಿ ಇರಲಾರದು. ಸಮಸ್ತ ವಸ್ತು–ವಿಷಯಗಳನ್ನೂ, ಎಲ್ಲ ಸತ್ತೆಗಳನ್ನೂ ಹಾಗೂ ಸ್ವಭಾವವನ್ನೂ, ಅವುಗಳನ್ನು ಯಾವುದು ಚಲಿಸುವಂತೆ ಮಾಡುತ್ತದೆಂಬುದನ್ನೂ, ಜಗತ್ತಿನ ನಿಯಮವನ್ನೂ ಮತ್ತು ಅದರ ಕಾಲಗತಿಗಳನ್ನೂ ಆಕೆ ಬಲ್ಲಳು. ಹಾಗೆಯೇ ಹಿಂದೆ ಎಲ್ಲವೂ ಯಾವ ಬಗೆಯದಾಗಿತ್ತು, ಇಂದು ಹೇಗಿದೆ ಮತ್ತು ಮುಂದೆ ಹೇಗಿರತಕ್ಕದ್ದು ಎಂಬುದೆಲ್ಲವೂ ಅವಳಿಗೆ ಅವಗತವಿದೆ.

ಎಲ್ಲವನ್ನೂ ಎದುರಿಸಿ ಎಲ್ಲದರ ಅಧೀಶ್ವರಿಯಾಗಬಲ್ಲ ಬಲ ಆಕೆಯಲ್ಲುಂಟು, ಅವಳ ವಿಶಾಲವಾದ, ಗ್ರಹಿಸಲಸದಳವಾದ ಪರಿಜ್ಞಾನ ಹಾಗೂ ಪ್ರಶಾಂತ ಸಾಮರ್ಥ್ಯಗಳನ್ನು ಪ್ರತಿಭಟಿಸಿ ಯಾರೂ ಕೊನೆಗೆ ಜಯಶಾಲಿಯಾಗಲಾರರು. ಸಮದರ್ಶಿಯೂ, ಸಹನಶೀಲಳೂ, ಸ್ಥಿರ ಸಂಕಲ್ಪವುಳ್ಳವಳೂ ಆದ ಆಕೆ ಮಾನವರ ಜೊತೆಗೆ ಅವರವರ ಸ್ವಭಾವಕ್ಕೆ ಅನುಗುಣವಾಗಿ ವ್ಯವಹರಿಸುತ್ತಾಳೆ.

ಪಕ್ಷಪಾತದ ಲವಲೇಶವೂ ಆಕೆಯಲ್ಲಿಲ್ಲ, ಆದರೆ ಆಕೆಯು ಪರಮೋಚ್ಚನ ಶಾಸನವನ್ನು ಅನುಸರಿಸುತ್ತಾಳೆ: ಕೆಲವರನ್ನು ಉದ್ಧರಿಸುತ್ತಾಳೆ, ಇನ್ನು ಕೆಲವರನ್ನು ಅಧೋಗತಿಗೆ ಅಟ್ಟುತ್ತಾಳೆ ಇಲ್ಲವೆ ತನ್ನಿಂದ ದೂರದಬ್ಬಿ ಅಂಧಕಾರದಲ್ಲಿ ತಳ್ಳುತ್ತಾಳೆ. ವಿವೇಕಿಗಳಾದವರಿಗೆ ಮತ್ತಷ್ಟು ಘನತರವಾದ ಹಾಗೂ ದೇದೀಪ್ಯಮಾನವಾದ ಜ್ಞಾನದಾನ ಮಾಡುತ್ತಾಳೆ, ದರ್ಶನ ದೃಷ್ಟಿಯುಳ್ಳವರಿಗೆ ತನ್ನ ಮಂತ್ರಾಲೋಚನೆಗಳಿಗೆ ಅವಕಾಶ ನೀಡುತ್ತಾಳೆ, ವಿರೋಧಿಗಳಾದವರಿಗೆ, ಅವರು ತಮ್ಮ ವಿರೋಧದ ಫಲವನ್ನು ಅನುಭವಿಸಲು ಬಿಟ್ಟುಕೊಡುತ್ತಾಳೆ; ಜ್ಞಾನ ಶೂನ್ಯರನ್ನೂ, ಮೂಢರನ್ನೂ ಅವರವರ ಕುರುಡುತನಕ್ಕೆ ಅನುಗುಣವಾಗಿ ಕರೆದೊಯ್ಯುತ್ತಾಳೆ.

ಆಕೆ ಪ್ರತಿಯೊಬ್ಬ ಮಾನವನಲ್ಲಿ ಅವನ ಸ್ವಭಾವದ ಭಿನ್ನ ಅಂಶಗಳನ್ನು, ಅವುಗಳ ಆವಶ್ಯಕತೆಗಳು ಹಾಗೂ ಹಂಬಲಗಳಿಗನುಸಾರವಾಗಿ ಅವುಗಳ ಮೇಲೆ ಒತ್ತಡ ಹೇರುತ್ತಾಳೆ ಇಲ್ಲವೆ ಅವುಗಳಿಗೆ ಪ್ರಿಯವಾದ ಸ್ವಾತಂತ್ರ್ಯಕ್ಕೆ ಎಡೆಮಾಡಿಕೊಟ್ಟು ಅವಿದ್ಯೆಯ ಮಾರ್ಗದಲ್ಲಿ ಏಳ್ಗೆ ಹೊಂದಲು ಇಲ್ಲವೆ ನಾಶವಾಗಲು ಬಿಟ್ಟು ಕೊಡುತ್ತಾಳೆ.

ಏಕೆಂದರೆ ವಿಶ್ವದಲ್ಲಿ ಆಕೆ ಯಾವುದರ ಬಂಧನಕ್ಕೂ ಒಳಗಾಗಿರುವುದಿಲ್ಲ, ಯಾವುದರಲ್ಲೂ ಆಸಕ್ತಳಾಗಿರುವುದಿಲ್ಲ, ಆದರೂ ವಿಶ್ವಮಾತೆಯ ಮಾತೃ ಹೃದಯವು ಇನ್ನುಳಿದವರಲ್ಲಿರುವುದಕ್ಕಿಂತ ಮಿಗಿಲಾಗಿ ಆಕೆಯಲ್ಲಿದೆ.

ಅಸುರರು, ಪಿಶಾಚಿಗಳು, ವಿದ್ರೋಹಿಗಳು, ವಿರೋಧಿಗಳು ಹೀಗೆ ಎಲ್ಲರೂ ಆಕೆಯ ದೃಷ್ಟಿಯಲ್ಲಿ ಆಕೆಯ ಮಕ್ಕಳೇ ಆಗಿದ್ದಾರೆ, ಆ ಏಕಮಾದ್ವಿತೀಯದ ಅಂಶಗಳೇ ಆಗಿದ್ದಾರೆ. ಆಕೆಯ ನಿರಾಕರಣೆಗಳು ಮುಂದೂಡಿಕೆಗಳು ಮಾತ್ರವಾಗಿರುತ್ತವೆ.

ಅವಳ ಕಾರುಣ್ಯವು ಆಕೆಯ ವಿವೇಕವನ್ನು ಕುರುಡಾಗಿಸುವುದಿಲ್ಲ ಇಲ್ಲವೆ ಪೂರ್ವನಿರ್ದಿಷ್ಟ ಪಥದಿಂದ ಅವಳ ಕಾರ್ಯವನ್ನು ದಾರಿ ತಪ್ಪುವಂತೆ ಮಾಡುವುದಿಲ್ಲ, ಏಕೆಂದರೆ ವಸ್ತು–ವಿಷಯಗಳ ಸತ್ಯವಷ್ಟೇ ಅವಳಿಗೆ ಸಂಬಂಧಿಸಿದ ವಿಷಯ, ಜ್ಞಾನ ಅವಳ ಸಾಮರ್ಥ್ಯದ ಕೇಂದ್ರ, ಮತ್ತು ನಮ್ಮ ಆತ್ಮಗಳನ್ನು, ಸ್ವಭಾವಗಳನ್ನು ದೈವೀ ಸತ್ಯದಲ್ಲಿ ಪುನರ್ನಿರ್ಮಾಣ ಮಾಡುವುದೇ ಅವಳ ಮಣಿಹ ಮತ್ತು ಶ್ರಮ.



**ಮಹಾಕಾಳಿ**

ಮಹಾಕಾಳಿಯ ಸ್ವಭಾವವು ಬೇರೆ ಬಗೆಯದು. ಆಕೆಯ ಸಾಮರ್ಥ್ಯ ವಿಶೇಷವು ವ್ಯಾಪಕತೆಯಲ್ಲ, ಉತ್ತುಂಗತೆ, ಜ್ಞಾನವಲ್ಲ ಆದರೆ ಬಲ ಹಾಗೂ ಶಕ್ತಿ, ಸಹಿಸಲಾಸಧ್ಯವಾದ ತೀವ್ರತೆ, ಕಾರ್ಯಸಿದ್ಧಿಯ ಪ್ರಚಂಡ ಭಾವೋದ್ರೇಕ,

ಪ್ರತಿಯೊಂದು ಅಡೆತಡೆಯನ್ನು ಕೊಚ್ಚಿಹಾಕುವ ದೈವೀ ಉಗ್ರ ಪ್ರತಾಪ ಆಕೆಯಲ್ಲುಂಟು. ಆಕೆಯ ಎಲ್ಲ ದಿವ್ಯತ್ವ ಬಿರುಗಾಳಿಯಂತಹ ಭವ್ಯತೆಯಿಂದ ಕೂಡಿದ ಕಾರ್ಯಕ್ಕೆ ಪುಟಿದೇಳುತ್ತದೆ. ಆಕೆಯದು ಶೀಘ್ರ, ಕೂಡಲೆ ಪರಿಣಾಮಕಾರಿಯಾಗುವ ವಿಧಾನ, ರಭಸದ ಹಾಗೂ ನೇರ ಹೊಡೆತ, ತನ್ನೆದುರಿಗಿರುವ ಎಲ್ಲವನ್ನೂ ಕೊಂಡೊಯ್ಯಲು ಮುಂಚೂಣಿಯ ಆಕ್ರಮಣ.

ಅಸುರನಿಗೆ ಆಕೆಯ ಮುಖವು ಭೀಕರವಾದುದು, ದೇವ ದ್ರೋಹಿಗಳ ಬಗ್ಗೆ ಆಕೆಯ ಮನೋಭಾವ ಮರುಕವಿಲ್ಲದ್ದು ಮತ್ತು ಭಯಂಕರವಾದದ್ದು, ಏಕೆಂದರೆ ಆಕೆ ರಣಾಂಗಣದಿಂದ ಎಂದೂ ಹಿಂದೆಗೆಯದ ಲೋಕಾನೇಕಗಳ ರಣಚಂಡಿಯಾಗಿದ್ದಾಳೆ. ಲೋಪದೋಷಗಳನ್ನು ಆಕೆ ಸಹಿಸಿಕೊಳ್ಳುವುದಿಲ್ಲವಾದ ಕಾರಣದಿಂದ ಮಾನವನಲ್ಲಿ ಪ್ರತಿಕೂಲವಾಗಿರುವುದನ್ನು ಕುರಿತು ಬಿರುಸಿನಿಂದ ವ್ಯವಹರಿಸುತ್ತಾಳೆ. ಹಟಮಾರಿತನ, ಅಜ್ಞಾನ ಹಾಗೂ ಮಬ್ಬುತನಗಳಿಂದ ಕೂಡಿದ ಎಲ್ಲದರ ಬಗ್ಗೆ ಅವಳ ವರ್ತನೆ ನಿರ್ದಾಕ್ಷಿಣ್ಯದಿಂದ ಕೂಡಿರುತ್ತದೆ, ದ್ರೋಹ, ಮಿಥ್ಯಾಚಾರ, ಪರಮ ದ್ವೇಷ ಇವುಗಳ ವಿರುದ್ಧ ಆಕೆಯ ರೋಷವು ಕೂಡಲೆ ಕೆರಳಿ ರುದ್ರರೂಪ ತಾಳುತ್ತದೆ. ಕೆಡುಕಿನ ಭಾವನೆಯು ಆಕೆಯ ದೈವೀ ಪ್ರಕೋಪದಿಂದ ತತ್ಕ್ಷಣ ಜರ್ಜರಿತವಾಗುತ್ತದೆ. ಭಗವತ್ ಕಾರ್ಯದಲ್ಲಿ ಉದಾಸೀನತೆ, ಉಪೇಕ್ಷೆ, ಆಲಸ್ಯಗಳನ್ನು ಆಕೆ ಸಹಿಸಲಾರಳು. ಅಲ್ಲದೆ ಹೊತ್ತಿಲ್ಲದ ಹೊತ್ತಿನಲ್ಲಿ ಮಲುಗುವವರನ್ನೂ, ಕೆಲಸಗೇಡಿಗಳಾಗಿ ಸುಮ್ಮನೆ ಸುತ್ತುವುರನ್ನೂ, ಅಗತ್ಯ ಕಂಡರೆ, ಕೂಡಲೆ ತೀವ್ರ ವೇದನೆಗೊಳಪಡಿಸಿ ಬಡಿದೆಬ್ಬಿಸುತ್ತಾಳೆ.

ಮಹಾಕಾಳಿಯ ಕಾರ್ಯಗತಿಯಲ್ಲಿ ಪ್ರೇರಣೆಗಳು ತೀವ್ರಗತಿಯವು, ನೇರವಾದವುಗಳು ಮತ್ತು ಮುಚ್ಚುಮರೆಯಿಲ್ಲದವುಗಳು, ಚಟುವಟಿಕೆಗಳು ನಿಸ್ಸಂಕೋಚವಾದವುಗಳು ಹಾಗೂ ಪರಿಪೂರ್ಣವಾದವುಗಳು. ಅಭೀಪ್ಸೆಯು ಜ್ವಾಲೆಯ ರೂಪದಲ್ಲಿ ಮೇಲೇರಿ ಹೋಗುವಂತಹದು. ಆಕೆಯ ಚಿತ್ತವೃತ್ತಿ ಅದಮ್ಯ, ಆಕೆಯ ದೃಷ್ಟಿ ಸಂಕಲ್ಪಗಳು ಗರುಡ ಪಕ್ಷಿಯ ಉಡ್ಡಾಣದ ಹಾಗೆ ಉತ್ತುಂಗವೂ, ದೂರಸ್ಪರ್ಶಿಯೂ ಆಗಿವೆ. ಆಕೆಯ ಪಾದಗಳು ಊರ್ಧ್ವ ಪಥದಲ್ಲಿ ದ್ರುತಗತಿಯಿಂದ ಸಾಗುತ್ತವೆ ಮತ್ತು ಅವಳ ಕರಗಳು ಶಿಕ್ಷೆ ಕೊಡುವುದಕ್ಕೂ, ನೆರವು ನೀಡುವುದಕ್ಕೂ ಮುಂದೆ ಚಾಚಿಕೊಂಡಿವೆ. ಏಕೆಂದರೆ, ಆಕೆಯೂ ಮಾತೆಯೇ, ಆಕೆಯ ಪ್ರೇಮ ಕ್ರೋಧದಷ್ಟೇ ಗಾಢವಾಗಿದೆ ಮತ್ತು ಅವಳಲ್ಲಿ ಆಳವಾದ, ಭಾವ ನಿರ್ಭರವಾದ ಕಾರುಣ್ಯವಿದೆ. ಆಕೆಗೆ ತನ್ನ ಶಕ್ತಿ ಸಮೇತವಾಗಿ ಬಂದು ಮಧ್ಯಸ್ಥಿಕೆ

ವಹಿಸಲು ಆಸ್ಪದ ದೊರೆತರೆ, ಅನ್ವೇಷಕನ ಪ್ರಗತಿಯನ್ನು ತಡೆಗಟ್ಟುವ ವಿಘ್ನಗಳು ಅಥವಾ ಅವನ ಮೇಲೆರಗುವ ವೈರಿಗಳು ನಿಮಿಷ ಮಾತ್ರದಲ್ಲಿ ಅಸಾಂದ್ರ ವಸ್ತುಗಳ ಹಾಗೆ ಪುಡಿಪುಡಿಯಾಗಿ ಹೋಗುವವು.

ಆಕೆಯ ಕೋಪ ವಿರೋಧಿಗಳಿಗೆ ಭಯಾನಕ, ಆಕೆಯ ಆವೇಗ ಪೂರ್ಣ ಒತ್ತಡ ದುರ್ಬಲರಿಗೆ ಮತ್ತು ಪುಕ್ಕರಿಗೆ ನೋವು ನೀಡುವಂತಹದು ಆಗಿದೆಯಾದರೂ ಮಹಾಮಹಿಮರು, ವೀರರು ಹಾಗೂ ಯೋಗ್ಯತಾಸಂಪನ್ನರು ಇವರೆಲ್ಲರಿಗೆ ಆಕೆ ಅತಿಪ್ರಿಯಳು, ಪೂಜಾರ್ಹಳು. ಏಕೆಂದರೆ ಆಕೆ ಕೊಟ್ಟ ಪೆಟ್ಟುಗಳು ತಮ್ಮ ಭೌತಿಕ ಆಧಾರದಲ್ಲಿ ವಿದ್ರೋಹಕರವಾದದ್ದನ್ನೆಲ್ಲ ಸಾಮರ್ಥ್ಯವನ್ನಾಗಿ, ಪೂರ್ಣ ಸತ್ಯವನ್ನಾಗಿ ಮಾರ್ಪಡಿಸುವವೆಂದೂ, ವಕ್ರವೂ, ವಿಕೃತವೂ ಆಗಿರುವದನ್ನೆಲ್ಲ ಆಕೆಯ ಸುತ್ತಿಗೆಯ ಪೆಟ್ಟುಗಳು ನೇರವಾಗುವಂತೆ ತಿದ್ದುವವೆಂದೂ, ಅಪವಿತ್ರ ಹಾಗೂ ಕುಂದುಕೊರತೆಗಳಿಂದ ಕೂಡಿದ್ದನ್ನು ಹೊರದೂಡುವವೆಂದೂ ಅವರು ಭಾವಿಸುತ್ತಾರೆ.

ಆಕೆಯ ಉಪಸ್ಥಿತಿಯಿಲ್ಲದಿದ್ದರೆ ಈಗ ಒಂದು ದಿನದಲ್ಲಾಗುವ ಕೆಲಸಕ್ಕೆ ನೂರಾರು ವರ್ಷಗಳು ಹಿಡಿಯಬಹುದಾಗಿತ್ತು. ಅವಳಿಲ್ಲದೆ ಆನಂದ ವಿಸ್ತರಿಸಿಕೊಂಡದ್ದು ಮತ್ತು ಗಂಭೀರವಾದದ್ದು ಇಲ್ಲವೆ ಮೃದು ಮಧುರ ಸುಂದರ ಲಕ್ಷಣಗಳನ್ನು ಹೊಂದಿದ್ದು ಮಾತ್ರವಾಗಬಹುದಾಗಿತ್ತು. ಆದರೆ ಅತ್ಯಂತ ನಿರಂಕುಶ ತೀವ್ರತೆಗಳ ಜಾಜ್ವಲ್ಯಮಾನ ಸಂತೋಷಾನುಭವವಿರುತ್ತಿರಲಿಲ್ಲ.

ಜ್ಞಾನಕ್ಕೆ ಆಕೆ ಜಯಿಸುವ ಬಲ ಕೊಡುತ್ತಾಳೆ, ಸೌಂದರ್ಯ ಹಾಗೂ ಸಾಮರಸ್ಯಗಳಿಗೆ ಉನ್ನತ ಹಾಗೂ ಮೇಲಕ್ಕೇರುವ ಚಾಲನೆ ಕೊಡುತ್ತಾಳೆ ಮತ್ತು ಪರಿಪೂರ್ಣತೆಗಾಗಿ ಕೈಗೊಳ್ಳುವ ನಿಧಾನ ಹಾಗೂ ಕಠಿಣ ಶ್ರಮಕ್ಕೆ ಸಾಮರ್ಥ್ಯ ಬಹುಪಾಲು ಹೆಚ್ಚುವಂತೆ ಉತ್ತೇಜನ ನೀಡುತ್ತಾಳೆ ಮತ್ತು ದೀರ್ಘವಾದ ದಾರಿ ಕಿರಿದಾಗುವಂತೆ ಮಾಡುತ್ತಾಳೆ.

ಸರ್ವೋಚ್ಚಪರಮಾನಂದ, ಉತ್ತುಂಗತಮ ಔನ್ನತ್ಯ, ಅತಿ ಉದಾರ ಗುರಿಗಳು, ದೀರ್ಘ ದರ್ಶನಗಳು ಇವುಗಳಿಗಿಂತ ನ್ಯೂನವಾದದ್ದಾವುದೂ ಆಕೆಗೆ ತೃಪ್ತಿ ತರಲಾರದು. ಆದ್ದರಿಂದ ಭಗವಂತನ ಜಯಪ್ರದವಾದ ಶಕ್ತಿ ಆಕೆಯೊಂದಿಗಿದೆ.

ಭವ್ಯ ಸಿದ್ಧಿಗಳನ್ನು ಇನ್ನೆಂದೋ ಸಾಧಿಸುವುದರ ಬದಲಾಗಿ ಇಂದೇ ಸಾಧಿಸಬೇಕಾದರೆ ಅದು ಅವಳ ಪ್ರಜ್ವಲಿತ ದೈವೀ ಕೃಪೆ, ಭಾವದೀಪ್ತಿ ಹಾಗೂ ಶೀಘ್ರಗತಿಗಳಿಂದ ಮಾತ್ರ ಸಾಧ್ಯ.



# ಮಹಾಲಕ್ಷ್ಮೀ

**– ಅನುವಾದ: ಪುಟ್ಟು ಕುಲಕರ್ಣಿ**

ಪ್ರಜ್ಞಾನ ಮತ್ತು ಶಕ್ತಿಗಳು ಮಾತ್ರವೇ ಈ ಪರಾಶಕ್ತಿಯ ಅಭಿವ್ಯಕ್ತಿಗಳಾಗಿಲ್ಲ. ಅಲ್ಲಿ ಅವಳ ಸ್ವಭಾವದ ಸೂಕ್ಷ್ಮ ಮಾಯೆಯೂ ಇದೆ. ಅದಿಲ್ಲದೇ ಈ ಪ್ರಜ್ಞಾನ ಮತ್ತು ಶಕ್ತಿಗಳು ಅಪರಿಪೂರ್ಣದ ವಸ್ತುಗಳಾಗುತ್ತವೆ. ಇದರ ಪರಿಪೂರ್ಣತೆಯು ಇಲ್ಲದೇ ಪರಿಪೂರ್ಣತೆಯೂ ಸಾಧ್ಯವಾಗುವದಿಲ್ಲ. ಇವುಗಳಿಗಿಂತ ಮುಖ್ಯವಾಗಿ, ಆ ಶಾಶ್ವತ ಸೌಂದರ್ಯದ ಅದ್ಭುತಾದ್ಭುತವೂ ಒಂದು ಇದೆ. ಎಂದಿಗೂ ಗ್ರಹಿಸಲಾಗದ ದಿವ್ಯ ಸೌಷಮ್ಯದ ರಹಸ್ಯವೊಂದಿದೆ. ವಿಶ್ವ ಸೌಂದರ್ಯದ ಅನಿವಾರ್ಯತೆಯ ಸಂಯೋಗದ ಮಾಯೆಯೂ(ಲೀಲೆಯೂ) ಬಲಗಳನ್ನು ಪಡೆದುಕೊಂಡು, ಜೀವಗಳಲ್ಲಿ ಒಂದನ್ನೊಂದು ಹೊಂದಿಕೊಂಡು ಹಾಗೂ ಪರಸ್ಪರ ಭೇಟಿಯಾಗುವದನ್ನು ಸಂಪೂರ್ಣ ಒಪ್ಪಿಕೊಂಡು (ಬಾಧ್ಯಸ್ಥಗೊಳಿಸಿ–ಕೊಂಡು) ಮತ್ತು ಇವೆಲ್ಲವುಗಳ ಹಿಂದೆ ಒಂದು ಗೂಢವಾದ ರಹಸ್ಯವಾಗಿರುವ ಆನಂದವೊಂದು ತನ್ನ ಲೀಲೆಯನ್ನು ತೋರುತ್ತಿದೆ. ಅದು ಪರದೆಯ ಹಿಂದೆಯೇ ಇದ್ದುಕೊಂಡೇ ನಾದಮಯತೆಯಲ್ಲಿ ಹಾಗೂ ರೂಪಗಳನ್ನು ಸಿದ್ಧಗೊಳಿಸುತ್ತದೆ.

ಇದು ಮಹಾಲಕ್ಷ್ಮಿಯ ಶಕ್ತಿಯಾಗಿದೆ. ಇಲ್ಲಿ ರೂಪುಗೊಂಡಿರುವ ಜೀವಗಳ ಹೃದಯಕ್ಕೆ ಆಕರ್ಷಣೀಯವಾಗಿರುವ ಆ ದೈವೀ ಶಕ್ತಿಯ ಯಾವುದೇ ಭಾವವೂ(ಆಯಾಮವೂ) ಇರುವದಿಲ್ಲ. ಏಕೆಂದರೆ **ಮಾಹೇಶ್ವರಿಯು** ತುಂಬ

ಪ್ರಶಾಂತಳಾಗಿಯೇ ದೃಷ್ಟಿಗೊಳ್ಳುತ್ತಾಳೆ. ಮಹತ್ತಮವಾಗಿ ಮತ್ತು ಈ ಮೃಣ್ಮಯದಿಂದ ಅವಳನ್ನು ತಲುಪಲು, ಅವಳಲ್ಲಿ ಶರಣಾಗತಿ ಹೊಂದಲು ಬೇಕಾದ ಭಾವಗಳ ಕ್ಷೀಣಪ್ರಭಾವದಿಂದ ಅವಳು ದೂರದೂರವಾಗಿಯೇ ಇರುತ್ತಾಳೆ. ಇನ್ನು **ಮಹಾಕಾಳಿಯಾದರೋ** ಅಶಕ್ತತನಕ್ಕೆ ಎಂದಿಗೂ ಅವಳು ಧಾರಣಕ್ಕೆ ಸಿಗದೆ ಇರುವಂತಹ ತೀವ್ರತೆಯನ್ನು ಹೊಂದಿದ್ದಾಳೆ. ಭಯಾವಹಳೂ ಆಗಿದ್ದಾಳೆ. ಆದರೆ ಇವರೆಲ್ಲರೂ ತೋಷದಲ್ಲಿ ಪರಿವರ್ತಗೊಂಡು **ಮಹಾಲಕ್ಷ್ಮಿಯಲ್ಲಿ** ಸಾರೂಪ್ಯ ಪಡೆದುಕೊಳ್ಳುತ್ತಾರೆ. ಅದಕ್ಕಾಗಿಯೇ ಇವಳು ದಿವ್ಯತ್ವದ ಮಾದಕಮಯ ಮೋಹಪೂರಿತ ಮಧುರತೆಯನ್ನು ಧಾರಾಕಾರಗೊಳಿಸುತ್ತಾಳೆ. ಅವಳಿಗೆ ಅತ್ಯಂತ ಆತ್ಮೀಯವಾಗುವಷ್ಟು ಸಾಮೀಪ್ಯಗಳಿಸಿಕೊಳ್ಳುವದೇ ಅತ್ಯಂತ ಪ್ರಮುಖವಾದ ವಿಷಯವಾಗಿದೆ. ಅವಳನ್ನು ಹೃತ್ಪೂರ್ವಕವಾಗಿಯೇ ಅನುಭಾವಿಸಿಕೊಳ್ಳುವದೂ ಒಂದು ಚಿತ್ತಾಕರ್ಷಕ ಹಾಗೂ ಮನಮೋಹಕವಾದ ಅಸ್ತಿತ್ವವಾಗಿದೆ. ಕೃಪೆ ಮತ್ತು ಸೌಂದರ್ಯಗಳು ಹಾಗೂ ಮಾರ್ದವತೆಗಳು, ಸೂರ್ಯನಿಂದ ಪ್ರಜ್ವಲಿಸುತ್ತಿರುವ ಕಿರಣಗಳಂತೆಯೇ ಪ್ರಶಾಂತವಾಗಿಯೇ ಆಗಮಿಸುವ ಧಾರೆಗಳಾಗಿವೆ. ಯಾವಾಗ ಯಾವಾಗ ಅವಳು ತನ್ನ ದೃಷ್ಟಿಯನ್ನು ಹರಿಸುತ್ತಾಳೆಯೋ, ಮತ್ತು ಯಾವಾಗ ತನ್ನ ಮಂದಸ್ಮಿತದ ಮೂಲಕ ಪ್ರೇಮವನ್ನು ನೀಡುತ್ತಾಳೆಯೋ, ಆಗ, ಆತ್ಮವು ಸಂಪೂರ್ಣವಾಗಿ ಅಲ್ಲಿ ಅಪರಿಮೇಯವಾಗಿರುವ ತೋಷದ ಆಂತರ್ಯದಲ್ಲಿ ಲೀನಗೊಂಡು ವಶವರ್ತಿಯಾಗುತ್ತದೆ. ಅವಳ ಹಸ್ತ ಸ್ಪರ್ಶವು ಚುಂಬಕದ ಸ್ವರೂಪದ್ದು, ಅವಳ ಆ ಗೂಢ ಹಾಗೂ ಮಾರ್ದವದ ಪ್ರಭಾವಗಳು (ಕೃಪೆಗಳು) ಮನಸ್ಸನ್ನು, ಜೀವನವನ್ನೂ, ದೇಹವನ್ನೂ ಪರಿಶುದ್ಧಗೊಳಿಸುತ್ತದೆ. ಎಲ್ಲೆಲ್ಲಿ ಅವಳ ಪಾದದ ಸ್ಪರ್ಶವಾಗುತ್ತದೆಯೋ, ಅಲ್ಲೆಲ್ಲವೂ ಆನಂದವು ಚಿಲುಮೆಯಿಂದ ಚಿಮ್ಮುವಂತೆ ಉಕ್ಕುತ್ತದೆ.

ಅದೂ ಅಲ್ಲದೇ, ಈ ಸುನಾದಪೂರಿತ ಶಕ್ತಿಯನ್ನು ಸಂಪರ್ಕಿಸುವದು ಅಷ್ಟೊಂದು ಸುಲಭ ಸಾಧ್ಯವೇನಲ್ಲ. ಅಲ್ಲದೇ ಅವಳ ಉಪಸ್ಥಿತಿಯನ್ನು ಪಡೆಯುವದೂ ಸಹಿತ ಅಷ್ಟೊಂದು ಸುಲಭವಲ್ಲ. ಮನಸ್ಸು ಮತ್ತು ಆತ್ಮದ ಸೌಷಮ್ಯತೆ ಹಾಗೂ ಸೌಂದರ್ಯಗಳು, ಚಿಂತನದ ಮತ್ತು ಅನುಭವಗಳ ಸೌಷಮ್ಯತೆ ಹಾಗೂ ಸೌಂದರ್ಯಗಳು, ಬಾಹ್ಯದ ಎಲ್ಲ ಚಟುವಟಿಕೆಗಳ ಮತ್ತು ಚಲನವಲನಗಳ ಸೌಷಮ್ಯತೆ ಮತ್ತು ಸೌಂದರ್ಯಗಳು, ಜೀವನದ ಹಾಗೂ ವಾತಾವರಣದ ಸೌಷಮ್ಯತೆ ಹಾಗೂ ಸೌಂದರ್ಯಗಳು ಇವೆಲ್ಲವೂ ಮಹಾಶಕ್ತಿಯು ಬಯಸುವ ಬೇಡಿಕೆಗಳಾಗಿವೆ.

ಎಲ್ಲೆಲ್ಲಿ ರಹಸ್ಯಮಯ–ಜಗತ್ತಿನ–ತೋಷದ ನಾದಗಳಿಗೆ ಆತ್ಮೀಯತೆಯು ಇರುತ್ತದೆಯೋ, ಹಾಗೂ ನಿತ್ಯಸೌಂದರ್ಯಕ್ಕೆ ಎಲ್ಲಿ ಈ ರೀತಿಯ ಪ್ರತಿಸ್ಪಂದನಗಳು ಇರುತ್ತವೆಯೋ, ವಿಜಯಗಳಿಗೆ ಬೇಕಾದ ಸಂಘಟನಾತ್ಮಕವಾದ ಐಕ್ಯತೆಗೆ ಹಾಗೂ ಸಂತೋಷದ ಸುಲಲಿತ ಸಲಿಲಕ್ಕೆ ಯಾವ ಜೀವ(ನ)ಗಳು ಈ ದಿವ್ಯತ್ವದೆಡೆಗೆ ಸಾಗುತ್ತವೆಯೋ ಅಂತಹ ಎಲ್ಲ ಸಂದರ್ಭಗಳಲ್ಲಿಯೂ, ವಾತಾವರಣದಲ್ಲಿ ಅವಳು ಅದರೊಡನೆ ಸಂಯೋಗಗೊಳ್ಳಲು ಸಮ್ಮತಿಸುತ್ತಾಳೆ.

ಆದರೆ ಎಲ್ಲಿ ಎಲ್ಲವೂ ಕುರೂಪಮಯವಾಗಿದೆಯೋ, ಸಂಕುಚಿತತೆಯಿಂದ ಕೂಡಿದೆಯೋ, ಹಾಗೂ ತಳದಲ್ಲಿಯೇ ಉಳಿದಿದೆಯೋ, ಅಂತಹ ಎಲ್ಲವೂ (ಬಲಹೀನವಾಗಿ)ಬಡವಾಗಿ, ದೀನತ್ವದಲ್ಲಿ ಹಾಗೂ ಮಲಿನತೆಯಲ್ಲಿ, ಅತ್ಯಂತ ಕ್ರೂರತೆಯಲ್ಲಿ, ನಿಕೃಷ್ಟತೆಯಲ್ಲಿ ಪ್ರಕ್ಷಿಪ್ತಗೊಂಡಿರುತ್ತವೆ. ಆದರೆ ಪ್ರೇಮ ಮತ್ತು ಸೌಂದರ್ಯಗಳು ಎಲ್ಲಿ ಇಲ್ಲವೋ ಅಥವಾ ಯಾವುದು ರೂಪುಗೊಳ್ಳು/ ಸಥೂಲಗೊಳ್ಳಲು ಸಿದ್ಧವಿಲ್ಲವೋ, ಅಲ್ಲಿ ಅವಳು(ಮಹಾಲಕ್ಷ್ಮೀ) ಆಗಮಿಸುವದೇ ಇಲ್ಲ. ಎಲ್ಲಿ ಇವುಗಳೆಲ್ಲ ಮಿಶ್ರಣಗೊಂಡು ಸಾರೂಪ್ಯವನ್ನು ಹಾಗೂ ಅವಶ್ಯವಾಗಿರುವ ಆಕಾರಗಳನ್ನು ಕಳೆದುಕೊಂಡಿವೆಯೋ ಅಲ್ಲಿಂದ ಅವಳು ಶೀಘ್ರದಲ್ಲಿಯೇ ವಿಮುಖಳಾಗಿ ಹೊರಟು ಹೋಗುತ್ತಾಳೆ. ಅಥವಾ ತನ್ನ ಸಮೃದ್ಧತೆಯನ್ನು ಧಾರೆ ಎರೆಯಲು ಕಳಕಳಿ ಹೊಂದುವದಿಲ್ಲ. ಒಂದು ವೇಳೆ ಮನುಕುಲದ ಹೃದಯಗಳಲ್ಲಿ ಕೇವಲ ಸ್ವಾರ್ಥ ಹಾಗೂ ದ್ವೇಷ ಮತ್ತು ಅಸೂಯೆಗಳು ಜೊತೆಗೆ ದುರ್ಬುದ್ಧಿ ಹಾಗೂ ವೈರತ್ವ, ಕಲಹಗಳು ತುಂಬಿಕೊಂಡಿರುವ ಹಂತದಲ್ಲಿ, ಅವಳು (ಮಹಾಲಕ್ಷ್ಮಿಯು) ಅಲ್ಲಿಯೇ ಅವಳನ್ನೇ ಕಾಣುವಂತಹ ಸ್ಥಿತಿ ಇದ್ದಲ್ಲಿ, ವಿಶ್ವಾಸಭಂಗ, ದ್ವೇಷ ಮತ್ತು ಅಸೂಯೆಗಳು, ಅವಿಧೇಯತೆಗಳು ಒಟ್ಟಾಗಿ, ಈ ಪವಿತ್ರ ಸಂದರ್ಭದಲ್ಲಿ ಮಿಶ್ರಣಗೊಂಡಲ್ಲಿ, ಇವುಗಳಿಗೆ ಮತ್ತೆ ಜೊತೆಯಾಗಿ ಲೌಕಿಕ–ರಾಗಗಳೇ ಸಾಂದ್ರೀಕೃತವಾಗಿ – ಘನಗೊಂಡು, ಪರಿವರ್ತನೆಗೊಳ್ಳುವ ಸಲುವಾಗಿ ಅವಶ್ಯವಿದ್ದ ಸಮರ್ಪಣೆಯನ್ನು ಅವನತಿಗೊಳಿಸುತ್ತಿದ್ದಲ್ಲಿ, ಅಂತಹ ಹೃದಯಗಳಲ್ಲಿ ಈ ಕೃಪಾಪೂರ್ಣ ಹಾಗೂ ಸೌಂದರ್ಯದ ಅಧಿದೇವತೆಯಾದ ಮಹಾಲಕ್ಷ್ಮಿಯು ಅಲ್ಲಿ ವಾಸ ಮಾಡುವದಿಲ್ಲ.

ಒಂದು ದಿವ್ಯತ್ವದ ತಿರಸ್ಕಾರವೇ ಅವಳನ್ನು ಆವರಿಸಿ, ಅವಳು ಆ ಸ್ಥಳದಿಂದ ದೂರವೇ ಉಳಿದು ಬಿಡುತ್ತಾಳೆ. ಅವಳು ಏಕಾಕಿಯಾಗಿ ಅವುಗಳನ್ನು

ಅನ್ವಯಿಸುವದೂ ಇಲ್ಲ. ಅನುಮತಿಸುವದೂ ಇಲ್ಲ. ವಿರೋಧಿಸುವದೂ ಇಲ್ಲ. ಅಥವಾ ಅವಳ ಮುಖವನ್ನು(ಉಪಸ್ಥಿತಿಯನ್ನು) ಮುಚ್ಚಿಕೊಂಡ ಅವಳು ಈ ರೀತಿಯ ಯಾತನಾಮಯ(ಕಠೋರ), ವಿಷಪೂರಿತ ಭೂತದ ಅಂಶಗಳಿರುವ ಪ್ರಸಂಗಗಳನ್ನು ಅಷ್ಟೇ ಶೀಘ್ರವಾಗಿಯೇ ತಿರಸ್ಕರಿಸುತ್ತಾಳೆ ಹೀಗಾಗಿ ಅವಳು ಸಂತೋಷದಾಯಕ ಪ್ರಭಾವವನ್ನು ಕಾಣಲೆಳಸುವ ಸ್ಥಿತಿಯು ಅಲ್ಲಿಂದ ಮಾಯವಾಗಿ ಬಿಡುತ್ತದೆ. ಆದರೆ ಅದೇ ಸಮಯದಲ್ಲಿ ಇಂತಹ ಸಂತೋಷ ಪ್ರದಾಯಕವಾದ ಅಂಶಗಳು ಘಟಿಸುತ್ತಿರುವ ಎಡೆಗೆ ಅವಳು ತಕ್ಷಣವೇ ತನ್ನ ಉಪಸ್ಥಿತಿಯನ್ನು ತೋರಲು ಆಗಮಿಸುತ್ತಾಳೆ. ವೈರಾಗ್ಯಪೂರ್ಣ ಶೂನ್ಯತೆ ಮತ್ತು ರೂಕ್ಷಮಯ ಕಠಿಣತೆಗಳು ಎಂದಿಗೂ ಅವಳ ಸಂತೋಷವನ್ನು ಹೆಚ್ಚಿಸುವದಿಲ್ಲ. ಅಲ್ಲದೇ ಹೃದಯದ ಸಹಜ ಭಾವನೆಗಳನ್ನು ನಿಗ್ರಹಿಸುವದಕ್ಕಾಗಿಯೇ ಮತ್ತು ಆತ್ಮನಿಗ್ರಹದ ಸಂಕೀರ್ಣತೆಯಲ್ಲಾಗಲಿ ಹಾಗೂ ಜೀವನದ ಸೌಂದರ್ಯರಹಿತದ ಕ್ಷಣಗಳಲ್ಲಾಗಲಿ, ಒಟ್ಟಿನಲ್ಲಿ ಇಂತಹ ಪ್ರಸಂಗವಿದ್ದಲ್ಲಿ ಅವಳು ಅಲ್ಲಿ ಕಾಣಲು ಇಚ್ಛಿಸುವದಿಲ್ಲ.

ಹೀಗಾಗಿ ಪ್ರೇಮ ಮತ್ತು ಸೌಂದರ್ಯದ ಮೂಲಕವೇ ಅವಳು ಮಾನವನಿಗೆ ಲಭ್ಯವಿದ್ದು, ಈ ಅನುಭವವನ್ನೇ ದೈವತ್ವದ ಹಂತಕ್ಕೆ ಅರೋಹಣಗೊಳಿಸುವ ಹೊಣೆಗಾರಿಕೆಯ ನೊಗವನ್ನು ಅವಳು ಮಾನವನ ಹೆಗಲಿಗೇರಿಸುತ್ತಾಳೆ. ಜೀವನವು ಅವಳ ಪರಮೋಚ್ಚ ಸೃಷ್ಟಿಯಲ್ಲಿಯೇ ಸಮೃದ್ಧಶೀಲ ಕಾರ್ಯ ತತ್ಪರತೆಯಲ್ಲಿ ಅಲೌಕಿಕವಾದ ಕಲೆಯಲ್ಲಿ ಮತ್ತು ಅಸ್ತಿತ್ವದಲ್ಲಿರುವದೆಲ್ಲವೂ ಒಂದು ಪವಿತ್ರಮಯ ಕಾವ್ಯದ ರೀತಿಯಲ್ಲಿ ಪ್ರಕಾಶನಗೊಳ್ಳುತ್ತದೆ. ಜಗತ್ತಿನ ಶ್ರೀಮಂತಿಕೆಯನ್ನೆಲ್ಲ ಒಟ್ಟುಗೂಡಿಸಿ, ಆ ಪರಮೋಚ್ಚದ ಆದೇಶದ ಪ್ರಕಾರ ಆ ದಿಸೆಯತ್ತ ಕೇಂದ್ರೀಕರಿಸಲು ಮತ್ತು ಅತ್ಯಂತ ಸರಳಾತಿಸರಳವಾದ ಅತೀ ಸಾಮಾನ್ಯವಾಗಿರುವ ವಸ್ತು–ವಿಷಯಗಳನ್ನೂ ಸಹಿತ ಅವಳ ಪ್ರಜ್ಞೆಯೊಡನೆ ಮೇಳೈಸಿಕೊಂಡು, ಅವಳಾತ್ಮದುಸಿರಿನೊಡನೆ ಏಕತ್ವಗೊಳಿಸಿಕೊಂಡು ಅವಳು ಆಸರೆ ನೀಡುತ್ತಾಳೆ. ಅವಳು ಹೃದಯಪೂರ್ವಕವಾಗಿಯೇ ಒಪ್ಪಿಕೊಂಡು ಹರಸಿ, ವಿಕಸನಗೊಂಡ ಅಲ್ಲಿನ ದೈವೀ ಸೌಂದರ್ಯದ ಅದ್ಭುತದ ಗೂಢತೆಗಳನ್ನು, ಹಾಗೂ ಯಾವುದು ಸರ್ವಸ್ವವನ್ನೂ, ಜ್ಞಾನವನ್ನೂ ಆವರಿಸಿಕೊಳ್ಳಬಲ್ಲುದೋ ಅದೇ ಅತ್ಯುನ್ನತವಾದ ಆಕರ್ಷಣೆಯಲ್ಲಿಯೇ ಆಗಮಿಸುವ ಭಕ್ತಿಯಾಗಿರುತ್ತದೆ. ಇದು ಸಾಮರ್ಥ್ಯವನ್ನೂ ಕಲಿಸುತ್ತದೆ. ಯಾವುದು ಮಹಾಬಲದ ಮೂಲಕ ಸೌಷಮ್ಯಪೂರ್ವಕವಾದ ಕ್ರಿಯೆಗಳನ್ನೂ ಲೀಲೆಗಳನ್ನೂ ಸುಸಂಗತವಾಗಿ ನಾದಮಯದಿಂದ ಘಟಿಸುವಂತೆ

ಮಾಡುತ್ತಾಳೆ, ಈ ಎಲ್ಲ ಮಾನಕಗಳಲ್ಲಿ ಪರಿಪೂರ್ಣತೆಯಲ್ಲಿ ಎರಕ ಹೊಯ್ಯುತ್ತಾ ಈ ಸೌಂದರ್ಯವು ಸದಾಕಾಲದಲ್ಲೂ ಉತ್ಸಾಹದಿಂದ ಇರುವಂತೆ ಮಾಡುತ್ತಾಳೆ.

[ಈ ವಿಷಯವನ್ನು ಕೆ.ಎಸ್. ಅಮೂರ ಅವರು ಈ ಹಿಂದೆಯೇ ವಿವರವಾಗಿಯೇ ಕನ್ನಡಕ್ಕೆ ತಂದಿದ್ದಾರೆ. ತಾತ್ತ್ವಿಕ ವಿವೇಚನೆಗೆ ಅನುಕೂಲವಾಗುವಂತೆ ಅವರು ಬರೆದಿರುವ ವಿವರಗಳು:

(1) ಕೇವಲ ಜ್ಞಾನ(ಪರಾಮಾತೆಯ ಮಹೇಶ್ವರಿ ರೂಪ), ದೈವೀ ಶಕ್ತಿ (ಪರಾಮಾತೆಯ ಮಹಾಕಾಳಿ ರೂಪ) ಇವುಗಳಷ್ಟೇ ಪರಾಮಾತೆಯ ಪ್ರಕಟ ರೂಪಗಳಲ್ಲ. ಆಕೆಯ ಪ್ರಕೃತಿಗತವಾದ ಮತ್ತೊಂದು ಸೂಕ್ಷ್ಮತರ ರಹಸ್ಯವುಂಟು. (2) ಮತ್ತು ಅದಿಲ್ಲದೆ ದೈವೀ ಜ್ಞಾನ, ದೇವೀ ಶಕ್ತಿಗಳು ಅಪೂರ್ಣವಾಗಿರುತ್ತಿದ್ದವು, ಪರಿಪೂರ್ಣತೆ ಪರಿಪೂರ್ಣವಾಗಿರುತ್ತಿರಲಿಲ್ಲ.

(3) ಅವುಗಳ ಮೇಲೆ ಚಿರಂತನ ಸೌಂದರ್ಯದ ಅದ್ಭುತವಿದೆ, ದಿವ್ಯ ಸಾಮರಸ್ಯಗಳ ಗ್ರಹಿಸಲಾಗದ ರಹಸ್ಯವಿದೆ, ವಸ್ತು–ವಿಷಯಗಳನ್ನು ಶಕ್ತಿಗಳನ್ನು ಮತ್ತು ಸತ್ತೆಗಳನ್ನು (4) ಒಂದೆಡೆಗೆ ಹಿಡಿದೆಳೆದು ಒಂದುಗೂಡಿಸುವ ಹಾಗೂ ಅವು ಸಂಧಿಸಲು ಮತ್ತು ಏಕತೆ ಪಡೆಯಲು ನಿರ್ಬಂಧಿಸುವ ವಿಶ್ವ ಮೋಹಕತೆ ಹಾಗೂ ಆಕರ್ಷಣೆಗಳಿವೆ, (5) ಅದರಿಂದಾಗಿ ಗುಪ್ತ ದಿವ್ಯಾನಂದ ತೆರೆಯ–ಮರೆಯೊಳಗಿಂದ ತನ್ನ ಲೀಲೆಯನ್ನು ನಡೆಸಬಹುದಾಗಿದೆ, ಅವುಗಳೆಲ್ಲವುಗಳು (ವಸ್ತು... ಇತ್ಯಾದಿಗಳು) ಅದರ ಲಯಬದ್ಧತೆಗಳು ಅದರ ಆಕಾರಗಳು ಆಗುವಂತೆ ಮಾಡಬಹುದಾಗಿದೆ.

(6) ಇದೇ ಮಹಾಲಕ್ಷ್ಮಿಯ ಸಾಮರ್ಥ್ಯ. ಪರಾಶಕ್ತಿಯ ಬೇರಾವ ರೂಪವೂ ದೇಹಧಾರಿಗಳಾದ ಸತ್ತೆಗಳ (7) ಹೃದಯಗಳಿಗೆ ಮಹಾಲಕ್ಷ್ಮಿಯ ರೂಪಕ್ಕಿಂತ ಹೆಚ್ಚು ಚಿತ್ತಾಕರ್ಷಕವಾಗಿರುವುದಿಲ್ಲ. (8) (9) ಪಾರ್ಥಿವ ಸ್ವಭಾವದ ಅಲ್ಪತೆಗೆ ಮಹೇಶ್ವರಿಯು ತೀರ ಪ್ರಶಾಂತಳು, ತೀರ ಬೃಹದರೂಪದವಳು, ತೀರ ದೂರವಿರುವವಳು ಎಂದೂ, ಆಕೆಯ ಸಾನ್ನಿಧ್ಯವನ್ನು ಸಮೀಪಿಸುವದಾಗಲಿ, ಆಕೆಯನ್ನು ಧಾರಣಮಾಡಿಕೊಂಡಿರುವುದಾಗಲಿ ಅಸಾಧ್ಯವೆಂದೂ ತೋರಬಹುದು. (10) (11) ಮಹಾಕಾಳಿಯೂ ಕೂಡ ಮಾನವ ಸ್ವಭಾವದ ದುರ್ಬಲತೆಗೆ ತೀರ ತೀವ್ರಗತಿಯುಳ್ಳವಳು ಮತ್ತು ಗಾಬರಿಗೊಳಿಸುವವಳು ಆಗಿರುವುದರಿಂದ ಅವಳ ಸಾನ್ನಿಧ್ಯ ಸಹಿಸಲಸಾಧ್ಯವೆಂದು ತೋರಿರಬಹುದು. (12) ಆದರೆ ಎಲ್ಲರೂ ಮಹಾಲಕ್ಷ್ಮಿಯೆಡೆಗೆ ಹೊರಳುತ್ತಾರೆ.

ಮಹಾಲಕ್ಷ್ಮಿ ಪರಮೇಶ್ವರನ ಮಾದಕ ಮಾಧುರ್ಯದ ಮೋಹಕ ಶಕ್ತಿಯನ್ನು ಬೀರುತ್ತಾಳೆ, ಅವಳ ಸಾಮೀಪ್ಯದಲ್ಲಿರುವುದೆಂದರೆ ಆಳವಾದ ಸುಖದ ಅನುಭವಕ್ಕೆ ತೆರೆದುಕೊಂಡಂತೆ, ಹೃದಯದಲ್ಲಿ ಆಕೆಯ ಸಾನ್ನಿಧ್ಯದ ಅನುಭವ ಪಡೆಯುವುದೆಂದರೆ ಅಸ್ತಿತ್ವವನ್ನು ಆನಂದಪರವಶತೆಗೆ, ಅದ್ಭುತವಾದುದಕ್ಕೆ ಒಳಪಡಿಸಿದಂತೆ. ಸೂರ್ಯನಿಂದ ಬೆಳಕು ಹರಿದು ಬರುವಂತೆ ದೈವೀ ಕೃಪೆ, ಮೋಹಕತೆ ಹಾಗೂ ಮಾರ್ದವತೆಗಳು ಆಕೆಯಿಂದ ಹರಿದು ಬರುತ್ತವೆ. ಆಕೆ ತನ್ನ ಅದ್ಭುತ ದೃಷ್ಟಿ ಸ್ಥಿರಗೊಳಿಸಿದಲ್ಲೆಲ್ಲ ಇಲ್ಲವೆ ತನ್ನ ಮುಗುಳ್ನಗುವಿನ ಚೆಲ್ವಿಕೆಯನ್ನು ಚೆಲ್ಲಿದಲ್ಲೆಲ್ಲ ಮಾನವನ ಅಂತರಾತ್ಮ ಅದರ ಸೆರೆಗೊಳಗಾಗಿರುತ್ತದೆ, ಆಳವನಳೆಯಲಾಗದ ದಿವ್ಯಾನಂದದ ಆಳಗಳಲ್ಲಿ ಧುಮುಕಿರುತ್ತದೆ.

(16) ಅವಳ ಕೈಸೋಂಕೆಂದರೆ ಸೂಜಿಗಲ್ಲಿನ ಸೆಳೆತವಿದ್ದ ಹಾಗೆ, ಅವಳ ಕೈಗಳ ನಿಗೂಢ, ಕೋಮಲ ಸ್ಪರ್ಶದ ಪ್ರಭಾವ ಮನಸ್ಸು, ಪ್ರಾಣ ಹಾಗೂ ದೇಹಗಳನ್ನು ದೋಷಮುಕ್ತಗೊಳಿಸಿ ಶುದ್ಧಗೊಳಿಸುತ್ತದೆ. ಆಕೆ ಪಾದಾರ್ಪಣ ಮಾಡಿದಲ್ಲೆಲ್ಲ ಮೈಮರೆಸುವ ಆನಂದದ ಅದ್ಭುತ ಪ್ರವಾಹಗಳು ಪ್ರವಹಿಸುತ್ತವೆ.

ಅವಳ ಸರ್ವೋಚ್ಚ ಸೃಷ್ಟಿಯಲ್ಲಿ ಜೀವನವು ಶ್ರೀಮಂತ ಹಾಗೂ ಸ್ವರ್ಗೀಯ ಕಲೆಯಾಗಿ ಕುದುರುತ್ತದೆ, ಅಸ್ತಿತ್ವವೆಲ್ಲವೂ ದಿವ್ಯಾನಂದದ ಒಂದು ಕಾವ್ಯವಾಗಿ ಪರಿವರ್ತಿತವಾಗುತ್ತದೆ, ಜಗತ್ತಿನ ಸಂಪತ್ತನ್ನೆಲ್ಲ ಒಟ್ಟುಗೂಡಿಸಲಾಗುತ್ತದೆ ಹಾಗೂ ಅದನ್ನು ಉನ್ನತ ದರ್ಜೆಯದನ್ನಾಗಿ ಮಾಡಲು ಒಟ್ಟಿಗಿನ ಆಲೋಚನೆಗೆ ಒಳಪಡಿಸಲಾಗುತ್ತದೆ. ಮತ್ತು ಏಕತೆಯ ಬಗೆಗಿರುವ ಆಕೆಯ ಅಂತರ್ಬೋಧೆ–ಯಿಂದ, ಅವಳ ಆತ್ಮದ ಉಸಿರಿನಿಂದ ಅತ್ಯಂತ ಸಾಮಾನ್ಯ ವಸ್ತು–ವಿಷಯಗಳು ಅಲೌಕಿಕವಾಗುತ್ತವೆ, ಮತ್ತು ಸಮಸ್ತ ಜ್ಞಾನವನ್ನು ಮಿಕ್ಕಿ ಮೀರುವ ಪರಮಾನಂದದ ಗುಪ್ತ ರಹಸ್ಯಗಳನ್ನು ಆ ಹೃದಯಕ್ಕೆ ತರೆದು ತೋರಿಸುತ್ತಾಳೆ; ಭಕ್ತಿ ಭಾವಕ್ಕೆ ಪರಮೇಶ್ವರನ ಆಕರ್ಷಣ ಶಕ್ತಿಯನ್ನು ಜೊತೆಗೂಡಿಸಿ ಬೆಸುಗೆಗೊಳಿಸುತ್ತಾಳೆ, ಶೌರ್ಯ ಹಾಗೂ ಶಕ್ತಿಗಳಿಗೆ ಲಯಬದ್ಧತೆಯನ್ನು ಕಲಿಸುತ್ತಾಳೆ, ಈ ಲಯಬದ್ಧತೆ ಅವುಗಳ ಕ್ರಿಯೆಗಳ ಪ್ರಾಬಲ್ಯವನ್ನು ಸಾಮರಸ್ಯದಲ್ಲಿ, ಅಳತೆ ಮೀರದಂತೆ ಇರಿಸುತ್ತದೆ ಮತ್ತು ಪರಿಪೂರ್ಣತೆಯ ಮೇಲೆ ಮೋಹಕತೆಯನ್ನು ಬೀರಿ ಅದು ಚಿರಕಾಲ ಉಳಿಯುವಂತೆ ಮಾಡುತ್ತದೆ.]

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/21–22**



## ಮಹಾಸರಸ್ವತೀ

ಶ್ರೀಮಾತೆಯ ಕ್ರಿಯಾಶಕ್ತಿಯೇ **ಮಹಾಸರಸ್ವತೀ** ಆಗಿದ್ದಾಳೆ. ಅಲ್ಲದೇ ಅವಳ ಪರಿಪೂರ್ಣತೆಯ ಹಾಗೂ ನಿಯತಿಯೂ ಆಗಿದೆ. ಇವಳು ಶ್ರೀಮಾತೆಯ ನಾಲ್ಕು ಅಂಶಗಳಲ್ಲಿ ಅತ್ಯಂತ ಕಿರಿಯಳು. ಅನುಷ್ಠಾನ ಗೊಳಿಸುವ ಕ್ರಿಯೆಯಲ್ಲಿ ಈ **ಸರಸ್ವತಿಯು** ಅತ್ಯಂತ ಕುಶಲಿಯಾಗಿದ್ದಾಳೆ. ಅದಕ್ಕಿಂತ ಹೆಚ್ಚಾಗಿ ಇವಳು ಈ ಪ್ರಕೃತಿಯ ಭೌತಿಕ ಅಂಶಕ್ಕೆ ಅತ್ಯಂತ ಆಪ್ತತೆಯನ್ನು ಹೊಂದಿದ್ದಾಳೆ.

**ಮಾಹೇಶ್ವರಿಯು** ಜಗತ್ತಿನ ಅತಿ ವಿಶಾಲವಾದ ಹಾಗೂ ವೈಶ್ವಿಕ ಶಕ್ತಿಗಳ(ಬಲಗಳ) ಜೊತೆಗೆ ಇದ್ದರೆ,

**ಮಹಾಕಾಳಿಯು** ಅವುಗಳ ಬಲಗಳನ್ನು ಹಾಗೂ ಸಂಚಲನಗಳನ್ನು ಸಂವೇಗಗೊಳಿಸುತ್ತಿದ್ದರೆ,

**ಮಹಾಲಕ್ಷ್ಮಿಯು** ಅವುಗಳ ನಾದಮಯತೆಯನ್ನು ಹಾಗೂ ಮಾನಕಗಳನ್ನು ಶೋಧಿಸುತ್ತಿದ್ದರೆ, ಇಲ್ಲಿ

**ಮಹಾಸರಸ್ವತಿಯು** ಕಾರ್ಯಕರಣಗೊಳ್ಳುತ್ತಿರುವ ಹಾಗೂ ಸಂಘಟನಾತ್ಮವಾಗುತ್ತಿರುವ ಈ ಎಲ್ಲ ವಿವರಗಳನ್ನೂ, ಅವುಗಳ ಮಧ್ಯದ ಸಂಪರ್ಕ ಸಂಬಂಧಗಳ ಅಂಶಗಳನ್ನು ಹಾಗೂ ಬಲಗಳ ಪರಿಣಾಮಕಾರೀ ಹೊಂದಾಣಿಕೆಗಳನ್ನು ಮತ್ತು ಅಧಃಪತನಗೊಳ್ಳದ ನಿಖರ ನಿರ್ದಿಷ್ಟತೆಯ

ಫಲಿತಾಂಶಗಳನ್ನು ಪಡೆಯುವ ಸಲುವಾಗಿನ ವಿವರಗಳನ್ನು ಗಮನಿಸುವ ಸರ್ವಾಧ್ಯಕ್ಷಳಾಗಿದ್ದಾಳೆ. ವಿಜ್ಞಾನ ಮತ್ತು ಕರಕುಶಲತೆ ಹಾಗೂ ವಸ್ತುಗಳ ಪಾರಿಭಾಷಿಕ ತಾಂತ್ರಿಕತೆಗಳು **ಮಹಾಸರಸ್ವತಿಯ** ಸಾಮ್ರಾಜ್ಯವಾಗಿವೆ. ಇವಳು ಯಾವಾಗಲೂ ತನ್ನದೇ ಸ್ವಭಾವದಲ್ಲಿ ಇವುಗಳನ್ನು ಹೊಂದಿದ್ದು, ಅವಳು ಯಾರನ್ನು ಆತ್ಮೀಯತೆಯಿಂದ ಆಯ್ಕೆ ಮಾಡಿಕೊಳ್ಳುತ್ತಾಳೆಯೋ, ಯಾರು ಸೂಕ್ಷ್ಮತೆಯಲ್ಲಿ ಹಾಗೂ ಸಹನೆಯಿಂದ ಇರುತ್ತಾರೆಯೋ, ಪ್ರಜ್ಞಾಪೂರ್ವಕವಾದ ಮನಸ್ಸಿನಿಂದ ನಿಖರತೆಯತ್ತಲೇ ಪೂರ್ಣ ಕರ್ತೃತ್ವಶಕ್ತಿಯಿಂದ ಸಾಗುತ್ತಾರೆಯೋ, ಅದರಲ್ಲೂ ಪರಿಪಕ್ವವಾದ ಶಕ್ತಿಯ ಕುರಿತು ವಿವೇಚನಾಪೂರ್ಣ ದೃಷ್ಟಿಕೋನವನ್ನು ಹೊಂದಿರುತ್ತಾರೆಯೋ, ಅವರಿಗೆ ಮಾತ್ರ ತನ್ನ ಕೃಪೆಯನ್ನು ಎರೆಯುತ್ತಾಳೆ. ಇಂತಹ ಕೃಪೆಯು ಅತ್ಯಂತ ಸಾಮರ್ಥ್ಯಶಾಲಿಯಾಗಿದ್ದು, ಅದು ಎಂದಿಗೂ ನಿವೃತ್ತಿಯನ್ನು ಬಯಸುವದಿಲ್ಲ. ಅತ್ಯಂತ ಕಾಳಜೀಪೂರ್ವಕ ಹಾಗೂ ಸಕ್ಷಮತೆಯನ್ನು ಹೊಂದಿದ ಕಟ್ಟಡ ರಚನೆಯಾಗಲಿ, ವ್ಯವಸ್ಥಾಪನಾ ಕಾರ್ಯವಾಗಲಿ, ಆಡಳಿತಾತ್ಮಕ ವಿಷಯವಾಗಲಿ, ಯಂತ್ರ–ತಂತ್ರಶಿಲ್ಪದಲ್ಲಾಗಲಿ, ಕಲಾ ಪ್ರದರ್ಶನದಲ್ಲಾಗಲಿ ಮತ್ತು ಈ ರೀತಿ ಹಲವು ವಿಧದಲ್ಲಿ ಈ ಜಗತ್ತು ರೂಪಣೆ ಹೊಂದುವಂತೆಯೇ ಸೃಷ್ಟಿಸಲ್ಪಟ್ಟಿದೆ. ಯಾವಾಗ ಇವಳು ರೂಪಾಂತರಣಕ್ಕೆ ಸಿದ್ಧಳಾಗಿ, ಪ್ರಕೃತಿಯ (ಸಹಜ ಸ್ವಭಾವದ) ನವೀನ ಸಂರಚನೆಯನ್ನು ಬಯಸುತ್ತಾಳೆಯೋ ಆಗ ಅವಳ ಆ ಕ್ರಿಯೆಯು ಅಂತಹ ಪರಿಶ್ರಮದಲ್ಲಿಯೇ ಇರುತ್ತದೆ. ಇದರ ಸೂಕ್ಷ್ಮತೆಯೂ ಸಹಿತ ನಮ್ಮ ಉತ್ಕಂಠಿತಗೊಂಡ, ಶೀಘ್ರ ಫಲಿತಾಂಶ ಬಯಸುವ ಉತ್ಸುಕತೆಯ ತಹತಹಿಕೆಗೆ ಇವೆಲ್ಲವೂ ಅತ್ಯಂತ ನಿಧಾನಗತಿಯಲ್ಲಿ, ಅದೂ ಅನಂತಾನಂತದಲ್ಲಿ ಘಟಿಸುತ್ತಿರುವ ವಿಷಯದಂತೆ ಕಾಣುತ್ತದೆ. ಆದರೆ ಇದು ಸಮಗ್ರತೆಯಿಂದ ಕೂಡಿದ್ದು, ಸ್ಥಿರತೆಯಿಂದ ಇದ್ದು, ಯಾವುದೇ ಏರಿಳಿತಗಳು ಇಲ್ಲಿ ಇರುವದಿಲ್ಲ.

ಯಾವುದು ಅವಳಿಚ್ಛೆಯಂತೆ ಅವಳಲ್ಲಿ ಕಾರ್ಯತತ್ಪರತೆಗೆ ತೊಡಗಿಕೊಳ್ಳುತ್ತದೆಯೋ ಅದು ಅತ್ಯಂತ ಋಜು ಸ್ವಭಾವದ್ದೇ ಆಗಿರುತ್ತದೆ. ಎಂದಿಗೂ ಜಡಗೊಳ್ಳುವದಿಲ್ಲ. ಯಾವಾಗಲೂ ಅವಿಶ್ರಾಂತವಾಗಿಯೇ ಕಾರ್ಯ ತತ್ಪರತೆಯಲ್ಲಿ ಇರುತ್ತದೆ. ಈ ರೀತಿಯಾಗಿಯೇ ಅವಳು ನಮ್ಮನ್ನು ಹರಸುವದರ ಮೂಲಕ, ಅವಳು ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ವಿಷಯಗಳನ್ನೂ ಗಮನಿಸುತ್ತಾ ಹಾಗೂ ಅವುಗಳನ್ನು ಸ್ಪರ್ಶಿಸುತ್ತಾ, ಪ್ರತಿಕ್ಷಣವೂ ತಪ್ಪುಗಳನ್ನು ಪರಿಷ್ಕರಿಸುತ್ತಾ, ಕಂದಕಗಳು ಬೀಳದ ಹಾಗೆ, ತಿರುಚಿಕೊಳ್ಳದ ಹಾಗೆ ಅಥವಾ

ಅಪರಿಪೂರ್ಣವಾಗಿಯೇ ಉಳಿಯದ ಹಾಗೆ ಅವುಗಳೆಲ್ಲವನ್ನೂ ಪರಿಗಣಿಸಿ, ಸಮಯೋಚಿತವಾಗಿ ಸಮತೋಲನಗೊಳಿಸಿ ನಿಖರತೆಯತ್ತ ಎಲ್ಲವೂ ಘಟಿಸುವಂತೆ ಮಾಡುತ್ತಾಳೆ. ಅವಳ ದೃಷ್ಟಿಗೆ ಯಾವುದೂ ಕಡಿಮೆಯಲ್ಲ; ಯಾವುದೂ ಅಲ್ಪವೂ ಅಲ್ಲ. ಅದು ಎಷ್ಟೇ ದುರ್ಗಮವಾದ ಅಥವಾ ನಿಗೂಢತೆಯಲ್ಲಿಯೇ ಮುಳುಗಿದ್ದರೂ ಅವಳಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಅದಕ್ಕಾಗಿ ಎರಕಗೊಳಿಸುತ್ತ ಮತ್ತೆ ಮತ್ತೆ ಮರುಎರಕಗೊಳಿಸುತ್ತ ಅವಳು ಆ ನಿಗದಿತ ರೂಪವನ್ನು ಪಡೆಯುವವರೆಗೂ, ಪ್ರತಿಯೊಂದು ಭಾಗವೂ ಸಮಗ್ರತೆಯಲ್ಲಿ ಸ್ಪಂದಿಸುವಂತೆ ಮಾಡಲು ಸದಾ ಶ್ರಮಿಸುತ್ತಾಳೆ. ಅದು ನಿಗದಿತವಾದ ಸ್ಥಳದಲ್ಲಿಯೇ ಸ್ಥಿತಗೊಂಡು ನಿಗದಿತಗೊಂಡಿರುವ ಪರಮೋದ್ಧೇಶಕ್ಕೆ ಪೂರಕವಾಗಿಯೇ ಹಾಗೂ ಒಟ್ಟಂದದಲ್ಲಿ ಭಾಗವಹಿಸಿ ಫಲಪ್ರದವಾಗುವಂತೆ ಮಾಡುತ್ತಾಳೆ. ಅವಳ ಈ ನಿರಂತರತೆಯ ಮತ್ತು ವಸ್ತುಗಳ ವಿಧಿಬದ್ಧ ವ್ಯವಸ್ಥಾಪನೆಗಳು ಹಾಗೂ ಪುನರ್–ವ್ಯವಸ್ಥಾಪನೆಗಳಲ್ಲಿ ಅವಳ ದೃಷ್ಟಿಕೋನವು ಏಕಕಾಲಕ್ಕೆ ಸರ್ವ ವಸ್ತುಗಳ ಸರ್ವ ವಿಷಯದ ಮೇಲೆಯೂ ಇರುತ್ತದೆ. ಅವಳ ಅಂತಃಪ್ರಜ್ಞೆಯು ಯಾವುದನ್ನು ಸ್ವೀಕರಿಸಬೇಕು, ಯಾವುದನ್ನು ದೂರವಿಡಬೇಕು ಎನ್ನುವುದನ್ನು ನಿರ್ಣಯಿಸುತ್ತದೆ. ಹೀಗಾಗಿ ಯಶಸ್ವಿಯಾಗಿಯೇ ಸೂಕ್ತವಾದ ಅರ್ಹತೆಯುಳ್ಳ ಸಾಧನವನ್ನೇ ಅವಳು ಆಯ್ಕೆ ಮಾಡಿಕೊಳ್ಳುತ್ತಾಳೆ. ಅದು ಸೂಕ್ತ ಸಮಯದಲ್ಲಿ ಮತ್ತೆ ನಿಖರವಾದ ನಿಯಮದಲ್ಲಿಯೇ ರೂಪುಗೊಂಡಿರುತ್ತದೆ.

ನಿಷ್ಕಾಳಜಿ, ತಿರಸ್ಕಾರ, ಆಲಸ್ಯಗಳನ್ನು ಇವಳು ತೊಡೆದು ಹಾಕುತ್ತಾಳೆ. ವಿಚ್ಛಿದ್ರಗೊಳಿಸುವಂತಹ, ದ್ವೇಷಪೂರಿತ ಹಾಗೂ ಅಲ್ಲೋಲಕಲ್ಲೋಲಮಯ ಕಾರ್ಯಗಳನ್ನೂ ಛಿದ್ರಗೊಳಿಸುತ್ತಾಳೆ. ಜಟಿಲತಮದ ಎಲ್ಲವನ್ನೂ ಮತ್ತು ಪ್ರಮಾದಗಳನ್ನೂ, ಸರ್ವ ತಪ್ಪುಗಳನ್ನೂ ಹಾಗೂ ಉಪಕರಣಗಳ ದುರುಪಯೋಗ ಅಲ್ಲದೇ ಪರಿಣಿತರು ಕಾರ್ಯವಿಮುಖರಾಗಿರುವದನ್ನು, ಅಪರಿಪೂರ್ಣತೆಯತ್ತಲೇ ಸಾಗುತ್ತಿರುವದನ್ನು ಅಪರಾಧೀ ಕೃತ್ಯವೆಂದು ಭಾವಿಸಿ, ಇದು ಅವಳ ಸ್ವಭಾವಕ್ಕೆ ವಿರುದ್ಧವಾದುದೆಂದು ಸ್ವೀಕಾರಾರ್ಹವಲ್ಲವೆಂದು ಅವುಗಳನ್ನು ಹುಡಿಗುಟ್ಟಿಸುತ್ತಾಳೆ.

ಯಾವಾಗ ಅವಳ ಕಾರ್ಯವು ಪೂರ್ಣಗೊಳ್ಳುತ್ತದೆಯೋ, ಆಗ ಯಾವುದೂ ಮರೆತಿರುವದಿಲ್ಲ. ಯಾವ ಭಾಗವೂ ಸಹಿತ ಸೂಕ್ತವಲ್ಲದ ಜಾಗೆಯಲ್ಲಿ ಸ್ಥಿತಗೊಂಡಿರುವದಿಲ್ಲ. ಅಥವಾ ಆ ಭಾಗದಲ್ಲಿ ಅಳವಡಿಸುವದನ್ನೇ

ಮರರೆತಿರುವ ಸಂಭವವೂ ಇರುವದಿಲ್ಲ. ದೋಷಪೂರಿತ ಸ್ಥಾನದಲ್ಲಿ ಸ್ಥಿತಗೊಳಿಸಿರುವದಿಲ್ಲ. ಎಲ್ಲವೂ ಘನವಾಗಿಯೇ, ನಿಖರವಾಗಿಯೇ ಪೂರ್ಣವಾಗಿರುತ್ತದೆ. ಸರ್ವರೂ ಮೆಚ್ಚುವಂತೆಯೇ ಇರುತ್ತದೆ.

ಪರಿಪೂರ್ಣ ಪಕ್ವತೆಗೆ ಯಾವುದು ಕಡಿಮೆ ಇದ್ದರೂ ಸಹಿತ ಅವಳು ತೃಪ್ತಳಾಗುವದಿಲ್ಲ. ಅದನ್ನು ಎದುರಿಸಲು ಅವಳು ಶತ್ರುತ್ವ ಭಾವವನ್ನೂ ಸಹಿತ ತಾಳಬಲ್ಲಳು. ಅದನ್ನೆ ಎದುರಿಸಲೂ ಸಿದ್ಧಳಾಗಿರುತ್ತಾಳೆ. ಏಕೆಂದರೆ ಇಂತಹ ಶತ್ರುತ್ವವು ಪರಿಪೂರ್ಣತೆಯ ಸೃಷ್ಟಿಗೆ ಅತ್ಯಾವಶ್ಯವಾಗಿರುವ ಸಂಗತಿಯಾಗಿದೆ. ಆದ್ದರಿಂದ ಶ್ರೀಮಾತೆಯ ಸರ್ವಶಕ್ತಿಗಳಲ್ಲಿ ಇವಳು ಮಾತ್ರ ಮನುಕುಲದ ಜೊತೆಗೆ ಅತ್ಯಂತ ಸುದೀರ್ಘವಾದ ತೊಂದರೆಯನ್ನೇ ಎದುರಿಸಬೇಕಾಗಿದೆ. ಏಕೆಂದರೆ, ಮಾನವನು ಸದಾ ಅಪರಿಪೂರ್ಣತೆಯ ಮಾಯೆಯಲ್ಲಿಯೇ ಇರಲು ಯತ್ನಿಸುವವನಾಗಿದ್ದಾನೆ.

ದಯೆ, ಮುಗುಳ್ನಗೆ, ಆತ್ಮೀಯತೆ ಹಾಗೂ ಸಹಕಾರಗಳು ಅಷ್ಟೊಂದು ಸುಲಭದಲ್ಲಿ ಮಾನವನಲ್ಲಿ ಕಾಣಲು ಸಾಧ್ಯವಿಲ್ಲ. ಇವಿಲ್ಲದಿದ್ದರೆ ಅವನ ಬದುಕನ್ನು ಶ್ರುತಿಬದ್ಧಗೊಳಿಸಲೂ ಸಾಧ್ಯವಿಲ್ಲ. ಅದರಲ್ಲೂ ಹಲವಾರು ಸೋಲಿನ ನಂತರದಲ್ಲಿ ಮಾನವನಲ್ಲಿ ಮರುವ ಹತಾಶೆ, ಅಧೈರ್ಯದಿಂದ ಹೊರತರುವದೂ ಅಷ್ಟು ಸುಲಭದಲ್ಲಿ ಸಾಧ್ಯವಾಗುವದಿಲ್ಲ. ಆದರೆ ಇಂತಹ ಎಲ್ಲ ಸಂದರ್ಭಗಳಲ್ಲಿ ಈ ಶ್ರೀಮಾತೆಯ ಕೃಪಾಹಸ್ತಗಳು ನಮ್ಮನ್ನು ಸಂರಕ್ಷಿಸುತ್ತವೆ. ನಮ್ಮ ಪ್ರತಿಯೊಂದು ಹೆಜ್ಜೆಯನ್ನೂ ನಮ್ಮ ಇಚ್ಛೆಯಲ್ಲಿಯೇ ಏಕಾಂಗಿಯಾಗಿ ಸಾಧಿಸುವ ಸಲುವಾಗಿ ಇರುವ ಅಭಿಲಾಷೆಯೊಂದಿಗೆ ಪ್ರಾಮಾಣಿಕರಾಗಿರುವಂತೆ ಹಾಗೂ ನೇರ ಪಥದಲ್ಲಿ ಸಾಗುವಂತೆ ಮಾಡುತ್ತಾಳೆ.

ದ್ವಂದ್ವ ಮನೋಭಾವವನ್ನು ಅವಳು ಎಂದಿಗೂ ಸಹಿಸುವದಿಲ್ಲ. ಕೇವಲ ಮೇಲ್ತೋರಿಕೆಗಾಗಿ ಇರುವ ಸಂಧರ್ಬಗಳನ್ನು ಕಂಡಾಗಲೆಲ್ಲ ಅವಳ ಪ್ರತಿಕಾರವು ತೀಕ್ಷ್ಣವಾಗಿಯೇ ಇರುತ್ತದೆ. ಜೊತೆಗೆ ಅಷ್ಟೇ ನಾಟಕೀಯವಾಗಿರುವಂತೆಯೇ ಇರುತ್ತದೆ.

ಇವಳು ನಮ್ಮ ಬಯಕೆಗಳನ್ನು ಈಡೇರಿಸುವ ಮಾತೆಯಾಗಿದ್ದಾಳೆ. ಕಷ್ಟ ಕಾಲದಲ್ಲಿ ಸಹಾಯಕ್ಕೆ ಬರುವ ಮಿತ್ರನೋಪಾದಿ ಇದ್ದಾಳೆ. ಸದಾ ಸ್ಥಿತಪ್ರಜ್ಞೆಯಲ್ಲಿರುವ ಅಪ್ರತಿಮ ಸಲಹೆಗಾರಳಾಗಿದ್ದಾಳೆ. ಹಾಗೂ ಜೀವನ ಶಿಲ್ಪಿಯೂ ಆಗಿದ್ದಾಳೆ. ಅಲ್ಲಲ್ಲಿ

ದಟ್ಟೈಯಿಸಿಕೊಂಡು ಬರುವ ಹತಾಶೆಯ, ಭಯದ ಮೋಡಗಳನ್ನು ಅವಳು ತನ್ನ ಕಾಂತಿಯುಕ್ತ ಮಂದಸ್ಮಿತದಲ್ಲಿಯೇ ಚೆದುರಿಸಿ ಬಿಡುತ್ತಾಳೆ. ಯಾವಾಗಲೂ ಸಹಾಯಕ್ಕೆ ಬರುವದನ್ನು ಪದೇ ಪದೇ ನೆನಪಿಸುತ್ತಾಳೆ. ಆ ಶಾಶ್ವತದ ಸೂರ್ಯೋದಯದ ಕಡೆಗೆ ನಮ್ಮ ದೃಷ್ಟಿಕೋನವನ್ನು ಗುರಿ ಇರಿಸುವಂತೆ ಮಾರ್ಗದರ್ಶನ ಮಾಡುತ್ತಾಳೆ. ಅವಳು ನಿಶ್ಚಿಂತಳು. ಪ್ರಶಾಂತಳು. ಯಾವಾಗಲೂ ನಿರಂತರವಾಗಿರುವ ಆತ್ಮಗತವಾಗಿರುವ ಅಭೀಪ್ಸೆಯಲ್ಲಿಯೇ ತನ್ನನ್ನು ಸ್ಥಿತಗೊಳಿಸಿಕೊಂಡಿದ್ದಾಳೆ. ಈ ಅಭೀಪ್ಸೆಯೂ ನಮ್ಮನ್ನು ಆ ಊರ್ಧ್ವದ ಪರಮೋಚ್ಚ ಭಾವಕ್ಕೆ ಕರೆದುಕೊಂಡು ಹೋಗುವ ಸದಿಚ್ಛೆಯಾಗಿದೆ. ಇಲ್ಲಿಯೇ ಉಳಿದೆಲ್ಲ ಶಕ್ತಿಗಳೂ ಸಹಮತದಿಂದ ಮಹಾಸರಸ್ವತಿಯ ಪರಿಪೂರ್ಣತೆಗೆ ಸಹಕರಿಸುತ್ತವೆ. ಭೌತಿಕದ ಆಧಾರದ ಸಲುವಾಗಿ ಭರವಸೆಯನ್ನೂ, ಆಂತರ್ಯದ ಸಾರವನ್ನು ವಿಶದೀಕರಿಸುವ ಹಾಗೂ ಇಡೀ ವಿನ್ಯಾಸದ ಸವಿವರಗಳನ್ನು ಆನ್ವೇಷಿಸುವ ಹಾಗೂ ರೂಪಣೆಗೊಳಿಸುವ ಶಕ್ತಿ ಇವಳಾಗಿದ್ದಾಳೆ.

[ಈ ವಿಷಯವನ್ನು ಕೆ.ಎಸ್. ಅಮೂರ ಅವರು ಈ ರೀತಿಯಲ್ಲಿ ಕನ್ನಡದಲ್ಲಿ ರೂಪಿಸಿದ್ದಾರೆ:

(1) ಮಹಾಸರಸ್ವತಿಯು ಪರಾಮಾತೆಯ ಕ್ರಿಯೆಯ, ಪರಿಪೂರ್ಣತೆಯ ಮತ್ತು ವ್ಯವಸ್ಥಾ ವಿಧಾನದ ಚೇತನಳಾಗಿದ್ದಾಳೆ. (2) ಪರಾಮಾತೆಯ ನಾಲ್ಕು ಅಭಿವ್ಯಕ್ತ ರೂಪಗಳಲ್ಲಿ ಅವಳು ಅತ್ಯಂತ ಕಿರಿಯವಳಾಗಿದ್ದಾಳೆ, ಕಾರ್ಯ ನಿರ್ವಹಣೆಯ ಸಾಮರ್ಥ್ಯದಲ್ಲಿ ಅತ್ಯಂತ ನಿಪುಣಳು ಮತ್ತು ಪ್ರಕೃತಿಗೆ ಅತಿ ಹತ್ತಿರದವಳಾಗಿದ್ದಾಳೆ.

(3) ಮಹೇಶ್ವರಿಯು ವಿಶ್ವಶಕ್ತಿಗಳ ಚಾಲನೆಗೆ ವಿಶಾಲ ರೂಪರೇಖೆ–ಗಳನ್ನಿರಿಸಿದ್ದಾಳೆ. (4) ಮಹಾಕಾಳಿಯು ಅವುಗಳ ಚೇತನ ಹಾಗೂ ರಭಸಗಳ ಚಾಲನೆ ನೀಡುತ್ತಾಳೆ. (5) ಮಹಾಲಕ್ಷ್ಮಿಯು ಅವುಗಳ ಲಯಬದ್ಧತೆಯನ್ನು, ಪ್ರಮಾಣಗಳನ್ನು ಕಂಡುಹಿಡಿಯುತ್ತಾಳೆ. (6) ಆದರೆ ಮಹಾಸರಸ್ವತಿಯು ಅವುಗಳ ಸಂಘಟನೆ, ನಿರ್ವಹಣೆಗಳ ಮೇಲೆ, (7) ಶಕ್ತಿಗಳ ಭಾಗಗಳ ಪರಿಣಾಮಕಾರಿ ಸಂಯೋಜನೆಯ ಮೇಲೆ ಮತ್ತು ವಿಫಲವಾಗದ ಪರಿಣಾಮದ ನಿಖರತೆ ಹಾಗೂ ಸಫಲತೆಯ ಎಲ್ಲ ವಿವರಗಳ ಮೇಲೆ ಅಧ್ಯಕ್ಷತೆ ವಹಿಸುತ್ತಾಳೆ.]

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/22–23**

# ತೋಷಪೂರ್ಣ ಶ್ರೀಮಾತೆ

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ಶ್ರೇಷ್ಠ ದೈವೀ ಪ್ರೇಮ ಮತ್ತು ಆನಂದ

*"ದಿವ್ಯ ಮಾತೆಯವರ ಭಿನ್ನವಾದ ಶ್ರೇಷ್ಠ ವ್ಯಕ್ತಿತ್ವಗಳಿವೆ, ಆದರೆ ಅವುಗಳನ್ನು ಕೆಳತರುವುದು ಕಷ್ಟಕರವಾದ ಕೆಲಸವಾಗಿತ್ತು ಮತ್ತು ಭೂ–ಚೇತನದ ವಿಕಸನದಲ್ಲಿ ಅವುಗಳು ಅಷ್ಟು ಪ್ರಮುಖವಾಗಿ ಮುಂದಲೆಯಲ್ಲಿ ನಿಲ್ಲಲಿಲ್ಲ. ಸುಪ್ರಮಾನಸ ಸಾಕ್ಷಾತ್ಕಾರಕ್ಕಾಗಿ ಅವುಗಳಲ್ಲಿಯ ಕೆಲವು ಉಪಸ್ಥಿತಿಗಳು ಅವಶ್ಯವಾಗಿದ್ದವು, – ಅವುಗಳಲ್ಲಿಯ ಬಹಳಷ್ಟು ಅವರ ಆ ಅತ್ಯುನ್ನತ ದೈವೀ ಪ್ರೇಮದಿಂದ ಹರಿಯುವಂಥ ರಹಸ್ಯ ಮತ್ತು ಪ್ರಬಲ ಭಾವಪರವಶತೆ ಮತ್ತು ಆನಂದ ಸುಪ್ರಮಾನಸ ಚೈತನ್ಯದ ಮತ್ತು ಅತ್ಯಂತ ಕೆಳ ಪ್ರಪಾತದ ನಡುವಿನ ಭೇದವನ್ನು ಶಮನಿಸುವಂಥ ಆನಂದ, ಅದ್ಭುತವಾದ ಸರ್ವೋತ್ಕೃಷ್ಟ ದೈವೀ ಜೀವನದ ಆಧಾರವಾಗಿರುವಂಥ ಆನಂದ ಮತ್ತು ಈಗಲೂ ಸಹ ತನ್ನ ರಹಸ್ಯಗಳಿಂದ ವಿಶ್ವದ ಎಲ್ಲ ಪ್ರಾಬಲ್ಯಗಳ ಕಾರ್ಯವನ್ನು ಬೆಂಬಲಿಸುವಂಥ ಆನಂದ."*

*ಪ್ರೀತಿಯ ಶ್ರೀಮಾತೆಯವರೆ, ಇದೆಂಥ ವ್ಯಕ್ತಿತ್ವ ಮತ್ತು ಆ ವ್ಯಕ್ತಿತ್ವವು ಯಾವಾಗ ಪ್ರಕಟಗೊಳ್ಳುತ್ತದೆ?*

ನಿನ್ನ ಪ್ರಶ್ನೆ: ಇದೆಂಥ ವ್ಯಕ್ತಿತ್ವ ಮತ್ತು ಆ ವ್ಯಕ್ತಿತ್ವವು ಯಾವಾಗ ಪ್ರಕಟಗೊಳ್ಳುತ್ತದೆ? (ಮೌನ) ಇದು ನನ್ನ ಉತ್ತರ:

"ಆ ವ್ಯಕ್ತಿತ್ವವು ಪ್ರಕಟವಾಗಿದೆ, ಆ ವ್ಯಕ್ತಿತ್ವವು ತನ್ನೊಡನೆ ತೇಜಸ್ಸಿನ ಪ್ರಭಾವವನ್ನು ಮತ್ತು ಪ್ರೇಮವನ್ನು, ಈವರೆಗೆ ಈ ಭುವಿಗೆ ಗೊತ್ತಿರದ ಒಂದು ದಿವ್ಯಾನಂದವನ್ನು ತರುತ್ತ ಪ್ರಕಟವಾಗಿದೆ.

ಆದ್ದರಿಂದ ಭೌತಿಕ ಪರಿಸರವು ಸಂಪೂರ್ಣವಾಗಿ ಬದಲಾಗಿದೆ, ಹೊಸದಾದ ಮತ್ತು ಅದ್ಭುತ ಸಾಧ್ಯತೆಗಳೊಂದಿಗೆ ಶುದ್ಧವಾಗಿದೆ.

ಇಲ್ಲಿ ನೆಲೆಸಲು ಮತ್ತು ಕಾರ್ಯನಿರ್ವಹಿಸಲು ಆಕೆಗೆ ಸಾಧ್ಯವಾಗಬೇಕಾದರೆ, ಅವಳು ಕನಿಷ್ಠಪಕ್ಷ ಗ್ರಹಿಕೆಯನ್ನು ಪೂರೈಸಲು, ಪ್ರಾಣಿಕ ಮತ್ತು ಭೌತಿಕ

ಸ್ವಭಾವದಲ್ಲಿ ಅಗತ್ಯ ಗುಣಗಳನ್ನು ಹೊಂದಿರುವ ಕನಿಷ್ಠ ಒಬ್ಬ ಮನುಷ್ಯನನ್ನು ಕಂಡುಕೊಳ್ಳಲು, ಒಂದು ರೀತಿಯ ಸ್ವಯಂಪ್ರೇರಿತ ಮತ್ತು ಅಖಂಡ ಶುದ್ಧತೆಯ ಉಡುಗೊರೆ ಪಡೆದ 'ಸೂಪರ್–ಪಾರ್ಶಿಫಲ'ನಂತೆ (ಜರ್ಮನ್ ಪುರಾಣದಲ್ಲಿ ಬರುವ ಒಬ್ಬ ನಾಯಕನ ಪಾತ್ರ), ಹಾಗೆಯೆ ಅವಳು ತಂದ ಆನಂದದ ತೀವ್ರತೆಯನ್ನು ಸಹಿಸಿಕೊಳ್ಳುವ ಸಲುವಾಗಿ ಬಲಿಷ್ಠ ಮತ್ತು ಸಮತೋಲಿತ ದೇಹವನ್ನು ಹೊಂದುವ ಅಗತ್ಯವಿದೆ.

ಯಾವುದು ಅವಶ್ಯಕವಾಗಿತ್ತು ಅದನ್ನು ಇನ್ನೂವರೆಗೂ ಅವಳು ಪಡೆದುಕೊಂಡಿಲ್ಲ. ಪುರುಷರು ಮೊಂಡುತನದಿಂದ ಪುರುಷರಾಗಿ ಉಳಿಯುತ್ತಾರೆ ಮತ್ತು ಶ್ರೇಷ್ಠ ಪುರುಷರಾಗಲು ಬಯಸುವುದಿಲ್ಲ ಅಥವಾ ಆಗಲಾರರು. ಅವರು ಪ್ರೇಮವನ್ನು ಮಾತ್ರ ಸ್ವೀಕರಿಸುತ್ತಾರೆ ಮತ್ತು ತಮ್ಮ ಯೋಗ್ಯತೆಗನುಸಾರವಾಗಿ ಕತ್ತರಿಸುತ್ತಾರೆ – ಮಾನವೀಯ ಪ್ರೇಮ! ಒಂದು ಅದ್ಭುತವಾದ ದಿವ್ಯಾನಂದದ ಹರ್ಷವು ಅವರ ಅನುಭೂತಿಯಿಂದ ಪಾರಾಗುತ್ತದೆ.

ಆದ್ದರಿಂದ, ಅವರನ್ನು ಸ್ವೀಕರಿಸಲು ಜಗತ್ತು ಸಿದ್ಧವಾಗಿಲ್ಲವೆಂದು ಕಂಡುಕೊಂಡು ಕೆಲವೊಮ್ಮೆ ಅವರು ಹಿಂದಕ್ಕೆ ಸರಿಯುವ ಬಗ್ಗೆ ಯೋಚನೆ ಮಾಡುತ್ತಾರೆ. ಆಗ ಈ ಜಗತ್ತು ಒಂದು ಕರಾಳ ಕಂಗಾಲ ಸ್ಥಿತಿಯಾಗಿರುತ್ತದೆ. ಅವರಿಗೆ ತಮ್ಮನ್ನು ತಾವು ಪ್ರಕಟಪಡಿಸಿಕೊಳ್ಳುವುದಕ್ಕೆ ಅವಕಾಶವಿಲ್ಲದಿರುವುದರಿಂದ, ಸಧ್ಯದ ಕ್ಷಣಕ್ಕೆ ಅವರ ಉಪಸ್ಥಿತಿಯು ಕ್ರಿಯಾತ್ಮಕತೆಗಿಂತ ಹೆಚ್ಚು ನಾಮಮಾತ್ರವಾಗಿರುವುದು ಸತ್ಯ. ಆದರೂ ಸಹ ಎಲ್ಲ ಕಾಯಕಗಳಲ್ಲಿ ಅವರೊಂದು ಪ್ರಬಲವಾದ ನೆರವು. ಶ್ರೀಮಾತೆಯವರ ಎಲ್ಲ ಅಭಿವ್ಯಕ್ತಿಗಳಲ್ಲಿ ದೇಹದ ರೂಪಾಂತರಣಕ್ಕೆ ಇದೊಂದು ಶ್ರೇಷ್ಠ ಸಾಮರ್ಥ್ಯವಾಗಿದೆ. ವಾಸ್ತವವಾಗಿ ದಿವ್ಯಾನಂದದ ಸ್ಪರ್ಶಕ್ಕೆ ಕಂಪಿಸುವ ಅದನ್ನು ಸ್ವೀಕರಿಸುವ ಮತ್ತು ಕಾಪಾಡುವ ಕೋಶಗಳು ಅಮರವಾಗುವ ಪಥದಲ್ಲಿ ಪುನಶ್ಚೇತನಗೊಂಡ ಕೋಶಗಳಾಗಿವೆ. ಆದರೆ ದಿವ್ಯಾನಂದದ ಕಂಪನಗಳು ಮತ್ತು ತೃಪ್ತಿಯ ಕಂಪನಗಳು ಒಂದೇ ಪ್ರಾಣಿಕ ಮತ್ತು ಭೌತಿಕ ವ್ಯವಸ್ಥೆಯಲ್ಲಿ ಒಟ್ಟಿಗೆ ಇರಲಾರವು. ಆದ್ದರಿಂದ ಎಲ್ಲ ನಲಿವುಗಳನ್ನು ಅನುಭವಿಸುವುದನ್ನು ಸಂಪೂರ್ಣವಾಗಿ ತ್ಯಜಿಸಬೇಕು – ಆನಂದವನ್ನು ಸ್ವೀಕರಿಸುವ ಸ್ಥಿತಿಯಲ್ಲಿರಬೇಕಾದರೆ, ಕ್ರಿಯಾತ್ಮಕ ಜೀವನದಲ್ಲಿ ಎಲ್ಲ ಭಾಗವಹಿಸುವಿಕೆಯನ್ನು ತ್ಯಜಿಸದೆ ಮತ್ತು ಕಠೋರವಾದ ಸನ್ಯಾಸತ್ವದಲ್ಲಿ

ಧುಮುಕದೆ ನಲಿವನ್ನು ತ್ಯಜಿಸುವವರು ಕೆಲವರಿದ್ದಾರೆ. ಈ ಕ್ರಿಯಾತ್ಮಕ ಜೀವನದಲ್ಲಿ ಪರಿವರ್ತನೆಯಾಗುವುದೆಂದು ಅವರಲ್ಲಿ ಕೆಲವರು ತಿಳಿದಿದ್ದಾರೆ, ಕೆಲವರು ನಲಿವನ್ನು ಆನಂದದ ವಿರೂಪವಾದ ರೂಪವನ್ನಾಗಿ ನೋಡುತ್ತಾರೆ, ಅಂತೆಯೆ ತಮ್ಮಲ್ಲಿಯ ವೈಯಕ್ತಿಕ ಸಮಾಧಾನದ ಅನ್ವೇಷಣೆಯನ್ನು ಸಮರ್ಥಿಸಿಕೊಳ್ಳುತ್ತಾರೆ, ತಮ್ಮ ಸ್ವಂತ ಪರಿವರ್ತನೆಗೆ ಒಂದು ದುಸ್ತರವಾದ ಅಡಚಣೆಯನ್ನು ತಮ್ಮಷ್ಟಕ್ಕೆ ತಾವು ಸೃಷ್ಟಿಸಿಕೊಳ್ಳುತ್ತಾರೆ."

*ಆದರೆ ಶ್ರೀಮಾತೆಯವರೆ, ಅವಳು ಒಂದು ಸಾಧ್ಯತೆಯನ್ನು ನೋಡಿರುವುದರಿಂದಲೇ ಕೆಳಗಿಳಿದು ಬಂದಿರಬೇಕು!*

ಸಾಧ್ಯತೆಯೊಂದು ಇದ್ದುದರಿಂದ ಅವಳು ಅವತರಣಗೊಂಡು ಬಂದಳು, ಯಾಕೆಂದರೆ ಸನ್ನಿವೇಶಗಳು ಒಂದು ಹಂತಕ್ಕೆ ಬಂದಿದ್ದವು ಮತ್ತು ಅವಳು ಕೆಳಗಿಳಿದು(ಅವತರಣಗೊಂಡು) ಬರಬೇಕಾದ ಸಮಯವೂ ಬಂದಿತ್ತು.

ಅವಳು ಸಫಲಳಾಗಬಹುದೆಂಬ ಸಾಧ್ಯತೆಯಿಂದ ಅವಳು ಕೆಳಗಿಳಿದು ಬಂದಳೆಂದು ನನ್ನ ಅನಿಸಿಕೆ. (ಮೌನ) ಸಾಧ್ಯತೆಗಳು ಯಾವಾಗಲೂ ಇರುತ್ತವೆ,... ಅವುಗಳು ಫಲಕಾರಿಯಾಗಬೇಕು. ನೋಡು, ಹೇಳಿದ ಘಳಿಗೆಯಲ್ಲಿ ಮತ್ತು ಅವಧಿಯಲ್ಲಿ ನಾನು ನಿನಗೆ ಹೇಳಿದ್ದೆಲ್ಲವೂ ಸಂಭವಿಸಿದೆ ಎಂದು ಹೇಳಲು ಸಾಕ್ಷ್ಯವಿದೆ... ಎರಡು ಅಥವಾ ಮೂರು ವಾರಗಳವರೆಗೆ ಆಶ್ರಮದ ಪರಿಸರ ಮಾತ್ರವಲ್ಲದೆ ಭೂಮಿಯ ಪರಿಸರವು ಸಹ ಇಂಥದೊಂದು ಪ್ರಭಾವದಿಂದ ತುಂಬಿತ್ತು, ನಿಖರವಾಗಿ ಹೇಳಬೇಕೆಂದರೆ, ಈ ಮೊದಲು ಮಾಡಲು ಕಠಿಣವೆನಿಸಿದ ಕಾರ್ಯಗಳನ್ನು ಈಗ ಕ್ಷಣಾರ್ಧದಲ್ಲಿ ಮಾಡಲು ಒಂದು ಅದ್ಭುತ ಸಾಮರ್ಥ್ಯವು ಒಂದು ತೀವ್ರವಾದ ದಿವ್ಯಾನಂದದೊಂದಿಗೆ ಸೃಷ್ಟಿಯಾಗಿದೆ! ಇಡೀ ಜಗತ್ತಿನಲ್ಲಿ ಅದರ ಪರಿಣಾಮಗಳಾಗಿದ್ದವು. ನಿಮ್ಮಲ್ಲಿಯ ಯಾರಿಗಾದರೂ ಅದರ ಅರಿವಿತ್ತೆಂದು ನನಗನಿಸುವುದಿಲ್ಲ. ಅದು ಯಾವಾಗ ಸಂಭವಿಸಿತ್ತೆಂದು ನೀವು ನನಗೆ ಹೇಳಲು ಸಹ ಸಾಧ್ಯವಿಲ್ಲ, ಹೇಳುತ್ತೀರಾ?

*ಅದು ಯಾವಾಗ ಸಂಭವಿಸಿತು?*

ದಿನಾಂಕಗಳು ನನಗೆ ಗೊತ್ತಿಲ್ಲ. ನನಗೆ ಗೊತ್ತಿಲ್ಲ. ದಿನಾಂಕಗಳು ನನಗೆ ನೆನಪಿಲ್ಲ. ನಾನು ನಿನಗೆ ನಿಖರವಾಗಿ ಹೇಳಲಾರೆ... (ಮೌನ) ಬಹುಶಃ ನಾನು ನನ್ನ

ಲೇಖನಗಳನ್ನು ನೋಡಿದರೆ ದಿನಾಂಕವನ್ನು ಕಂಡು ಹಿಡಿಯಬಹುದು. ಆದರೆ ನನಗೆ ದಿನಾಂಕಗಳು ಗೊತ್ತಿಲ್ಲ. ನನಗೆ ಗೊತ್ತಿರುವಂತೆ, ಈ ಘಟನೆಗಳೆಲ್ಲವೂ ಶ್ರೀ ಅರವಿಂದರು ತಮ್ಮ ದೇಹವನ್ನು ಬಿಡುವುದಕ್ಕಿಂತ ಮೊದಲಿನವು. ಈ ವಿಷಯಗಳನ್ನು ಶ್ರೀ ಅರವಿಂದರಿಗೆ ಮೊದಲೇ ಹೇಳಲಾಗಿತ್ತು ಮತ್ತು ಮಾನ್ಯ ಮಾಡಲಾಗಿತ್ತು...

(ಮೌನ)

ಅವಚೇತನದೊಂದಿಗೆ ಒಂದು ದೊಡ್ಡ ಯುದ್ಧವೇ ನಡೆಯಿತು; ಇರಬೇಕಾಗಿದ್ದು ಗ್ರಹಣಶಕ್ತಿ ಎಂದು ನಾನು ನೋಡಿದ್ದರಿಂದ ನಾನು ಜವಾಬ್ದಾರಿಯನ್ನು ಅವಚೇತನದ ಮೇಲೆ ಹಾಕಿದೆ ಮತ್ತು ಅಲ್ಲಿ ನಾನು ಸೆಣಸಲು ಪ್ರಯತ್ನಿಸಿದೆ. ಇದರ ಪರಿಣಾಮವಾಗಲಿಲ್ಲವೆಂದು ನಾನು ಹೇಳಲಾರೆ, ಆದರೆ ನಿರೀಕ್ಷಿಸಿದ ಪರಿಣಾಮ ಮತ್ತು ಪಡೆದುಕೊಂಡ ಪರಿಣಾಮಗಳ ಮಧ್ಯೆ ದೊಡ್ಡ ವ್ಯತ್ಯಾಸವಿತ್ತು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/291–94**

**ತಪಸ್ವಿ ಶಿಸ್ತು ಮತ್ತು ವಿಲಾಸವನ್ನು ತ್ಯಜಿಸುವಿಕೆ**

*ತಪಸ್ವಿ ಶಿಸ್ತು ಬಂಧನವನ್ನು ಜಯಿಸಲು ಸಹಾಯ ಮಾಡುತ್ತದೆಯೆ?*

ಇಲ್ಲ, ಅದು ನಿಮ್ಮ ಪ್ರತಿಷ್ಠೆಯನ್ನು ಹಿಗ್ಗಿಸುತ್ತದೆ ಮತ್ತು ಗಟ್ಟಿಗೊಳಿಸುತ್ತದೆ.

*ಆದರೆ "ವಿಲಾಸವನ್ನು ತ್ಯಜಿಸು" ಎಂದು ನೀವು ಹೇಳಿದಿರಿ. ಮುಂದೆ...*

ವಿಲಾಸವನ್ನು ತ್ಯಜಿಸು... ಆದರೆ ವಿಲಾಸವನ್ನು ತಪಸ್ವಿ ಶಿಸ್ತಿನ ಮುಖಾಂತರ ತ್ಯಜಿಸುವುದಲ್ಲ! ಸ್ಥೂಲವಾದ ಆಂತರಿಕ ಬೆಳಕಿನ ಮುಖಾಂತರ ಮತ್ತು ವಿಲಾಸದಲ್ಲಿ ಎಲ್ಲವೂ (ಸಮಸ್ತವಾದದ್ದು, ಅಸ್ಪಷ್ಟವಾದದ್ದು ಮತ್ತು ಅಹಿತಕರವಾದದ್ದು ಎಲ್ಲವೂ) ಎಂದು ನೀನು ಭಾವಿಸುವಂತೆ ಮಾಡುವ ಒಂದು ರೀತಿಯ ಉದಾತ್ತತೆಯಿಂದ ತ್ಯಜಿಸು.

*ಸ್ಥೂಲವಾದ ವಿಲಾಸದಲ್ಲಿ ನಾವಿರುತ್ತಿದ್ದರೆ ಅವುಗಳನ್ನು ಜಯಿಸುವುದು ಹೇಗೆ?*

ಆದರೆ ನೀವು ಪ್ರತ್ಯೇಕವಾಗಿ ಸ್ಥೂಲ ವಿಲಾಸದಲ್ಲಿ ಇರುತ್ತಿಲ್ಲ; ಇಲ್ಲದಿದ್ದರೆ ನೀವು ಇಲ್ಲಿ ಇರುತ್ತಿರಲಿಲ್ಲವೆಂದುಕೊಳ್ಳುತ್ತೇನೆ.

*ಆದರೆ, ಎಲ್ಲವೂ ವಿಲಾಸವೆ, ಹೌದಲ್ಲವೆ? ವಿಲಾಸ ಅಂದರೆ... ವಿಲಾಸ. ನಾವು ಹಿತವಾಗಿ ಇರುತ್ತೇವೆ, ನಾವು ತಿನ್ನುತ್ತೇವೆ, ಇತ್ಯಾದಿ. ಅದೆಲ್ಲವೂ ವಿಲಾಸವಲ್ಲವೆ?*

(ಅಚ್ಚರಿಯಾಗಿ) ನೀವು ಎಲ್ಲವನ್ನೂ ವಿಲಾಸಕ್ಕಾಗಿ ಮಾಡುತ್ತೀರಾ? (ನಗು) ಬಹುಶಃ ಅದು ನಿಮ್ಮ ವಿಚಾರ, ನಾನು ನಿಮಗೆ ಹೇಳುವುದು ಏನೂ ಇಲ್ಲ. ಉನ್ನತ ಜೀವನಕ್ಕೆ ಬಯಸುವುದರ ಮತ್ತು ಸಾಧಾರಣ ಜೀವನದಲ್ಲಿ ಹಿತವನ್ನು ಕಂಡುಕೊಳ್ಳುವುದರ ನಡುವಿನ ವತ್ಯಾಸವನ್ನು ನೀವು ಅರಿತುಕೊಳ್ಳದಿದ್ದರೆ, ನಾನು ನಿಮಗೆ ಸಹಾಯ ಮಾಡಲಾರೆ. ನೀವು ಮೊದಲು ಅದನ್ನು ನಿಮ್ಮಲ್ಲಿ ಕಂಡುಕೊಳ್ಳಬೇಕು.

*ಆದರೆ ಯಾವುದೋ ಬಾಹ್ಯ ಶಿಸ್ತು ಸಹಾಯಮಾಡಲಾರದೆ?*

ಶಿಸ್ತನ್ನು ನೀವು ನಿಮ್ಮ ಮೇಲೆ ಹೇರಿಕೊಂಡರೆ ಮತ್ತು ಅದು ಅತಿ ಮೂರ್ಖತನವಾಗಿಲ್ಲದಿದ್ದರೆ, ಅದು ನಿಮಗೆ ಸಹಾಯ ಮಾಡಬಹುದು. ನಾನು ನಿಮಗೆ ಹೇಳುತ್ತೇನೆ, ಒಂದು ಶಿಸ್ತು... ಶಿಸ್ತುಗಳು, ತಪಸ್ಸುಗಳು, ಎಲ್ಲ ವೈರಾಗ್ಯದ ಶಿಸ್ತುಗಳು (ಸಾಮಾನ್ಯವಾಗಿ ಅಭ್ಯಾಸ ಮಾಡುವಂತೆ) ನಿಮ್ಮನ್ನು ಹೆಮ್ಮೆ ಪಡುವಂತೆ ಮಾಡುವ ಉತ್ತಮ ವಿಧಾನಗಳು, ಅವು ಅದ್ಭುತವಾದ, ಎಂದೆಂದಿಗೂ ಮಾರ್ಪಡಿಸಲಾರದ ಒಂದು ಆತ್ಮಾಭಿಮಾನವನ್ನು ನಿಮ್ಮಲ್ಲಿ ಕಟ್ಟುವ ಸಾಧನ. ಅದನ್ನು ಸುತ್ತಿಗೆಯ ಹೊಡೆತಗಳಿಂದ ಭಗ್ನಗೊಳಿಸಲೇಬೇಕು.

ನೀವು ದೈವದಿಂದ ಮಾರ್ಗದರ್ಶನ, ಪೋಷಣೆ, ಸಹಾಯ, ಜ್ಞಾನೋದಯ ಪಡೆಯದ ಹೊರತು ನೀವು ಏನೂ ಅಲ್ಲವೆಂದು ಅರಿವು ಮೂಡಿಸುವಂಥ ಮೊದಲ ನಿಯಮ ಸ್ವಸ್ಥ ನಮ್ರತೆ. ನೀವು ಅದನ್ನು ಅನುಭವಿಸಿದಾಗ ಅದನ್ನು ನಿಮ್ಮ ಮನಸ್ಸಿನಿಂದ ಅರ್ಥಮಾಡಿಕೊಳ್ಳುವುದು ಮಾತ್ರವಲ್ಲ ಅದನ್ನು ನಿಮ್ಮ ದೇಹಕ್ಕೆ ಅನುಭವಿಸಿದ ನಂತರ ನೀವು ಬುದ್ಧಿವಂತರಾಗಲು ಪ್ರಾರಂಭಿಸುತ್ತೀರಿ, ಆದರೆ ಮೊದಲಲ್ಲ....

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/301–02 – ಶ್ರೀಮಾತೆ**

**ರಾಧಾ**

*ರಾಧಾ ಮತ್ತು ಕೃಷ್ಣರ ಬಗ್ಗೆ ಕೆಲವು ಸುಂದರವಾದ ಕವಿತೆಗಳನ್ನು ಕಲಿಸುತ್ತಲಿದ್ದೆ. ರಾಧಾ ಸಮಕಾಲೀನಳಂತೆ ತೋರುತ್ತಿದ್ದಳು. ರಾಧಾ ಕೃಷ್ಣ*

*ಪಂಥಕ್ಕೆ ಇತ್ತೀಚಿನ ಸೇರ್ಪಡೆ ಎಂದು ಆಧುನಿಕ ಪಂಡಿತರು ಹೇಳುತ್ತಾರೆ. ರಾಧಾ ಇದ್ದಳೋ ಅಥವಾ ಇಲ್ಲವೋ ಎಂದು ನೀವು ನನಗೆ ಹೇಳಬಹುದೆ?*

ಖಂಡಿತವಾಗಿ ಅವಳು ಇದ್ದಳು ಮತ್ತು ಈಗಲೂ ಇದ್ದಾಳೆ.

ಪ್ರೀತಿ ಮತ್ತು ಆಶೀರ್ವಾದಗಳು.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 4/286 – ಶ್ರೀಮಾತೆ**

**ರಾಧಾ ಎಂಬ ಮಹಾನ್ ಶಕ್ತಿ**

ಚಂಡಿಯಲ್ಲಿ (ಒಂದು ಗ್ರಂಥ) ಶ್ರೀಮಾತೆಯವರ ನಾಲ್ಕು ಬ್ರಹ್ಮಾಂಡ ಮಹಾನ್ ಶಕ್ತಿಗಳಾದ – ಮಹೇಶ್ವರಿ, ಮಹಾಕಾಳಿ, ಮಹಾಲಕ್ಷ್ಮಿ, ಮಹಾಸರಸ್ವತಿ ಹೆಸರುಗಳನ್ನು ಬೇರೆಯವರ ಜೊತೆಗೆ ಉಲ್ಲೇಖಿಸಲಾಗಿದೆ, ಆದರೆ ರಾಧಾ ಎಂಬ ಹೆಸರನ್ನು ಉಲ್ಲೇಖಿಸಿಲ್ಲ. ಚಂಡಿಯನ್ನು ರಚಿಸಿದಾಗ ರಾಧಾ ಎಂಬ ಪ್ರಭಾವವು ಸಂತರ ದೃಷ್ಟಿಗೆ ಪ್ರಕಟವಾಗಿರಲಿಲ್ಲ ಎನ್ನುವ ಸಂಗತಿಗೆ ಇದೊಂದು ಸ್ಪಷ್ಟ ಪ್ರಮಾಣ ಮತ್ತು ಚಂಡಿಯು ಶ್ರೀಮಾತೆಯವರ ಬ್ರಹ್ಮಾಂಡ ಮಹಾನ್ ಶಕ್ತಿಗಳನ್ನು ಮಾತ್ರ ಉಲ್ಲೇಖಿಸುತ್ತದೆ, ಆದರೆ ಅವಳ ಸುಪ್ರಮಾನಸ ಪ್ರಭಾವಗಳನ್ನಲ್ಲ. ಗ್ರಂಥದಲ್ಲಿ ಶ್ರೀಮಾತೆಯವರ ಸಾಮರ್ಥ್ಯಗಳನ್ನು ವರ್ಣಿಸಿದ ನಂತರ ನೀವು ಹೀಗೆ ಹೇಳಿದ್ದೀರಿ: “ದಿವ್ಯ ಮಾತೆಯವರ ಶ್ರೇಷ್ಠ ವ್ಯಕ್ತಿತ್ವಗಳಿವೆ, ಆದರೆ ಭೂ–ಚೇತನದ ವಿಕಸನದಲ್ಲಿ ಅವುಗಳು ಅಷ್ಟು ಪ್ರಾಧಾನ್ಯತೆಯಿಂದ ಮುಂದೆ ಬಂದು ನಿಂತಿಲ್ಲ ಮತ್ತು ಅವುಗಳನ್ನು ಕೆಳತರಲು ಕಷ್ಟವಾಗಿತ್ತು. ಸುಪ್ರಮಾನಸ ಸಾಕ್ಷಾತ್ಕಾರಕ್ಕಾಗಿ ಅವುಗಳಲ್ಲಿ ಕೆಲವು ಉಪಸ್ಥಿತಿಗಳು ಅವಶ್ಯವಾಗಿದ್ದವು, – ಅವುಗಳಲ್ಲಿಯ ಬಹಳಷ್ಟು ಅವರ ಆ ಅತ್ಯುನ್ನತ ದೈವೀ ಪ್ರೇಮದಿಂದ ಹರಿಯುವಂಥ ರಹಸ್ಯ ಮತ್ತು ಪ್ರಬಲ ಭಾವ ಪರವಶತೆ ಮತ್ತು ಆನಂದ ಸುಪ್ರಮಾನಸ ಚೈತನ್ಯದ ಮತ್ತು ಅತ್ಯಂತ ಕೆಳ ಪ್ರಪಾತದ ನಡುವಿನ ಭೇದವನ್ನು ಶಮನಿಸುವಂಥ ಆನಂದ, ಅದ್ಭುತವಾದ ಸರ್ವೋತ್ಕೃಷ್ಟ ದೈವೀ ಜೀವನದ ಆಧಾರವಾಗಿರುವಂಥ ಆನಂದ ಮತ್ತು ಈಗಲೂ ಸಹ ತನ್ನ ರಹಸ್ಯಗಳಿಂದ ವಿಶ್ವದ ಎಲ್ಲ ಸಾಮರ್ಥ್ಯಗಳ ಕಾರ್ಯವನ್ನು ಬೆಂಬಲಿಸುವಂಥ ಆನಂದ.” [ಪುಟಗಳು: 23–24] ಈ ಖಂಡಿಕೆಯಲ್ಲಿ ಪ್ರೇಮಮಯಿ ರಾಧಾ, ಮಹಾಪ್ರಾಣ ಶಕ್ತಿ ಮತ್ತು ಹ್ಲಾದಿನಿ ಶಕ್ತಿ ಎಂದು ಉಲ್ಲೇಖಿಸಿದ ವ್ಯಕ್ತಿತ್ವವು ರಾಧಾ ಎಂಬ ಪ್ರಭಾವ ಅಲ್ಲವೆ?

ಹೌದು – ರಾಧಾ–ಕೃಷ್ಣರ ಲೀಲಾ ವ್ಯಕ್ತಿತ್ವಗಳನ್ನು ಚೇತನ ಜಗತ್ತಿನಿಂದ ತೆಗೆದುಕೊಳ್ಳಲಾಗಿದೆ. ಆದ್ದರಿಂದ ರಾಧಾ ಪ್ರಭಾವವನ್ನು ಒಂದು ಸಣ್ಣ ಅಭಿವ್ಯಕ್ತಿಯನ್ನಾಗಿ ಮಾತ್ರ ಚಿತ್ರಿಸಲಾಗಿದೆ. ಆದುದರಿಂದ ಆಕೆಯನ್ನು ಮಹಾಪ್ರಾಣ ಶಕ್ತಿ ಮತ್ತು ಹ್ಲಾದಿನಿ ಶಕ್ತಿ ಎಂದು ಕರೆಯುತ್ತಾರೆ. ಏನನ್ನು ಉಲ್ಲೇಖಿಸಲಾಗಿದೆಯೊ ಅದು ಚಿಕ್ಕ ರೂಪದ್ದಲ್ಲ ಆದರೆ ಮೇಲಿನ ಪ್ರೇಮದ ಮತ್ತು ಆನಂದದ ಪೂರ್ಣ ಪ್ರಭಾವ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 32/72–73**

**ರಾಧೆಯ ಪ್ರಾರ್ಥನೆ**[1]

ಮೊದಲ ದರ್ಶನಕ್ಕೆ ನಾನು ಯಾರನ್ನು ನನ್ನ ಅಸ್ತಿತ್ವ ಮತ್ತು ನನ್ನ ದೇವರೆಂದು ಗೊತ್ತುಮಾಡಿಕೊಂಡ ದೇವರೆ ನನ್ನ ಅರ್ಪಣೆಯನ್ನು ಸ್ವೀಕರಿಸು.

ನನ್ನ ಎಲ್ಲ ಅಲೋಚನೆಗಳು, ನನ್ನ ಎಲ್ಲ ಭಾವನೆಗಳು, ನನ್ನ ಹೃದಯದ ಎಲ್ಲ ಭಾವನೆಗಳು, ನನ್ನ ಜೀವನದ ಎಲ್ಲ ಚಲನವಲನಗಳು, ನನ್ನ ದೇಹದ ಪ್ರತಿಯೊಂದು ಕೋಶವು, ನನ್ನ ರಕ್ತದ ಪ್ರತಿ ಹನಿಯು ಸ್ಪಷ್ಟವಾಗಿ ಎಲ್ಲವೂ ನಿಮ್ಮವು, ಸಂಕೋಚವಿಲ್ಲದೆ ನಿಮ್ಮವು. ನೀವು, ನಾನು ಏನಾಗಬೇಕೆಂದು ಅಂದುಕೊಂಡಿರುವಿರೊ, ನಾನು ಅದಾಗುವೆ. ನೀವು ನನಗಾಗಿ ಜೀವನವನ್ನು ಅಥವಾ ದುಃಖವನ್ನು, ನಲಿವು ಅಥವಾ ನೋವು ಆಯ್ಕೆ ಮಾಡಿದರೂ, ನಿಮ್ಮಿಂದ ನನಗಾಗಿ ಬರುವ ಎಲ್ಲವನ್ನೂ ಸ್ವಾಗತಿಸುತ್ತೇನೆ. ನಿಮ್ಮ ಪ್ರತಿಯೊಂದು ಕಾಣಿಕೆಗಳು ನನಗೆ ಯಾವಾಗಲೂ ಉನ್ನತ ಸೌಖ್ಯವನ್ನು ತನ್ನೊಡನೆ ತರುತ್ತಿರುವ ದೈವ ಕಾಣಿಕೆಯಾಗಿದೆ.

---

[1] *ಈ ಪ್ರಾರ್ಥನೆಯನ್ನು ಶ್ರೀಮಾತೆಯವರು ಮೂಲತಃ ಆಂಗ್ಲ ಭಾಷೆಯಲ್ಲಿ ಬರರೆದಿದ್ದರು, ಮರುದಿನ ಅದನ್ನು ಫ್ರೆಂಚ್ ಭಾಷೆಗೆ ಭಾಷಾಂತರಿಸಲಾಯಿತು. ನಂತರ, ಶ್ರೀ ಅರವಿಂದರು ಫ್ರೆಂಚ್ ಆವೃತ್ತಿಯನ್ನು ಆಂಗ್ಲ ಭಾಷೆಗೆ ಅನುವಾದ ಮಾಡಿದರು; ಭಾಷಾಂತರ ಮೇಲಿನಂತೆ ಇದೆ. ಇಂಗ್ಲಿಷೀನಲ್ಲಿರುವ ಶ್ರೀಮಾತೆಯವರ ಮೂಲ ಪ್ರಾರ್ಥನೆಯನ್ನು ಪಠ್ಯಗಳಲ್ಲಿ ಟಿಪ್ಪಣಿಯಾಗಿ ಕೊಡಲಾಗಿದೆ.*

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/647 – ಶ್ರೀ ಅರವಿಂದರು**

# ಆಕೃತಿಗಳು ಮತ್ತು ಭಾವಚಿತ್ರಗಳು

**– ಅನುವಾದ: ಡಾ॥ ಮಹಾದೇವ ಸಕ್ರಿ, ವಿಜಯಪುರ**

## ದೇವರುಗಳ ಮತ್ತು ದೇವತೆಗಳ ರೂಪ

ದೇವತೆಗಳಂತೆ, ಮನುಷ್ಯನು ಸ್ವೀಕರಿಸುವ ರೂಪಗಳನ್ನು ನಿರ್ಮಿಸಬಹುದು; ಆದರೆ ಈ ರೂಪಗಳು ಕೂಡ ದೇವರಿಗೆ ಸಂಬಂಧಿಸಿದ ಸ್ತರಗಳಿಂದ ಮನುಷ್ಯನ ಮನಸ್ಸಿನಲ್ಲಿ ಪ್ರೇರಿತವಾಗಿವೆ. ಎಲ್ಲ ರಚನೆಗೆ ಎರಡು ಮಗ್ಗುಲುಗಳಿವೆ, ಮೂರ್ತ ಮತ್ತು ಅಮೂರ್ತ; ದೇವರುಗಳು ಕೂಡ ಅಮೂರ್ತರಾಗಿದ್ದರೂ ಅವರಿಗೆ ಮೂರ್ತ ರೂಪಗಳಿವೆ, ಆದರೆ ದೇವರು ಅನೇಕ ರೂಪಗಳನ್ನು ತೆಗೆದುಕೊಳ್ಳಬಹುದು, ಇಲ್ಲಿ (ಭಾರತದಲ್ಲಿ) ಮಹೇಶ್ವರಿ ಅಲ್ಲಿ ಪಲ್ಲಾಸ್ ಅಥೆನ್ (ಗ್ರೀಕ್ ಪುರಾಣದಲ್ಲಿ ಬರುವ ದೇವತೆ). ಮಹೇಶ್ವರಿ ಸಹ ತನ್ನ ಕಡಿಮೆ ಅಭಿವ್ಯಕ್ತಿಗಳಲ್ಲಿ ಅನೇಕ ರೂಪಗಳನ್ನು ಹೊಂದಿದ್ದಾಳೆ, ದುರ್ಗಾ, ಉಮಾ, ಪಾರ್ವತಿ, ಚಂಡಿ, ಇತ್ಯಾದಿ. ದೇವರುಗಳು ಮನುಷ್ಯ ರೂಪಗಳಿಗೆ ಸೀಮಿತವಾಗಿಲ್ಲ – ಮನುಷ್ಯನು ಸಹ ಅವುಗಳನ್ನು ಯಾವಾಗಲೂ ಮನುಷ್ಯ ರೂಪಗಳಲ್ಲಿ ಮಾತ್ರ ನೋಡಿಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/67**

## ದೇವರುಗಳ ಮತ್ತು ದೇವತೆಗಳ ಪ್ರತಿಮೆಗಳು

*ನಾವು ನೋಡುವ ಸರಸ್ವತಿಯ ಪ್ರತಿಕೃತಿಗಳು (ಪ್ರತಿಮೆಗಳು) ನಿಜವೆ?*

ಓಹ್, ಭಗವನ್! (ನಗು) ಒಂದು ಅತಿ ಚಿಕ್ಕ ಮಗು ಒಬ್ಬರ ಭಾವಚಿತ್ರವನ್ನು ಮಾಡಲು ಪ್ರಯತ್ನಿಸಿದರೆ, ಅದು ಆ ವ್ಯಕ್ತಿಯನ್ನು ಹೋಲುತ್ತದೆಯೆ? ಇದೂ ಸಹ ಹೆಚ್ಚು ಕಮ್ಮಿ ಇದರಂತೆ ಇರುತ್ತದೆ, ಕೆಲವೊಮ್ಮೆ ಕೆಟ್ಟದಾಗಿರುತ್ತದೆ! ಮಗು ಮುಗ್ಧ ಮತ್ತು ಪ್ರಾಮಾಣಿಕವಾಗಿದೆ, ಆದರೆ ದೇವರುಗಳ ಪ್ರತಿಮೆಗಳನ್ನು ಮಾಡುವವನು ಸ್ಥಿರವಾದ ಕಲ್ಪನೆಗಳಿಂದ ಮತ್ತು ಪೂರ್ವಭಾವಿ ವಿಚಾರಗಳಿಂದ, ಇಲ್ಲವೆ ಬೇರೆಯವರು ಆ ವಿಷಯದ ಬಗ್ಗೆ ಹೇಳಿದ ಎಲ್ಲವನ್ನು ಮತ್ತು ಧರ್ಮ ಗ್ರಂಥಗಳಲ್ಲಿ ಏನು ಬರೆಯಲ್ಪಟ್ಟಿದೆ ಮತ್ತು ಜನರಿಂದ ಏನು ನೋಡಲ್ಪಟ್ಟಿದೆ ಎನ್ನುವುದನ್ನು ತುಂಬಿಕೊಂಡಿರುತ್ತಾನೆ. ಆದ್ದರಿಂದ ಅವನು ಅವೆಲ್ಲವುಗಳಿಗೆ

ಬದ್ಧನಾಗಿದ್ದಾನೆ. ಕೆಲವೊಮ್ಮೆ ಕಾಲಕಾಲಕ್ಕೆ, ಅಂತರ್‌ದೃಷ್ಟಿ ಹೊಂದಿರುವ, ಒಂದು ಉನ್ನತ ಆಕಾಂಕ್ಷೆಯನ್ನು ಹೊಂದಿದ, ಆತ್ಮನ ಹಾಗೂ ಉದ್ದೇಶದ ಒಂದು ಶ್ರೇಷ್ಠ ಶುದ್ಧತೆಯನ್ನು ಹೊಂದಿದ ಕಲಾವಿದರಿದ್ದಾರೆ. ಈ ಕಲಾವಿದರು ತಕ್ಕಮಟ್ಟಿಗೆ ಉತ್ತಮವಾದುದನ್ನು ಮಾಡಿದವರಿದ್ದಾರೆ. ಆದರೆ ಇದು ಅತ್ಯಂತ ವಿರಳ. ಮತ್ತು ಸಾಮಾನ್ಯವಾಗಿ, ಇದು ಬಹುಮಟ್ಟಿಗೆ ವಿರುದ್ಧವಾಗಿರುತ್ತದೆ ಎಂದು ನಾನು ನಂಬುತ್ತೇನೆ.

ಇಂತಹ ಕೆಲವು ರೂಪಗಳನ್ನು ನಾನು ಪ್ರಾಣಿಕ ಮತ್ತು ಮಾನಸಿಕ ಸ್ತರಗಳಲ್ಲಿ (ಪ್ರಪಂಚಗಳಲ್ಲಿ) ನೋಡಿದ್ದೇನೆ. ಅವುಗಳು ನಿಜವಾಗಿಯೂ ಮನುಷ್ಯನ ನೈಜ ರಚನೆಯಾಗಿದ್ದವು. ಒಂದು ಅತೀತವಾದ ಶಕ್ತಿ ಇದೆ, ಅದು ಪ್ರಕಟವಾಗುತ್ತದೆ. ಆದರೆ, ಮಿಥ್ಯೆಯ ತ್ರಿವಳಿ ಪ್ರಪಂಚಗಳಲ್ಲಿ, ಮನುಷ್ಯನು ಹೆಚ್ಚು–ಕಮ್ಮಿ ತನ್ನ ಸ್ವಂತ ಮೂರ್ತ ಸ್ವರೂಪದಲ್ಲಿ ದೇವರನ್ನು ರಚಿಸಿದ್ದಾನೆ – ಮನುಷ್ಯನ ರೂಪುಗೊಳ್ಳುವಿಕೆಯ ಕಲ್ಪನೆಯ ಪರಿಣಾಮವಾಗಿ ಕೆಲವು ಪುರುಷರು ಪ್ರಕಟಗೊಳ್ಳುತ್ತಾರೆ. ಇದು ನಿಜವಾಗಿಯೂ ಭಯಾನಕ! ಇಂತಹ ಕೆಲವು ರಚನೆಗಳನ್ನು ನಾನು ನೋಡಿದ್ದೇನೆ.... (ಮೌನ) ಮತ್ತು ಇದು ಎಲ್ಲವೂ ತುಂಬಾ ಅಸ್ಪಷ್ಟ, ತುಂಬಾ ಅಗ್ರಾಹ್ಯ, ವ್ಯಕ್ತಪಡಿಸಲಾರದಂಥದು.... ಕೆಲವು ದೇವತೆಗಳನ್ನು ಬೇರೆಯವರಿಗಿಂತ ಹೆಚ್ಚು ಕೆಟ್ಟದಾಗಿ ನಡೆಸಿಕೊಳ್ಳಲಾಗುತ್ತದೆ. ಉದಾಹರಣೆಗೆ, ಆ ಬಡ ಮಹಾಕಾಳಿಯನ್ನು ನೋಡಿ, ಅವಳ ಜೊತೆ ಏನೆಲ್ಲವನ್ನು ಮಾಡಲಾಗಿದೆ ಎಂದು ಗೊತ್ತೆ!.... ಆದರೆ ಈ ರೂಪ ಕೆಳ ಜಗತ್ತಿನಲ್ಲಿ ಮಾತ್ರ ಇರುತ್ತದೆ... ಹೌದು, ಅತ್ಯಂತ ಕೆಳಚೇತನದಲ್ಲಿ; ಅದು ಏನು ಪಡೆದುಕೊಂಡಿದೆಯೊ, ಅದು ಮೂಲ ವ್ಯಕ್ತಿಗಿಂತ ಭಿನ್ನ... ಗುರುತಿಸಲಾಗದಂತಹ, ಮೂಲದಿಂದ ಅತಿ ದೂರವಾಗಿರುವ ಒಂದು ಪ್ರತಿಬಿಂಬ. ಸಾಮಾನ್ಯವಾಗಿ ಇದನ್ನು ಮನುಷ್ಯ ಪ್ರಜ್ಞೆಯು ಆಕರ್ಷಿಸುತ್ತದೆ. ಒಂದು ಪ್ರತಿಮೆ (ದೇವರ) ಮಾಡಿದಾಗ, ಪೂಜಾರಿಯು ಒಂದು ರೂಪವನ್ನು ಕೆಳತಂದಾಗ – ಒಂದು ಕ್ರಮಬದ್ಧವಾದ ರೀತಿಯಲ್ಲಿ ಉತ್ಸವವು ನೆರವೇರಿದಾಗ, ಆಗ ಪೂಜಾರಿಯು ತನ್ನನ್ನು ತಾನು ಒಂದು ಆಹ್ವಾನದ ಆಂತರಿಕ ಸ್ಥಿತಿಯಲ್ಲಿ ಇರಿಸಿಕೊಳ್ಳುತ್ತಾನೆ ಮತ್ತು ಒಂದು ರೂಪಕ್ಕೆ ಅಥವಾ ಪ್ರತಿಮೆಗೆ ಒಂದು ಶಕ್ತಿಯನ್ನು ಕೊಡುವುದಕ್ಕಾಗಿ ಅದರಲ್ಲಿ ದೈವ ಸ್ವರೂಪದ ಉದ್ಗಮವನ್ನು ಕೆಳತರಲು ಪ್ರಯತ್ನಿಸುತ್ತಾನೆ – ಪೂಜಾರಿಯಲ್ಲಿ ನಿಜವಾಗಿಯೂ ಆವಾಹನೆ ಮಾಡುವ ಸಾಮರ್ಥ್ಯವಿದ್ದರೆ ಅವನು ಯಶಸ್ವಿಯಾಗುತ್ತಾನೆ. ಆದರೆ ಸಾಮಾನ್ಯವಾಗಿ –

ಎಲ್ಲದಕ್ಕೂ ಅಪವಾದಗಳಿರುತ್ತವೆ – ಈ ರೀತಿಯ ಜನರನ್ನು ಸಂಪ್ರದಾಯದ ಪ್ರಕಾರ ಸಾಮಾನ್ಯವಾದ ವಿಚಾರಗಳಲ್ಲಿ ಶಿಕ್ಷಿತರನ್ನಾಗಿ ಮಾಡಿರುತ್ತಾರೆ. ಅವನು ಯಾವ ದೈವಸ್ವರೂಪವನ್ನು ಆವಾಹನೆ ಮಾಡಬೇಕೆಂದುಕೊಂಡಿರುವನೊ, ಆ ದೈವ ಸ್ವರೂಪಕ್ಕೆ ಕೊಟ್ಟ ಎಲ್ಲ ಗುಣವಿಶೇಷಣಗಳ ಮತ್ತು ಮುಖಚರ್ಯೆಗಳ ಬಗ್ಗೆ ಯೋಚಿಸುತ್ತಾನೆ, ಮತ್ತು ಸಾಮಾನ್ಯವಾಗಿ ಆವಾಹನೆಯನ್ನು ಪ್ರಾಣಿಕ ಜಗತ್ತಿನ ಅಸ್ತಿತ್ವಗಳಿಗೆ ಅಥವಾ ಮಾನಸಿಕ ಜಗತ್ತಿನ ಅಸ್ತಿತ್ವಗಳಿಗೆ ಸಂಭೋದಿಸುತ್ತಾನೆ, ಆದರೆ ಅಸ್ತಿತ್ವಕ್ಕೆ ಅಲ್ಲ. ಈ ಸಣ್ಣ ಅಸ್ತಿತ್ವಗಳು ಒಂದು ಅಥವಾ ಇನ್ನೊಂದು ಪ್ರತಿಮೆಯಲ್ಲಿ ಪ್ರಕಟಗೊಳ್ಳುತ್ತವೆ. ಈ ಎಲ್ಲ ಪ್ರತಿಮೆಗಳು ಚಿಕ್ಕ ದೇವಸ್ಥಾನಗಳಲ್ಲಿ ಅಥವಾ ಕುಟುಂಬಗಳಲ್ಲಿಯೂ ಸಹ ಇರುತ್ತವೆ – ಕೆಲವು ಜನರು ತಮ್ಮ ಮನೆಗಳಲ್ಲಿ ಚಿಕ್ಕ ಮಂದಿರವನ್ನು ಹೊಂದಿರುತ್ತಾರೆ ಮತ್ತು ದೇವ ಪ್ರತಿಮೆಯನ್ನು ಪೂಜಿಸಲು ಅಲ್ಲಿಡುತ್ತಾರೆ – ಈ ಅಸ್ತಿತ್ವಗಳು ಅವುಗಳಲ್ಲಿ ಪ್ರಕಟವಾತ್ತವೆ; ಕೆಲವು ಸಲ ಇದರ ಪರಿಣಾಮಗಳು ದುರದೃಷ್ಟಕರವಾಗಿರುತ್ತವೆ. ಯಾಕೆಂದರೆ, ಈ ಸ್ವರೂಪಗಳು ಮೂಲ ದೈವಸ್ವರೂಪದಿಂದ ಅನತಿ ದೂರದಲ್ಲಿರುತ್ತವೆ... ಅವು ಅವಲಕ್ಷಣದ ರಚನೆಗಳು. ಕೆಲವು ಕುಟುಂಬಗಳಲ್ಲಿ ಪೂಜಿಸುವ ದೇವತೆಗಳು ಸಾಕ್ಷಾತ್ ರಾಕ್ಷಸರು!

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/275–76**

## ಶ್ರೀಮಾತೆಯವರ ಛಾಯಾಚಿತ್ರಗಳು

*ಪ್ರೀತಿಯ ಶ್ರೀಮಾತೆಯವರೆ, ವಿಭಿನ್ನವಾದ ಭಾವವನ್ನು ಹೊಂದಿದ ನಿಮ್ಮ ಭಾವಚಿತ್ರಗಳು ಬಹಳಷ್ಟಿವೆ, ಅವುಗಳಲ್ಲಿ ಯಾವುದಾದರೊಂದು ಭಾವಚಿತ್ರದ ಮೇಲೆ ನಾವು ನಮ್ಮ ಮನಸ್ಸನ್ನು ಏಕಾಗ್ರಗೊಳಿಸುತ್ತೇವೆ. ನಾವು ಏಕಾಗ್ರಗೊಳಿಸಿದ ಆ ಭಾವಚಿತ್ರವು ವ್ಯತ್ಯಾಸವನ್ನೇನಾದರು ಮಾಡುತ್ತದೆಯೆ?*

ಹೌದು, ನೀವು ಉದ್ದೇಶಪೂರ್ವಕವಾಗಿ ಮಾಡಿದಾಗ ಸಹಜವಾಗಿಯೇ ವ್ಯತ್ಯಾಸವಾಗುತ್ತದೆ. ಒಂದು ನಿರ್ದಿಷ್ಟ ಕಾರಣಕ್ಕಾಗಿ ಆ ಭಾವಚಿತ್ರವನ್ನು ಆಯ್ದುಕೊಂಡರೆ ಖಂಡಿತವಾಗಿಯೂ ವ್ಯತ್ಯಾಸವಾಗುತ್ತದೆ. ಅದಕ್ಕೊಂದು ಪರಿಣಾಮವಿದೆ. ನೀವು ಶ್ರೀಮಾತೆಯವರ ಒಂದು ಅಂಶದ ಬದಲಿಗೆ ಇನ್ನೊಂದು ಅಂಶದ ಮೇಲೆ ಗಮನವೀಯಲು ಆಯ್ದುಕೊಂಡಂತಾಗುತ್ತದೆ; ಉದಾಹರಣೆಗಾಗಿ, ನೀವು ಮಹಾಕಾಳಿ ಅಥವಾ ಮಹಾಲಕ್ಷ್ಮಿ ಅಥವಾ ಮಹಾಸರಸ್ವತಿಯ ಮೇಲೆ ಏಕಾಗ್ರಗೊಳಿಸಲು ಆಯ್ದುಕೊಂಡಾಗ ಪರಿಣಾಮಗಳು ಬೇರೆಯದೆ ಆಗುತ್ತದೆ.

ನಿಮ್ಮ ಯಾವ ಅಂಶವು ಈ ವೈಶಿಷ್ಟ್ಯಗಳಿಗೆ (ಮಹಾಕಾಳಿ ಅಥವಾ ಮಹಾಲಕ್ಷ್ಮಿ ಅಥವಾ ಮಹಾಸರಸ್ವತಿ) ಪ್ರತಿಕ್ರಿಯಿಸುತ್ತದೆಯೋ ಅದು ಜಾಗೃತವಾಗುತ್ತದೆ ಮತ್ತು ಗ್ರಹಿಸುವ ಶಕ್ತಿ ಹೊಂದುತ್ತದೆ. ಆದರೆ ಯಾರ ಹತ್ತಿರ ಒಂದೇ ಒಂದು ಭಾವಚಿತ್ರವಿದೆಯೊ (ಯಾವುದೇ ಇರಲಿ) ಮತ್ತು ಆಯ್ಕೆಗಳಿಲ್ಲದೆ ಗಮನವಿಡುತ್ತಾರೊ, ಆಗ ಆ ಭಾವಚಿತ್ರವು ಅಷ್ಟು ಮಹತ್ವದ್ದೆನಿಸುವುದಿಲ್ಲ. ಭಾವಚಿತ್ರದ ಮೇಲೆ ಏಕಾಗ್ರಗೊಳಿಸುವ ಕಾರಣದಿಂದ ಅದು ನಮ್ಮನ್ನು ಒಂದು ಶಕ್ತಿಯ ಸಂಪರ್ಕದಲ್ಲಿ ಇಡುತ್ತದೆ, ಯಾಂತ್ರಿಕವಾಗಿ ಪ್ರತಿಕ್ರಿಯಿಸುವ ಪ್ರತಿಯೊಬ್ಬರ ವಿಷಯದಲ್ಲಿ ಇದು ಅವಶ್ಯವಾಗಿ ಬೇಕು.

ಏಕಾಗ್ರಗೊಳಿಸುವ ವ್ಯಕ್ತಿಯು ವಿಶೇಷ ಇಚ್ಛೆಯನ್ನು ವಿಶೇಷ ಸಂಬಂಧದೊಂದಿಗೆ ತನ್ನ ಏಕಾಗ್ರತೆಗೆ ಸೇರಿಸಿದಾಗ ಮಾತ್ರ ಅದು ಪರಿಣಾಮ ಬೀರುತ್ತದೆ. ಇಲ್ಲದಿದ್ದರೆ ಸಂಬಂಧವು ಹೆಚ್ಚು ವಿಶೇಷವಾಗಿರುವುದಿಲ್ಲ ಮತ್ತು ಇದು ಯಾವಾಗಲೂ ಅಗತ್ಯದ ಅಭಿವ್ಯಕ್ತಿ ಅಥವಾ ಏಕಾಗ್ರಗೊಳಿಸುವ ವ್ಯಕ್ತಿಯ ಹಂಬಲವಾಗಿರುತ್ತದೆ. ಒಂದು ವೇಳೆ ಅವನು ಸ್ಪಷ್ಟವಾಗಿ ತಟಸ್ಥನಾಗಿದ್ದರೆ, ಅವನು ಆಯ್ಕೆ ಮಾಡದಿದ್ದರೆ, ಯಾವುದೇ ನಿರ್ದಿಷ್ಟ ವಸ್ತುವಿಗಾಗಿ ಇಚ್ಛಿಸದಿದ್ದರೆ ಒಂದು ಬಿಳಿಯ ಹಾಳೆಯಂತೆ ಶುದ್ಧ ತಟಸ್ಥನಂತೆ ಬಂದಾಗ ಏಕಾಗ್ರತೆಗೆ ಉತ್ತರ ಕೊಡುವ ಬಲಗಳು ಮತ್ತು ಅಂಶಗಳು ಅವನಿಗೆ ಬೇಕಾಗುತ್ತವೆ ಮತ್ತು ಬಹುಶಃ ತನಗೇನು ನಿರ್ದಿಷ್ಟ ವಸ್ತುಗಳು ಬೇಕೆಂದು ಆ ವ್ಯಕ್ತಿಗೆ ಗೊತ್ತಿರುವುದಿಲ್ಲ, ಯಾಕೆಂದರೆ ಕೆಲವೇ ಕೆಲ ಜನ ಮಾತ್ರ ತಮ್ಮ ಬಗ್ಗೆ ಅರಿವಿದ್ದವರಾಗಿದ್ದಾರೆ. ಅವರು ಒಂದು ಅಸ್ಪಷ್ಟ ಭಾವನೆಯಲ್ಲಿರುತ್ತಾರೆ, ಅಸ್ಪಷ್ಟ ಹಂಬಲವನ್ನು ಹೊಂದಿರುತ್ತಾರೆ ಮತ್ತು ಅದು ಬಹುತೇಕ ವಶಪಡಿಸಿಕೊಳ್ಳಲಾರದ್ದಾಗಿರುತ್ತದೆ; ಒಂದು ಸ್ಪಷ್ಟ ದೂರದೃಷ್ಟಿಯೊಂದಿಗೆ ಸಂಘಟಿತವಾದದ್ದು, ಹೊಂದಾಣಿಕೆಯಾದದ್ದು ಮತ್ತು ಇಷ್ಟಪಟ್ಟದ್ದು ಅಲ್ಲ. ಉದಾಹರಣೆಗೆ – ನಾವು ಜಯಿಸಬೇಕೆಂದುಕೊಂಡಿರುವ ತೊಂದರೆಗಳು ಅಥವಾ ನಾವು ಪಡೆದುಕೊಳ್ಳಬೇಕಾದ ಸಾಮರ್ಥ್ಯಗಳು; ಇದು ತಕ್ಕಮಟ್ಟಿಗೆ ಒಂದು ಆಧುನಿಕ ಶಿಸ್ತಾಗಿದೆ. ನಮಗೇನು ಬೇಕು ಎನ್ನುವುದನ್ನು ಕಂಡುಕೊಳ್ಳಬೇಕಾದರೆ ನಾವು ತುಂಬಾ ಮನನ ಮಾಡಿಕೊಂಡಿರಬೇಕು, ಗಮನಿಸಿಕೊಂಡಿರಬೇಕು, ತುಂಬಾ ಅಧ್ಯಯನ ಮಾಡಿರಬೇಕು. ಇಲ್ಲದಿದ್ದರೆ ಅದು ಅಸ್ಪಷ್ಟವಾಗಿರುತ್ತದೆ, ಈ ಅಭಿಪ್ರಾಯವನ್ನು ನಾವು ಹಿಡಿಯಲೆತ್ನಿಸುತ್ತೇವೆ ಮತ್ತು ಅದು ನುಣುಚಿಕೊಳ್ಳುತ್ತದೆ... ಹಾಗಲ್ಲವೇ ಅದು?

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 7/271–72**

**ಮಹಾಕಾಳಿ ಚಿತ್ರ**

ಕಪ್ಪು ಕಾಳಿಯ ರೂಪವು ಪ್ರಾಣಿಕ ಸ್ತರದ ಮೇಲೆ ಮಹಾಕಾಳಿಯ ಅಭಿವ್ಯಕ್ತಿಯಾಗಿದೆ – ಆದರೆ ಅದೇ ಮಹಾಕಾಳಿಯು ಅಧಿಮಾನಸದಲ್ಲಿ ಸ್ವರ್ಣಮಯವಾಗಿದ್ದಾಳೆ. ನೀವು ನೋಡಿದ್ದು, ತಮ್ಮ ಕಾಂತಿಯ ದೇಹದಲ್ಲಿ ಮಹಾಕಾಳಿಯ ಸಾಮರ್ಥ್ಯವನ್ನು ಹೊಂದಿದ ಶ್ರೀಮಾತೆಯವರನ್ನು, ಆದರೆ ಮಹಾಕಾಳಿಯ ರೂಪವನ್ನಲ್ಲ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/274**

**ಮಹಾಲಕ್ಷ್ಮಿಯ ಚಿತ್ರ**

ಸಂಗೀತ ದಿನಗಳಂದು ಮಹಾಲಕ್ಷ್ಮಿಯ ಅಂಶವು ಯಾವಾಗಲೂ ಪ್ರಧಾನವಾಗಿರುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/574**

**ಮಹಾಸರಸ್ವತಿಯ ಚಿತ್ರ**

*ಮಾನವ ಮಿದುಳಿನಲ್ಲಿ ಗಹನವಾದ "ಜೈರಿ"* [ಜೈರಿ (gyri) – ಮನುಷ್ಯನ ಮೆದುಳಿನ ಸೆರೆಬ್ರಲ್ ಕಾರ್ಟೆಕ್ಸ ಮೇಲೆ ಉಬ್ಬಿದ ಅಂಚು]ಯನ್ನು *ತಂದಂತಹ, ಹೃದಯದ ವೆಂಟ್ರಿಕಲ್* [ವೆಂಟ್ರಿಕಲ್ (ventricle) – ಶುದ್ಧ ಹಾಗೂ ಅಶುದ್ಧ ರಕ್ತವನ್ನು ಎತ್ತುವ–ನೂಕುವ ಹೃದಯದ ಒಂದು ಅಂಶ] *ಗಳಲ್ಲಿ ಪರಿಪೂರ್ಣ ಸೆಪ್ಟಾ* [ಸೆಪ್ಟಾ (septa) – ಎರಡು ಕವಾಟಗಳನ್ನು ಪ್ರತ್ಯೇಕಿಸುವ ಗೋಡೆ] *ತಂದಂತಹ ಮತ್ತು ಇಂತಹ ಇತರೆ ವಿನ್ಯಾಸದ ವಿವರಗಳನ್ನು ತಂದಂತಹ ಪ್ರಜ್ಞೆ ಯಾವುದು? ಅದು ಮಹಾಸರಸ್ವತಿಯ ಕಾರ್ಯವೆ?*

ಹೌದು – ಜಟಿಲವಾದ ವಿಸ್ತಾರದಲ್ಲಿ ಎಲ್ಲ ಪರಿಪೂರ್ಣತೆಯನ್ನು ಮಹಾಸರಸ್ವತಿಯ ಸ್ಪರ್ಶವನ್ನು ತೋರಿಸುತ್ತದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/72**

**ಶ್ರೀಮಾತೆಯವರ ಪ್ರಭೆ**

(ಅ) ದಿವ್ಯ ಪ್ರಭೆ (ವಜ್ರ ಪ್ರಭೆ) ಎಂದರೆ ಶ್ರೀಮಾತೆಯವರ ವಿಶೇಷವಾದ ಶಕ್ತಿ.

(ಬ) ದಿವ್ಯ ಪ್ರಜ್ಞೆಯಿಂದ ಮಹಾ ಬೆಳಕು ಹೊರಡುತ್ತದೆ ಮತ್ತು ಅದು ಎಲ್ಲೆಲ್ಲಿ ಹೋಗುತ್ತದೆಯೋ ಅಲ್ಲಿ ಅದು ದಿವ್ಯ ಪ್ರಜ್ಞೆಯ ತೆರೆಯುವಿಕೆಯನ್ನು ತರುತ್ತದೆ.

(ಕ) ದಿವ್ಯ ಪ್ರಭೆಯೊಂದಿಗೆ ಶ್ರೀಮಾತೆಯವರ ಅವರೋಹಣವು ನಿಮ್ಮಲ್ಲಿಯ ಚಲನೆಗೆ ಸರ್ವೋಚ್ಚ ಪ್ರಭಾವದ ಸಮ್ಮತಿಯಾಗಿದೆ.

(ಡ) ಶ್ರೀಮಾತೆಯವರ ದಿವ್ಯ ಪ್ರಭೆಯು ಸಂಪೂರ್ಣತೆಯ ಮತ್ತು ಶುದ್ಧತೆಯ ಬೆಳಕಾಗಿದೆ.

(ಇ) ದಿವ್ಯ ಪ್ರಭೆಯು ಭಗವಂತನ ಕೇಂದ್ರ ಮತ್ತು ಶಕ್ತಿಯಾಗಿದೆ.

*

ಶ್ರೀಮಾತೆಯವರ ಪ್ರಭೆ ಶ್ವೇತವಾಗಿದೆ – ವಿಶೇಷವಾಗಿ ಉಜ್ವಲ ಶ್ವೇತ. ಸಾಮಾನ್ಯವಾಗಿ ಮಹಾಕಾಳಿಯ ರೂಪವು ತುಂಬಾ ಪ್ರಕಾಶಮಾನವಾದ ಮತ್ತು ಬಲವಾದ ಸುವರ್ಣ ಬಣ್ಣದ್ದಾಗಿರುತ್ತದೆ.

*

ವಜ್ರವು ಶ್ರೀಮಾತೆಯವರ ಪ್ರಜ್ಞೆಯ ತೀವ್ರ ಪ್ರಭೆಯ ಸಂಕೇತವಾಗಿದೆ, ನಿಮ್ಮ ದೃಷ್ಟಿಗಳು ನೀವು ಅವರನ್ನು(ಶ್ರೀಮಾತೆಯವರನ್ನು) ಪೂರ್ಣ ಬೆಳಕಿನಿಂದ ಆವರಿಸಿರುವುದನ್ನು ಮತ್ತು ಅದನ್ನು ಬೀರುತ್ತಿರುವುದನ್ನು ಸೂಚಿಸುತ್ತದೆ. ಬೇರೆ ಆಭರಣಗಳು ಇತರ ಶಕ್ತಿಗಳ ಸಂಕೇತಗಳಾಗಿರಬೇಕು, ಮಾಣಿಕ್ಯವು ಭೌತಿಕದಲ್ಲಿನ ಪ್ರಭಾವವನ್ನು ಸೂಚಿಸುತ್ತದೆ.

*

ವಜ್ರವು ಶ್ರೀಮಾತೆಯವರ ಪ್ರಜ್ಞೆಯ ಸಂಕೇತ; ಅದರ ಬಣ್ಣವು(ವರ್ಣ) ಆ ಕ್ಷಣದಲ್ಲಿ ಅವರ ಪ್ರಜ್ಞೆಯು ನಿಮ್ಮ ಮೇಲಿಡುವ ಒಂದು ನಿರ್ದಿಷ್ಟ ಬಲದ ಮೇಲೆ ಅವಲಂಬಿಸಿರುತ್ತದೆ.

*

ವಜ್ರವು ಶ್ರೀಮಾತೆಯವರ ಬೆಳಕಿನ ಮತ್ತು ಶಕ್ತಿಯ ಸಂಕೇತವಾಗಿದೆ – ವಜ್ರ ಪ್ರಭೆಯು ತನ್ನ ಅತಿ ತೀಕ್ಷ್ಣವಾದ ಸ್ಥರದಲ್ಲಿರುವ ಶ್ರೀಮಾತೆಯವರ ಪ್ರಜ್ಞೆಯಾಗಿದೆ.

*ಇಂದು ವಂದನಾ ಸಮಯದಲ್ಲಿ ಶ್ರೀಮಾತೆಯವರಿಂದ ಹೊನ್ನಿನ ಒಂದು ತಂತು[ಕಿರಣ] ನನ್ನಡೆಗೆ ಬರುವುದನ್ನು ನಾನು ನೋಡಿದೆ, ಆದರೆ ಅದು ಒಂದೇ ಘಳಿಗೆಯಲ್ಲಿ ಕಣ್ಮರೆಯಾಯಿತು. ಶ್ರೀಮಾತೆಯವರು ಮಾಳಿಗೆ ಮೇಲೆ ನಿಂತಿದ್ದಾಗ (ಪಾವಟಿಗೆ ಇಳಿದು ಬರುವುದಕ್ಕೆ ಸ್ವಲ್ಪ ಮುಂಚೆ) ಇಂತಹ ಬೆಳಕನ್ನು ಸ್ಪಷ್ಟವಾಗಿ ನಾನು ನೋಡಿದ್ದೆ. ಈ ಬೆಳಕು ಆಂತರ್ಯದ್ದೊ ಅಥವಾ ಬಾಹ್ಯದ್ದೊ? ಸ್ವಲ್ಪ ಸಮಯ ನಾನು ಅದನ್ನು ನೋಡಿದ್ದರಿಂದ ನನ್ನ ಸ್ವಂತ ಕಣ್ಣುಗಳನ್ನು ನಾನು ನಂಬಲಿಲ್ಲ.*

ಹೊನ್ನ ಪ್ರಭೆಯು ಸಾಮಾನ್ಯ ಮನಸ್ಸಿನ ಮೇಲಿನ, ಉನ್ನತ ಸ್ಥರದಲ್ಲಿರುವ ದಿವ್ಯ ಸತ್ಯದ ಬೆಳಕಾಗಿದೆ. ಇದು ಮನಸ್ಸಿನ ಮೇಲಿನ ಮಹಾಕಾಳಿಯ ಬೆಳಕು ಸಹ ಇರುತ್ತದೆ. ಈ ಹೊನ್ನ ಪ್ರಭೆಯು ಶ್ವೇತ ಪ್ರಭೆಯಂತೆ ಶ್ರೀಮಾತೆಯವರಿಂದ ಹೊರಹೊಮ್ಮುವುದನ್ನು ಅನೇಕ ಸಲ ನೋಡಿದ್ದೇವೆ.

*

ಹೊನ್ನ ಪ್ರಭೆಯ ರೇಖೆಯು ಹೃದಯದ ಆಕಾಶವನ್ನು ಸುತ್ತುತ್ತಿರುವ ಉನ್ನತ ದಿವ್ಯ ಸತ್ಯದ ಬೆಳಕಿನ ರೇಖೆಯಾಗಿದೆ ಮತ್ತು ವಜ್ರದ ರಾಶಿಯು ಆಕಾಶದಲ್ಲಿ ಒತ್ತುವ ಶ್ರೀಮಾತೆಯವರ ಬೆಳಕಾಗಿದೆ. ಆದುದರಿಂದ, ಅತಿಂದ್ರೀಯ–ಭಾವನಾತ್ಮಕ ಕೇಂದ್ರದ ಮೇಲೆ ಕಾರ್ಯ ಮಾಡುವ ಈ ಪ್ರಭಾವಗಳ ಚಿಹ್ನೆಯಾಗಿದೆ.

*ಒಂದು ರಾತ್ರಿ, ಮೇಲಿನಿಂದ ಕೆಳಗೆ ಬರುವ ಶೀತಲ ಮತ್ತು ಶಾಂತಯುತ ಹಳದಿ–ಶ್ವೇತ ಅಗಾಧವಾದ ಬೆಳಕೊಂದನ್ನು ನಾನು ಕಂಡೆ. ಈ ಬೆಳಕು ಉನ್ನತ ಮಾನಸ ಪ್ರಜ್ಞೆಯದೋ ಅಥವಾ ಆಧ್ಯಾತ್ಮ ಪ್ರಜ್ಞೆಯದೋ?*

ಅದು ಹಳದಿ ಬಣ್ಣದ ಛಾಯೆಯ ಮೇಲೆ ಅವಲಂಬಿಸಿದೆ. ಅದು ಹೊನ್ನ ಶ್ವೇತವಾಗಿದ್ದರೆ, ಅದು ಮಾನಸ ಸ್ತರದ ಮೇಲಿನಿಂದ ಬರುತ್ತದೆ ಮತ್ತು ಅದು ಮಹೇಶ್ವರಿ–ಮಹಾಕಾಳಿಯರ ಪ್ರಭಾವವನ್ನು ಸೂಚಿಸುತ್ತದೆ. ಉನ್ನತ ಮಾನಸದ ವರ್ಣವು ನಸು ನೀಲಿಯಾಗಿದೆ.

**CWSA (ಶ್ರೀ ಅರವಿಂದರ ಸಮಗ್ರ ಸಂಪುಟ) 32/266–68**

*ಕೃತಜ್ಞತೆಯೊಂದಿಗೆ ಅನುಗ್ರಹವನ್ನು ಸ್ವೀಕರಿಸುವ ಮಾರ್ಗ ಯಾವುದು?*

ಆಹ್! ಎಲ್ಲಕ್ಕಿಂತ ಮೊದಲು ನೀನು ಅದಕ್ಕಾಗಿ ಹಂಬಲಿಸಬೇಕು.

ಇದು ಅತ್ಯಂತ ಮುಖ್ಯವಾದ ಅಂಶ. ದೈವಾನುಗ್ರಹವಿಲ್ಲದೆ ನಿಮ್ಮ ಅಸಹಾಯಕತೆಯನ್ನು ಅರಿತುಕೊಳ್ಳುವಂತೆ ಮಾಡುವ ಒಂದು ಖಚಿತ ಆಂತರಿಕ ದೈನ್ಯತೆ ಹೊಂದಲು ಇದು ಬೇಕು. ಅದಿಲ್ಲದಿದ್ದರೆ ನೀವು ಅಪೂರ್ಣ ಮತ್ತು ದುರ್ಬಲರು; ನೀವು ಪ್ರಾರಂಭ ಮಾಡಬೇಕಾದರೆ ಇದು ಮೊದಲು ಬೇಕು.

ಇದು ಯಾರು ಬೇಕಾದರೂ ಹೊಂದುವಂತಹ ಒಂದು ಅನುಭವ. ಏನೂ ಗೊತ್ತಿಲ್ಲದ ಜನರು ತುಂಬಾ ಕಠಿಣ ಪರಿಸ್ಥಿತಿಗಳಲ್ಲಿ ತಮ್ಮನ್ನು ತಾವು ಕಂಡುಕೊಳ್ಳುತ್ತಾರೆ, ಅಥವಾ ಪರಿಹರಿಸಲೇಬೇಕಾದ ಒಂದು ಸಮಸ್ಯೆಯನ್ನು ಎದುರಿಸುತ್ತಾ ಅಥವಾ ನಾನು ಇದೀಗ ಹೇಳಿದಂತೆ ಒಂದು ಉದ್ವೇಗ ಅಥವಾ ಅವರಿಗೆ ಕಿರಿಕಿರಿ ಮಾಡಿದ ಏನೋ ಒಂದು ತೊಂದರೆ.... ಆಗ ಅವರು ತಾವು ಕಳೆದು ಹೋಗಿದ್ದೇಕೆ ಎಂದು ಅರಿತುಕೊಳ್ಳುತ್ತಾರೆ, ಏನು ಮಾಡಬೇಕೆಂದು ಅವರಿಗೆ ಗೊತ್ತಾಗುವುದಿಲ್ಲ – ಅವರ ಮನಸ್ಸು ಅಥವಾ ಅವರ ಭಾವನೆಗಳು ಸಹಾಯ ಮಾಡಲಾರವು – ಏನು ಮಾಡಬೇಕೆಂದು ಅವರಿಗೆ ತೋಚುವುದಿಲ್ಲ, ಆಗ ಇದು ಸಂಭವಿಸುತ್ತದೆ; ಅವರಾಂತರ್ಯದಲ್ಲಿ ಕರೆಯಂತೆ(ಕೂಗಿನಂತೆ) ಏನೋ ಒಂದು ಇರುತ್ತದೆ, ನಾವು ಏನನ್ನು ಮಾಡಲಾರೆವೊ ಅದನ್ನು ಮಾಡುವಂಥ ಒಂದು ಕರೆ. ನಾವು ಮಾಡಲಾರದಂಥದ್ದನ್ನು ಮಾಡುವ ಸಾಮರ್ಥ್ಯವನ್ನು ಅಪೇಕ್ಷಿಸುತ್ತೇವೆ.

ಇದು ಮೊದಲ ಷರತ್ತಾಗಿದೆ. ನಂತರ ಅನುಗ್ರಹ ಮಾತ್ರ ಅದನ್ನು ಮಾಡಬಲ್ಲದು ಎಂದು ನೀನು ಅರಿತರೆ, ಅಲ್ಲಿಂದ ಅನುಗ್ರಹವು ಮಾತ್ರ ನಿನ್ನನ್ನು ಪಾರು ಮಾಡಬಹುದು (ಹೊರಗೆಳೆಯಬಹುದು), ಹೊರಗೆ ಬರಲು ನಿನಗೆ ಸಮಾಧಾನವನ್ನು ಮತ್ತು ಶಕ್ತಿಯನ್ನು ಕೊಡಬಹುದು, ಆಗ ಸಹಜವಾಗಿಯೇ ಒಂದು ತೀವ್ರತರವಾದ ಹಂಬಲವು, ತೆರೆದುಕೊಳ್ಳುವಿಕೆಯಲ್ಲಿ ರೂಪಾಂತರವಾದ ಒಂದು ಪ್ರಜ್ಞೆಯು ನಿನ್ನಲ್ಲಿ ಜಾಗೃತವಾಗುತ್ತದೆ. ನೀನು ಕೂಗಿದರೆ, ಹಂಬಲಿಸಿದರೆ ಮತ್ತು ಪಡೆಯುವೆನೆಂಬ ಭರವಸೆ ಇದ್ದರೆ, ಸಹಜವಾಗಿಯೇ ನಿನ್ನನ್ನು ನೀನು ಅನುಗ್ರಹಕ್ಕೆ ತೆರೆದುಕೊಳ್ಳುವಿ.

ನಂತರದಲ್ಲಿ – ನೀನು ಇದಕ್ಕೆ ಬಹಳಷ್ಟು ಗಮನವನ್ನು ಕೊಡಲೇಬೇಕು (ಮಾತೆಯವರು ತಮ್ಮ ಬೆರಳುಗಳನ್ನು ತಮ್ಮ ತುಟಿಯ ಮೇಲೆ ಇಟ್ಟುಕೊಳ್ಳುತ್ತಾರೆ) – ಅನುಗ್ರಹವು ನಿನಗೆ ಉತ್ತರಿಸುತ್ತದೆ, ಅನುಗ್ರಹವು ನಿನ್ನನ್ನು ತೊಂದರೆಗಳಿಂದ ಮುಕ್ತ ಮಾಡುತ್ತದೆ, ನಿನ್ನ ಸಮಸ್ಯೆಗೆ ಅನುಗ್ರಹವು ಸಮಾಧಾನವನ್ನು ಕೊಡುತ್ತದೆ ಅಥವಾ ನಿನ್ನ ಕಷ್ಟಗಳಿಂದ ಹೊರಬರಲು ಸಹಾಯ ಮಾಡುತ್ತದೆ. ಒಮ್ಮೆ ನೀನು ತೊಂದರೆಗಳಿಂದ ಮುಕ್ತವಾದಾಗ ಮತ್ತು ನಿನ್ನ ಕಷ್ಟದಿಂದ ಹೊರಬಂದಾಗ, ಅನುಗ್ರಹವು ನಿನ್ನನ್ನು ಅ ಸನ್ನಿವೇಶದಿಂದ ಪಾರು ಮಾಡಿದೆ ಎಂಬುದನ್ನು ಮರೆಯಬಾರದು ಮತ್ತು ಅದು ನನ್ನಿಂದಾಯಿತೆಂದು ಭಾವಿಸಬಾರದು. ಇದೊಂದು ಅತಿ ಮುಖ್ಯವಾದ ಅಂಶ. ಒಂದೊಮ್ಮೆ ಕಷ್ಟವು ಮಾಯವಾದಾಗ, ಬಹಳಷ್ಟು ಜನರು "ನಾನೇ ಈ ಕಷ್ಟದಿಂದ ಹೊರಬಂದೆ" ಎಂದು ಹೇಳುತ್ತಾರೆ.

ನೀನಲ್ಲಿರುವಿ. ಬಾಗಿಲ ಬೀಗ ಹಾಕಿ ಚಿಲಕವನ್ನು ಹಾಕುವಿ, ಆಗ ನೀನು ಎಂದಿಗೂ ಏನನ್ನೂ ಪಡೆದುಕೊಳ್ಳಲಾರೆ. ಈ ರೀತಿಯ ಆಂತರಿಕ ಮೂರ್ಖತನವನ್ನು ಬಿಟ್ಟುಕೊಡಬೇಕಾದರೆ ಮತ್ತು ನಾನೇನನ್ನೂ ಮಾಡಲಾರೆ ಎಂದು ಇನ್ನೊಮ್ಮೆ ಅರಿವಾಗಬೇಕಾದರೆ ನಿನಗೆ ಮತ್ತೊಮ್ಮೆ ತೀವ್ರವಾದ ನೋವು, ಸ್ವಲ್ಪ ಭಯಾನಕ ತೊಂದರೆ ಬೇಕಾಗುತ್ತವೆ. ಯಾಕೆಂದರೆ ನೀನು ದುರ್ಬಲನೆಂದು ಅರಿತುಕೊಂಡಾಗ ನೀನು ಸ್ವಲ್ಪವೇ ತೆರೆದುಕೊಳ್ಳಲು ಮತ್ತು ಮೆದುವಾಗಲು ಪ್ರಾರಂಭಿಸುವಿ. ನೀನು ಮಾಡುವುದೆಲ್ಲವೂ ನಿನ್ನ ಕೌಶಲ ಮತ್ತು ಸಾಮರ್ಥ್ಯದ ಮೇಲೆ ಅವಲಂಬಿಸಿದೆ ಎಂದು ನೀನು ಭಾವಿಸಿದರೆ, ಆಗ ನಿಜವಾಗಿಯೂ ನೀನು ಒಂದು ಬಾಗಿಲವನ್ನಷ್ಟೇ ಮುಚ್ಚುವುದಿಲ್ಲ, ಒಂದಾದ ಮೇಲೊಂದರಂತೆ ಬಹಳಷ್ಟು ಬಾಗಿಲಗಳನ್ನು ಮುಚ್ಚುವಿ ಮತ್ತು ಅವುಗಳಿಗೆ ಚಿಲಕವನ್ನು ಹಾಕುವಿ. ಏನೂ ಪ್ರವೇಶಿಸದ ನಿನ್ನಷ್ಟಕ್ಕೆ ನೀನು ಒಂದು ಕೋಟೆಯಲ್ಲಿ ಬಂದಿಯಾಗುವಿ. ಅದೊಂದು ದೊಡ್ಡ ಹಿನ್ನೆಡೆ: ಅದನ್ನು ನಾವು ಬೇಗನೆ ಮರೆಯುತ್ತೇವೆ. ಸಹಜವಾಗಿಯೇ ನಾವು ನಮ್ಮ ಸ್ವಂತ ಸಾಮರ್ಥ್ಯದೊಂದಿಗೆ ತೃಪ್ತಿಯನ್ನು ಹೊಂದುತ್ತೇವೆ.

**CWM (ಶ್ರೀಮಾತೆಯವರ ಸಮಗ್ರ ಸಂಪುಟ) 6/322–23 – ಶ್ರೀಮಾತೆ**

## ಶ್ರೀ ಅರವಿಂದರ
## ದಿವ್ಯ ಜೀವನ

**– ಜಾಹ್ನವಿ**

### ವ್ಯಕ್ತಿಯ ನಿಯತಿ

ಅಸ್ತಿತ್ವ ಮತ್ತು ಜೀವನಗಳು ನಿರಪೇಕ್ಷವಾಗಿರಲಿ ಅಥವಾ ಸಾಪೇಕ್ಷವಾಗಿರಲಿ, ಶಾರೀರಿಕವಾಗಿರಲಿ ಅಥವಾ ಅಶಾರೀರಿಕವಾಗಿರಲಿ, ಸಜೀವವಾಗಿರಲಿ ಅಥವಾ ನಿರ್ಜೀವವಾಗಿರಲಿ, ಬುದ್ಧಿಯುಕ್ತವಾಗಿರಲಿ ಅಥವಾ ನಿರ್ಬುದ್ಧಿಯಿಂದ ಕೂಡಿರಲಿ, ಹೀಗೆ ಏನೇ ಆಗಿರಲಿ. ಅವುಗಳ ಸತ್ಯ ಮಾತ್ರ ಸರ್ವವ್ಯಾಪಿಯಾದ ಸತ್ತೆಯೇ ಆಗಿದೆ. ಏನೇ ದ್ವಂದ್ವಗಳಿರಲಿ, ವಿರೋಧಗಳಿರಲಿ, ತೀರ ವಿರುದ್ಧವೆನ್ನುವಂಥ ಧ್ರುವಗಳೇ ಇರಲಿ, ಅವೆಲ್ಲವುಗಳ ಏಕಾಂತಿಕ ಸತ್ಯವೆಂದರೆ ಸರ್ವತ್ರ ವ್ಯಾಪ್ತವಾದ ಅನಿರ್ವಚನೀಯ ಸತ್ತೆಯೇ ಆಗಿದೆ. ಎಲ್ಲವನ್ನೂ ತತ್ ಎಂದು ಹೇಳುವುದೇಕೆಂದರೆ, ಅವೆಲ್ಲವೂ ತತ್ ಅಥವಾ ನಿಜ ಸತ್ತೆ ಹೌದು, ಆದರೆ ಅಷ್ಟೇ ಅಲ್ಲ, ಅವೆಲ್ಲವನ್ನೂ ಮೀರಿಯೂ ಅದಿದೆ; ಸಮಸ್ತ ಬ್ರಹ್ಮಾಂಡದಲ್ಲಿ ಏನಿದೆಯೋ ಹಾಗೂ ಏನಿಲ್ಲವೋ (ಅಂದರೆ, ನಮ್ಮ ಅನುಭವಕ್ಕೆ ಬಾರದಂತೆ ಏನೆಲ್ಲ ಇದೆಯೋ ಅದೆಲ್ಲವೂ) ಅದೂ ಸಹ ನಿಜ ಸತ್ತೆಯೇ. ಎಲ್ಲ ವೈರುಧ್ಯಗಳು, ದ್ವಂದ್ವಗಳು, ವಿರೋಧಗಳೆಲ್ಲ ಕರಗಿ, ತಮ್ಮ ವಿರೋಧಿ ಅಸ್ತಿತ್ವವೇ ಸತ್ಯ ಎಂದು ದೃಢೀಕರಿಸುತ್ತ, ನಿಜ ಸತ್ ಇದು ಸರ್ವತೋ ವ್ಯಾಪಕವಾಗಿದೆ ಅನ್ನುವುದನ್ನು ಸಾರುತ್ತವೆ. ಬ್ರಹ್ಮನೇ ಆದಿ, ಅವನೇ ಅಂತ್ಯ; ಅವನು ಅನಾದಿ, ಅವನು ಅನಂತ. ಅವನೇ ಎಲ್ಲವೂ. ಅವನನ್ನು ಬಿಟ್ಟರೆ ಬೇರೆ ಏನೂ ಎಲ್ಲೂ ಇಲ್ಲ.

ಆದರೆ ಎಲ್ಲ ವೈರುಧ್ಯಗಳ ನಡುವಿನ ಏಕತೆಯನ್ನು ಅವರ್ಣನೀಯ, ಮಾತು ಮನಂಗಳಿಂದತ್ತತ್ತ ಎಂದು ಹೇಳಬೇಕಾಗುತ್ತದೆ. ನಮ್ಮ ಅನುಭವ ಎಷ್ಟೇ ಗಾಢವಾಗಿರಲಿ, ದೊಡ್ಡದಾಗಿರಲಿ, ಮಹಾನ್ ಆಗಿರಲಿ ಜಗತ್ತಿನ ಏಕತೆಯ ಇದಿರಲ್ಲಿ ಸಪ್ಪೆಯೇ, ನಗಣ್ಯವೇ. ಆ ಏಕತೆಯು ನಮ್ಮ ಎಲ್ಲ ವ್ಯಾಖ್ಯೆಗಳನ್ನು ಮೀರಿ ನಿಲ್ಲುವಂಥದಾಗಿದೆ. ನಮ್ಮ ಪುರಾತನರು ಇದನ್ನೇ ನೇತಿ ನೇತಿ ಎಂದು ಹೇಳುತ್ತ, ಆ ಸದ್ವಸ್ತುವು ಎಲ್ಲ ಅಳತೆ, ಪರಿಮಾಣ, ಗುಣ, ಧರ್ಮ ಎಲ್ಲವನ್ನೂ ಮೀರಿ ನಿಲ್ಲುತ್ತದೆ ಎಂದು ಸೂಚಿಸುತ್ತಾರೆ. ಅಜ್ಞೇಯವಾದ ವಸ್ತು(?)ವೊಂದು ಅನೇಕ ವಿಭಿನ್ನ ಸ್ಥಿತಿಗಳಲ್ಲಿ, ಅವಸ್ಥೆಗಳಲ್ಲಿ, ಪ್ರಜ್ಞೆಯ ಗುಣ ಲಕ್ಷಣಗಳನ್ನು ಹೊಂದಿ,

ಪ್ರಜ್ಞೆಯ ಅನೇಕ ಆಕಾರಗಳಲ್ಲಿ, ಶಕ್ತಿಯ ಅನೇಕ ರೂಪಗಳಲ್ಲಿ ಕಂಡು ಬಂದಾಗ, ಮನಸ್ಸು ಏನು ಮಾಡಲು ಸಾಧ್ಯ? ಅಜ್ಞೇಯವೆಂದು ಹೇಳಿ ಅದು ಕೈತೊಳೆದುಕೊಂಡು ಬಿಡುತ್ತದೆ. ನಾವು ಅದನ್ನರಿಯಬೇಕಾದರೆ, ಅದರ ವಿವಿಧ ರೂಪಗಳ ಮೂಲಕ, ಪ್ರಜ್ಞೆಯ ಅನೇಕ ಆಕಾರಗಳ ಮೂಲಕ ಬೆನ್ನು ಹತ್ತಿ ಕಂಡುಹಿಡಿಯಬೇಕಾಗುತ್ತದೆ. ಅಜ್ಞೇಯವಾಗಿರುವ ಆ ಸದ್ವಸ್ತುವನ್ನು ನಮ್ಮ ಗಡಿಬಿಡಿ ಅಥವಾ ತಾಳ್ಮೆಗೇಡಿತನದ ಮೂಲಕ ಯಾವುದಾದರೊಂದು ಆಕಾರಕ್ಕೋ, ರೂಪಕ್ಕೋ ಸೀಮಿತಗೊಳಿಸಿಬಿಟ್ಟರೆ, ಉಳಿದೆಲ್ಲ ಪ್ರಕಾರ–ಆಕಾರಗಳು ಸುಳ್ಳು ಎಂದು ಹೇಳಿದರೆ ತಪ್ಪಾಗುತ್ತದೆ.

ಇದನ್ನು ನಮ್ಮ ಪುರಾತನರು ಎಷ್ಟು ಬಲವಾಗಿ ಮನಗಂಡಿದ್ದರೆಂದರೆ, ಸಚ್ಚಿದಾನಂದನೇ ಅತ್ಯುನ್ನತ ಅನುಭವವೆಂದು ಕಂಡುಕೊಂಡು ಮೇಲೂ ಅಸತ್‌ನ ಕಲ್ಪನೆಯವರೆಗೂ ಹೋದರು, ಒಂದು ವಿಶುದ್ಧ ಸತ್ ಅಥವಾ ಅಸ್ತಿತ್ವ, ಪ್ರಜ್ಞಾ ಶಕ್ತಿ ಅಥವಾ ಚಿತ್‌ಶಕ್ತಿ ಮತ್ತು ಆನಂದವೆಂಬುದು ನಮ್ಮ ವಿಶ್ವದಲ್ಲಿನ ಯಾವುದೇ ವಸ್ತು, ದ್ರವ್ಯ, ಸಂಗತಿ, ವಿಷಯ, ಅಥವಾ ಅನುಭವವನ್ನು ಮೀರಿದ್ದಾಗಿರುತ್ತದೆ. ಅದನ್ನು ಯಾವ ಜ್ಞಾತ ನಾಮ ರೂಪಗಳಿಂದಲೂ ಗುರುತಿಸಲಾರೆವು. ಬುದ್ಧನ ತತ್ವಗಳು ಇದನ್ನೇ ಪರ್ಯಾಯವಾಗಿ ಹೇಳಿದರೂ, ಅವು ವೇದ ಸಾರಮ್ಯವನ್ನು ಒಪ್ಪಲಿಲ್ಲವಾಗಿ ಜನರು ಅವುಗಳನ್ನೂ ವೇದ ವಿರೋಧಿ ಅಥವಾ ನಾಸ್ತಿಕವಾದವೆಂದು ತಿರಸ್ಕರಿಸಿದರು. ಉಪನಿಷತ್ತುಗಳ ಸಕಾರಾತ್ಮಕ ಮತ್ತು ನಕಾರಾತ್ಮಕ ಎರಡೂ ಬಗೆಯ ಸಮನ್ವಯಾತ್ಮಕ ಬೋಧನೆಯು ಮಾತ್ರ ಅಸತ್ ಮತ್ತು ಸತ್ ಎರಡನ್ನು ಗುರುತಿಸಿ, ಅವುಗಳ ನಡುವಣ ಏಕತೆಯನ್ನು ಸಾಧಿಸಿತು. ಏಕತೆ ಅಂದರೆ ಏಕತೆ ಮತ್ತು ಅನೇಕತೆ ಬೇರೆ ಉನ್ನತ ಅನುಭವ ಎಂಬುದನ್ನು ಅವು ಸಾರಿದವು.

ವಿದ್ಯಯಾ ಅಮೃತಮಶ್ನುತೇ; ವಿದ್ಯೆಯ ಮೂಲಕ ನಾವು ವಿಶ್ವದಲ್ಲಿನ ಏಕತೆಯನ್ನು ಕಾಣುತ್ತೇವೆ. ಅದಿಲ್ಲದೇ ಹೋದರೆ, ವಿದ್ಯೆ ಅಥವಾ ಸಾಪೇಕ್ಷ ಬಹು ಪ್ರಜ್ಞೆಯ ಅಜ್ಞಾನದಲ್ಲಿಯೇ ನಾವು ಕಳೆದು ಹೋಗುತ್ತೇವೆ. ಅವಿದ್ಯೆಯನ್ನು ಮಿಥ್ಯೆ ಅಥವಾ 'ಇಲ್ಲದ ವಸ್ತು' ಎಂದು ನಿರಾಕರಿಸಿದರೆ ಜ್ಞಾನವು ಸಹ ಅಪರಿಪೂರ್ಣತೆಗೆ ದಾರಿ ಮಾಡಿಕೊಡುತ್ತದೆ.

ನಮ್ಮ ಪುರಾತನ ಋಷಿಮುನಿಗಳ ಬೋಧನೆಯೇ ಹೀಗೆ; ತುಂಬ ಸರಳ ಹಾಗೂ ತರ್ಕ ಬದ್ಧ. ಅವರ ತಾಳ್ಮೆ ಬಹು ಶ್ಲಾಘನೀಯವಾದುದು. ಮಾನವೀಯ ಜ್ಞಾನದ ಅಂದರೆ ಮನಸ್ಸಿನ ಮೂಲಕ ಪಡೆಯಬಹುದಾದ ಅರಿವಿನ ಮಿತಿ ಅವರಿಗೆ

ಚೆನ್ನಾಗಿ ಗೊತ್ತಿತ್ತು. ಆದರೆ ಕಾಲಾಂತರದಲ್ಲಿ ಮಾನವನ ಮನೋಹೃದಯಗಳ ತಾಳ್ಮೆಗೇಡಿತನದಿಂದಾಗಿ, ವಿಶುದ್ಧ ಆತ್ಮಾನಂದ ಪಡೆಯಬೇಕಾದರೆ ಜಗತ್ತನ್ನು ಪರಿತ್ಯಾಗ ಮಾಡಬೇಕೆಂಬ ಹರಿಬರಿವಾದ ಆರಂಭವಾಯಿತು. ವೇದ ಕಾಲದ ಋಷಿಗಳು ಭಗವಂತನನ್ನು ಸೃಷ್ಟಿಯ ಎಲ್ಲ ದೃಶ್ಯ ವಸ್ತುಗಳಲ್ಲಿಯೂ ಮತ್ತು ಅದೃಶ್ಯ–ಅವ್ಯಕ್ತ ವಸ್ತುಗಳಲ್ಲಿಯೂ ಕಂಡಿದ್ದರು. ಅಂತಲೇ ಅವರು ಹೇಳಿದ್ದು; ಏಕವೊಂದೇ ಸತ್, ಅನೇಕವೆಂಬುದು ಭ್ರಮೆ, ಈ ವಾದವನ್ನು ಬಿಟ್ಟುಬಿಡೋಣ. ಅಸತ್ ಮತ್ತು ಸತ್ ಎಂಬ ವಾದವನ್ನು ಬದಿಗಿರಿಸೋಣ. ಏಕದಿಂದ ಹೋದರೂ ಅನೇಕಕ್ಕೆ, ಅನೇಕದಿಂದ ಹೋದರೂ ಏಕಕ್ಕೆ ಹೋಗುತ್ತೇವಾದ್ದರಿಂದ ಎರಡೂ ಸತ್ಯ ಎಂದೇ ಅವರು ಹೇಳಿದರು.ಅದೇ ರೀತಿ ಸತ್ ಮತ್ತು ಅಸತ್ ಕೂಡ; ಅವೂ ಸಹ ಬೇರೆ ಬೇರೆ ಅಲ್ಲ ಎಂದೇ ಅವರು ಹೇಳಿದರು.

ಮನಸ್ಸು ಕೆಲ ಸಂದರ್ಭಗಳಲ್ಲಿ ಕೆಲ ಸಂಗತಿಗಳಿಗಷ್ಟೇ ಅತಿ ಮಹತ್ವ ನಿಡುತ್ತದೆ. ನಾವಿದನ್ನು ಬಹು ಎಚ್ಚರದಿಂದ ಗಮನಿಸಬೇಕು. ಆಧ್ಯಾತ್ಮೀಕರಣಗೊಂಡ ಮನಸ್ಸು ವಿಶ್ವವನ್ನು ಕನಸಿನಂತೆ ಕಂಡರೆ, ವ್ಯಾವಹಾರಿಕ ಮನಸ್ಸು, ದೇವರು, ಪರಮಾತ್ಮ, ವಿಶ್ವಾತೀತ ಇವೆಲ್ಲವನ್ನು ಮಿಥ್ಯೆ ಎಂದು ಹೇಳುತ್ತದೆ. ಈ ಎರಡೂ ಹೇಳಿಕೆಗಳಲ್ಲಿ ಇಂದ್ರಿಯಗಳ ದತ್ತಾಂಶವನ್ನು ಪರಿಗಣಿಸಿದಾಗ ಹಾಗೂ ಜ್ಞಾನದ ಇನ್ನಿತರ ಸಾಧನಗಳನ್ನುಪಯೋಗಿಸಿಕೊಳ್ಳಲು ಅಸಮರ್ಥವಾದಾಗ ಆಧ್ಯಾತ್ಮಿಕ ಸಂಗತಿಗಳಿಗೆ ಸತ್ಯತ್ವ ನೀಡಲು ನಿರಾಕರಿಸುತ್ತದೆ. ಅದೇ ರೀತಿ ಅತಿ ಭೌತಿಕ, ಆಧ್ಯಾತ್ಮಿಕ ಸಂಗತಿಗಳ ಇರುವಿಕೆಯನ್ನು ಅನುಭವಿಸಿದ ಮನಸ್ಸು ಭೌತಿಕ ಸಾಕ್ಷ್ಯಾಧಾರಗಳನ್ನು ತಳ್ಳಿಹಾಕಿ ವಿಶ್ವದ ಮೇಲೆ ಅದೇ ಭ್ರಮೆ ಅಥವಾ ಮಿಥ್ಯಾ ತತ್ವವನ್ನು ಕೋನಗಳು ಸತ್ಯವನ್ನು ತಿರುಚಿತ್ತಿವೆ, ಎಂಬುದನ್ನು ನಾವು ಗಮನಿಸಬೇಕು. ನಾವು ವಾಸವಾಗಿರುವ ಭೌತಿಕ ವಿಶ್ವದಲ್ಲಿ ಆಕಾರ, ರೂಪ, ಇಂದ್ರಿಯ ಗ್ರಾಹ್ಯ ಸತ್ಯತೆ ಇವು ಮಹತ್ವದ ಸಾಕ್ಷಿಗಳು, ಸಂಗತಿಗಳು; ಅಲೌಕಿಕ ಅಥವಾ ಅತಿಪ್ರಾಕೃತಿಕ ಸಂಗತಿಗಳು ಇಂದ್ರಿಯಾನುಭವಕ್ಕೆ ದಕ್ಕುವಂತಿದ್ದರೆ ಮನಸ್ಸು ಸತ್ಯವೆಂದು ಒಪ್ಪುತ್ತದೆ. ಆಕಾರ, ರೂಪಗಳಿರುವ ವಸ್ತುವನ್ನು ಸ್ವಯಂಭೂ ಎಂದು ಹೇಳುವುದು ಅಜ್ಞಾನವಾಗುತ್ತದೆ. ಆಕಾರ, ರೂಪ, ಗುಣ ಇವೆಲ್ಲ ಮೂಲತಃ ಯಾವುದು ಅವ್ಯಕ್ತವಾಗಿದೆಯೋ, ಆಧ್ಯಾತ್ಮಿಕ ಅಂದರೆ ಅಲೌಕಿಕವಾಗಿದೆಯೋ, ಆದರೆ ಪ್ರಕಟಣೆ ಅಥವಾ ವ್ಯಕ್ತರೂಪ ಮಾತ್ರ. ಮೂಲತಃ ಅದು ನಿರಾಕಾರವಾಗಿರುತ್ತದೆ, ನಿರ್ಗುಣವಾಗಿರುತ್ತದೆ. ಆಕಾರ, ರೂಪ, ಗುಣಾದಿಗಳೆಲ್ಲವೂ ದೈವೀ ಪ್ರಜ್ಞೆಯು ಅಥವಾ ಮೂಲ ಚೈತನ್ಯ ಪ್ರಜ್ಞೆಯ

ಕ್ರಿಯಾರೂಪಗಳ ಮಾತ್ರ. ಮೂಲ ಚೈತನ್ಯವನ್ನು ಜಡದಲ್ಲಿ ಪ್ರಕಟಪಡಿಸುವ ಹಂತಗಳು ಅವು.

ಬ್ರಹ್ಮ ವಸ್ತುವು ಆಕಾರಗಳಲ್ಲಿ ಪ್ರಕಟವಾಗಬೇಕಾದರೆ ಜಡ ಭೌತಿಕವನ್ನು ಅಧಾರ ಅಥವಾ ಮಾಧ್ಯಮವನ್ನಾಗಿ ಆಯ್ದುಕೊಳ್ಳುತ್ತದೆ. ಅಂದರೆ, ಸಾಪೇಕ್ಷ ವಸ್ತುಗಳಲ್ಲಿ, ತಾತ್ಕಾಲಿಕ ಪ್ರಜ್ಞೆಯಲ್ಲಿ ಪ್ರಕಟವಾಗುವುದು. ಬ್ರಹ್ಮ ವಸ್ತುವಿನ ಅನಿವಾರ್ಯತೆ ಅಲ್ಲ, ಅದರೆ ಸ್ವಸಂತೋಷ ಬ್ರಹ್ಮ ವಸ್ತು ಈ ವಿಶ್ವದಲ್ಲಿ ಏಕಿದೆ? ಅದು ಜೀವನದ, ಪ್ರಂಪಚದ ಮೌಲ್ಯಗಳಲ್ಲಿ ತನ್ನನ್ನು ಅಭಿವ್ಯಕ್ತಗೊಳಿಸಲು ಬಯಸಿದೆಯಾದ್ದರಿಂದ ಇದೆ. ಬ್ರಹ್ಮ ವಸ್ತುವು ವಿಕಸತತ್ವದ ಮೂಲಕ ಹಂತಹಂತವಾಗಿ ನಿಧಾನವಾಗಿ ಪ್ರಕಟವಾಗಲು ಬಯಸುತ್ತದೆಯಾದ್ದರಿಂದ ಜಡ–ಪ್ರಾಣ–ಮನಸ್ಸು ಮುಂತಾದ ಕ್ರಮ ಜಾರಿಯಲ್ಲಿದೆ. ಆದ್ದರಿಂದ ಮಾನವನ ಕರ್ತವ್ಯವೆಂದರೆ ಈ ವಿಕಾಸದಲ್ಲಿ ಸಕ್ರಿಯವಾಗಿ ಭಾಗವಹಿಸುವುದೇ ಆಗಿದೆ. ಮಾನವನ ಜೀವ(ನ)ದಲ್ಲಿ ದೇವನನ್ನು ಕಾಣಬೇಕೆಂಬುದೇ ಮಾನವನ ಹಿರಿಮೆ. ಅವನ (ವಿಕಾಸದ) ಪಯಣ ಆರಂಭವಾಗುವುದು ಪ್ರಾಣಿಗಳ ಜೈವಿಕ ಕ್ರಯಾ ಕರ್ಮಗಳ ಮೂಲಕ. ವಿಕಾಸದ ಧ್ಯೇಯವು ಮಾನವನ ಜೀವನದಲ್ಲಿ ದೈವೀ ಅಸ್ತಿತ್ವವನ್ನು ಪ್ರಕಟಿಸುವುದೇ ಆಗಿದೆ.

ಇದೇ ಕ್ರಮ ಮನಸ್ಸಿನಲ್ಲೂ ಸಹ. ನಿಜವಾದ ಆತ್ಮಸಾಕ್ಷಾತ್ಕಾರವೆಂದರೆ ವಿಶ್ವದ ಎಲ್ಲ ವ್ಯಕ್ತಾವ್ಯಕ್ತ ವಸ್ತುಗಳನ್ನು, ತತ್ವಗಳನ್ನು ಉತ್ತರೋತ್ತರ ಒಳಗೊಳ್ಳುತ್ತ ಹೋಗುವುದೇ ಆಗಿದೆ. ಆದರೆ ನಾವು ಒಂದು ಕ್ಷೇತ್ರಕ್ಕೆ ಹೋಗುವಾಗ, ಹೊಸ ಆವಿಷ್ಕಾರದ ಉತ್ಸಾಹದಲ್ಲಿ ಹಳೆಯದನ್ನು ತ್ಯಜಿಸುವ ಭರದಲ್ಲಿರುತ್ತೇವೆ. ಇದು ಸಲ್ಲದು. ಮನಸ್ಸಿನ ಸ್ತರಕ್ಕೆ ಬರುವಾಗ ಅಥವಾ ಬಂದಾಗ ಪ್ರಾಣವನ್ನೇ ಅಥವಾ ಭೌತಿಕವನ್ನೋ ತ್ಯಜಿಸಿದ್ದರೆ, ಅಥವಾ ನಿರ್ಲಕ್ಷಿಸಿದರೆ ಏನಾಗುತ್ತಿತ್ತೋ ಊಹಿಸಿಕೊಳ್ಳಿ. ಅದೇ ರೀತಿ ಆಧ್ಯಾತ್ಮಿಕದ ಆಕರ್ಷಣೆಯಲ್ಲಿ ಪ್ರಾಣಿಕ, ಮಾನಸಿಕ, ಭೌತಿಕ ಜೀವನವನ್ನು ಕಡೆಗಣಿಸಬಾರದೆಂಬುದನ್ನು ನಾವು ಕಲಿಯಬೇಕಿದೆ. ಹಾಗೆ ಮಾಡುವುದರಿಂದ ಮಾತ್ರ ನಾವು ಭಗವಂತನನ್ನು ಸಮಗ್ರವಾಗಿ ಪ್ರಕಟಿಸಲು ಸಾಧ್ಯವಾಗುವುದು. ನಾವು ಎಷ್ಟೇ ಎತ್ತರಕ್ಕೇ ಏರಿದರೂ, ಅಸತ್ತಿನ್ನು ಅರಿತುಕೊಳ್ಳುವ ಹಂತಕ್ಕೆ ಏರಿದರೂ ಸಹ, ನಮ್ಮ ಆಧಾರವನ್ನು ಬಿಡಬಾರದು. ಹಳೆಯದನ್ನು ಬಿಡುವುದಲ್ಲ, ಅದನ್ನು ಹೊಸ ಬೆಳಕಿನಲ್ಲಿ ಪುನರ್ರೂಪಿಸಬೇಕು. ಪರಿವರ್ತಿಸಬೇಕು. ಇದು ದೈವೀ ಜೀವನದ ನಿಯಮ. ಬ್ರಹ್ಮವಸ್ತು ಸಮಗ್ರವಾದುದು,

ಅದು ಅನಂತಾನಂತ ಪ್ರಜ್ಞೆಗಳನ್ನೆಲ್ಲ ಏಕೀಕರಿಸುತ್ತದೆ, ಏಕಕಾಲಕ್ಕೆ ಎಲ್ಲವನ್ನೂ ಧಾರಣ ಮಾಡುತ್ತದೆ. ನಾವೂ ಸಹ, ಬ್ರಹ್ಮ ಧರ್ಮ ಅಥವಾ ಸ್ವಭಾವವನ್ನು ಪ್ರಕಟಿಸುತ್ತ ಎಲ್ಲವನ್ನೂ ಸಮಗ್ರವಾಗಿ ಒಳಗೊಳ್ಳಬೇಕು.

ಪ್ರಾಪಂಚಿಕ ಜೀವನವನ್ನು ತುಚ್ಛೀಕರಿಸುವಂತಿಲ್ಲ; ನಮ್ಮ ಜೀವನಕ್ಕೆ ಮೂರು ಮುಖ್ಯ ಆಯಾಮಗಳಿವೆ, ವೈಯಕ್ತಿಕ, ವಿಶ್ವಾತ್ಮಕ ಮತ್ತು ವಿಶ್ವಾತೀತ. ಇವುಗಳ ಪೈಕಿ ವೈಯಕ್ತಿಕವು, ವಿಶ್ವದಲ್ಲಿಯೇ ಇದ್ದರೂ ತಾನು ವಿಶ್ವದಿಂದಲೂ ವಿಶ್ವಾತೀತದಿಂದಲೂ ಭಿನ್ನ ಎಂದು ಭಾವಿಸುತ್ತದೆ. ವಿಶ್ವಾತೀತತೆಯನ್ನು ನಾವು ದೇವರೆಂದೂ ಭಗವಂತ ಎಂದೂ ಕರೆಯುತ್ತೇವೆ. ಅಂದರೆ ಅವನು ವಿಶ್ವದ ಮೇಲಿದ್ದಾನೆಯೇ ಹೊರತು ವಿಶ್ವದಿಂದ ಹೊರಗೆ ಎಂದಾಗಲಿ ಬೇರೆ ಎಂದಾಗಲಿ ಅರ್ಥವಾಗುವುದಿಲ್ಲ. ವೈಯಕ್ತಿಕ ಹಾಗೂ ವಿಶ್ವಾತ್ಮಕ ಎರಡನ್ನೂ ನಿರಾಕರಿಸಿ ನೇರವಾಗಿ ವಿಶ್ವಾತೀತತೆಗೆ ಹೋಗಿಬಿಡುವುದೇ ಉತ್ತಮ ಉಪಾಯವೆಂದು ಇದರಿಂದ ತೋರಬಹುದು. ಆದರೆ ಬ್ರಹ್ಮನ ಏಕತೆಯ ಸಮಗ್ರ ದೃಷ್ಟಿಕೋನವು ಈ ರೀತಿ ಪ್ರಾಪಂಚಿಕ ಜೀವನವನ್ನು ಪರಿತ್ಯಜಿಸುವುದನ್ನೇನೂ ಪುರಸ್ಕರಿಸುವುದಿಲ್ಲ. ನಾವು ಎಚ್ಚರಿಕೆ ವಹಿಸಬೇಕಾದ ಸಂಗತಿ ಏನೆಂದರೆ, ವೈಯಕ್ತಿಕ ಚಟುವಟಿಕೆಗಳು ವಿಶ್ವಾತ್ಮಕ್ಕೇ ಆಗಲಿ, ವಿಶ್ವಾತೀತತೆಗೆ ಆಗಲಿ, ಅಸಂಬಂಧ್ಧವಾಗಿರಬಾರದು. ವಿಶ್ವಾತೀತವು ವಿಶ್ವವನ್ನು ತೊರೆದಿಲ್ಲ; ವಿಶ್ವವು ವ್ಯಕ್ತಿಯನ್ನು ತೊರೆದಿಲ್ಲ; ಹಾಗೆ ನೋಡಿದರೆ ವ್ಯಕ್ತಿಯೇ ವಿಶ್ವ ಪ್ರಜ್ಞೆಯ, ವಿಶ್ವ ವ್ಯವಹಾರದ ಕೇಂದ್ರವಾಗಿದ್ದಾನೆ; ವಿಶ್ವವು ನಿರಾಕಾರ, ಅನಿರ್ವಚನೀಯ ವಿಶ್ವಾತೀತ ಪ್ರಜ್ಞೆಯ ಪ್ರಕಟೀಕರಣವಾಗಿದೆ. ಇದನ್ನು ನಾವು ಗಮನಿಸಬೇಕು.

ಇದೇ ನಿಜವಾದ ಸಂಬಂಧ; ನಮ್ಮ ಅಜ್ಞಾನದಿಂದಾಗಿ ಈ ಸಂಬಂಧದ ಕಲ್ಪನೆ ನಮಗಿಲ್ಲ. ನಮಗೆ ಜ್ಞಾನವಾದಾಗ ಅಥವಾ ನಿಜವಾದ ಪ್ರಜ್ಞೆಯ ಬೋಧವಾದಾಗ ಈ ಸಂಬಂಧವೇನೂ ಬದಲಾಗುವುದಿಲ್ಲ. ಬದಲಾಗುವುದೇನೆಂದರೆ ವ್ಯಕ್ತಿಯ ಆಂತರಿಕ ಮತ್ತು ಬಾಹ್ಯ ದೃಷ್ಟಿಕೋನ ಮತ್ತು ವ್ಯವಹಾರ. ವ್ಯಕ್ತಿಯು ವಿಶ್ವಾತೀತದ ವ್ಯಾಪಾರಕ್ಕೆ ಯಾವಾಗಲೂ ಅವಶ್ಯವೇ. ವ್ಯಕ್ತಿಗೆ ಸಾಕ್ಷಾತ್ಕಾರವಾದಾಗ, ವಿಶ್ವಾತೀತವಾದ ಪ್ರಜ್ಞೆಯು ವ್ಯಕ್ತಿಯಲ್ಲಿ ಪ್ರಕಟವಾಗತೊಡಗುವುದು. ಇನ್ನೂ ಹೇಳಬೇಕೆಂದರೆ ವ್ಯಕ್ತಿಯಲ್ಲಿ ವಿಶ್ವಾತೀತವಾದುದು ಪ್ರಕಟವಾಗುವುದೆಂದರೆ ವಿಶ್ವ ವ್ಯಾಪಾರಕ್ಕೆ ವ್ಯಕ್ತಿಯು ಅನಿವಾರ್ಯ ಎಂದು ಅರ್ಥವಾಗುವುದು. ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯು ಈ ಜಗದ ವ್ಯಾಪಾರದಿಂದ ನಿವೃತ್ತವಾಗುವುನೆಂದಾದರೆ, ಈ

ಜಗತ್ತು ಎಂದೆಂದಿಗೂ ಕತ್ತಲೆಯಲ್ಲಿ, ಅಜ್ಞಾನದಲ್ಲಿ, ದುಃಖ ನೋವುಗಳಲ್ಲಿ ತೊಳಲಾಡುವುದು ಎಂದಾಗುವುದು. ಅಂಥ ನಿತ್ಯ ನರಕದ ಜಗತ್ತನ್ನು ಕಲ್ಪಿಸಿಕೊಳ್ಳುವುದು ಅಮಾನವೀಯವಾದೀತು, ಅಪರಾಧವಾದೀತು.

ಮುಕ್ತಿಯ ಕಲ್ಪನೆಯೇನೋ ಹೀಗಿದೆ; ಆದರೆ ಹಾಗಾದಾಗ, ಅಂದರೆ ವಿಶ್ವವೆಲ್ಲವೂ ಭ್ರಮೆಯಲ್ಲಿರುವಾಗ ವ್ಯಕ್ತಿಯೊಬ್ಬನು ಪಾರಾಗಿ ಹೋಗುವುದರಿಂದ ಬಹಳ ಪ್ರಯೋಜನವೇನೂ ಆಗುವುದಿಲ್ಲ. ಅದ್ವೈತದಲ್ಲಿ ಜೀವಾತ್ಮನು ಪರಮಾತ್ಮ-ನೊಡನೆ ಐಕ್ಯ ಹೊಂದಿದಾಗ, ವಿಭಕ್ತ ಭಾವ–ಅಜ್ಞಾನ ನಾಶವಾಗುವುದೇನೋ ನಿಜ, ಆದರೆ ವಾಸ್ತವವಾಗಿ ಅದರ ಫಲ ಯಾರಿಗೆ? ಪರಮಾತ್ಮನಿಗಂತೂ ಅಲ್ಲ, ಏಕೆಂದರೆ ಅವನೆಂದೂ ಬದ್ಧವಾಗಿಲ್ಲ; ಜಗತ್ತು ಅಲ್ಲ, ಏಕೆಂದರೆ ಅದು ಕೊನೆಯವರೆಗೂ ಬದ್ಧವಾಗಿಲ್ಲ; ಉಳಿಯುವುದು; ಕೇವಲ ವೈಯಕ್ತಿಕ ಜೀವಾತ್ಮ ಲಾಭ ಹೊಂದುತ್ತಾನೆ ಅನ್ನುವುದಾದರೆ, ಅವನು ಒಂದರ್ಥದಲ್ಲಿ ವಿಶ್ವದಿಂದಲೂ, ವಿಶ್ವಾತೀತದಿಂದಲೂ ಬ್ರಹ್ಮ ವಸ್ತುವಿನಿಂದಲೂ ಭಿನ್ನವಾದ ತತ್ತ್ವವೆಂದು ಒಪ್ಪಿದಂತಾಗುವುದು. ಆಗ ಮಾಯಾವಾದದ ಪ್ರಕಾರ ಜೀವಾತ್ಮನೇ ಭ್ರಮೆ ಅಥವಾ ಮಿಥ್ಯೆ ಆಗಿರುವಾಗ ಇಲ್ಲದ ಅಥವಾ ಅಸ್ತಿತ್ವವೇ ಇಲ್ಲದ ಜೀವಾತ್ಮ ಲಾಭ ಪಡೆಯುವುದೆಂತು? ಜೀವಾತ್ಮ ಸುಳ್ಳು, ವಿಶ್ವವು ದೊಡ್ಡ ಸುಳ್ಳು, ಬಂಧನವೆಂಬುದೇ ಸುಳ್ಳು, ಎಲ್ಲವೂ ಮಾಯೆ ಅನ್ನುತ್ತ ನಾವು ಸುಳ್ಳಿನ ಸರಮಾಲೆಯಲ್ಲಿ ಸಿಕ್ಕಿ ಹಾಕಿಕೊಳ್ಳುತ್ತೇವೆ. ಇಲ್ಲದ ಆತ್ಮವು ಇಲ್ಲದ ಬಂಧನವನ್ನು ಕಳಚಿಹಾಕಲು ಬಡಿದಾಡುವುದೇಕೆ? ಯಾವ ಪುರುಷಾರ್ಥಕ್ಕಾಗಿ ಅದು ಬಡಿದಾಡುವುದು? ಜ್ಞಾನದ ಅಂತಿಮ ಸಂದೇಶ ನಾಯಂ–ಬದ್ಧ; ನಾಯಂ–ಮುಕ್ತ; ನಾಯಂ–ಮುಮುಕ್ಷುರಪಿ ಈ ರೀತಿ ಗೊಂದಲಮಯವಾಗಿ ಬಿಡುವುದು. ವಿದ್ಯೆಯೂ ಸಹ ಅವಿದ್ಯೆಯಂತೆ ತಾತ್ಕಾಲಿಕವಾಗುವುದು. ನಾವು ಪಾರಾಗಲು ಮಾಯೆ ಬಿಡುವುದಿಲ್ಲ, ನಾವು ಅದರ ರಹಸ್ಯ ಬಿಡಿಸಲು ಅಸಮರ್ಥರಾಗಿಬಿಡುವೆವು.

ಆದರೆ ಇದನ್ನೆಲ್ಲ ವಿವರಿಸಲು ಬರುವುದಿಲ್ಲ, ಅದೊಂದು ರೀತಿಯ ಆರಂಭಿಕ ಮಾಯೆ, ಇದನ್ನು ಎಲ್ಲರೂ ಒಪ್ಪಿಕೊಳ್ಳಲೇಬೇಕು ಎಂದು ಹೇಳಿ ಶಾಸ್ತ್ರಕಾರರು ಮುನ್ನಡೆದು ಬಿಡುತ್ತಾರೆ. ಆದರೆ ನಾವು ಮಾತ್ರ ಗೊಂದಲದಲ್ಲಿ ಬೀಳುತ್ತೇವೆ. ಅತ್ಯುನ್ನತವಾದ ಅಹಂನ ಕಾರ್ಯದ ಮೂಲಕವೇ ನಾವು ಅಹಂನ ಕಗ್ಗಂಟಿನಿಂದ ಬಿಡಿಸಿಕೊಳ್ಳಬೇಕು; ನನ್ನ ವೈಯಕ್ತಿಕ ಮುಕ್ತಿ ಅಂದರೂ ಸಹ ಅದು ಅಹಂನ ರೂಪವೇ; ವೈಯಕ್ತಿಕ ಮೋಕ್ಷವನ್ನು ಬಯಸುವುದೆಂದರೆ ನನ್ನ ಸಹಚರಿ

ಜೀವಾತ್ಮಗಳೆಲ್ಲ ಭ್ರಮೆ, ಮಾಯೆ ಅಂದುಕೊಂಡು, ನಾನು ಮಾತ್ರ ಈ ಮಾಯಜಾಲದಿಂದ ಪಾರಾಗಲೆತ್ನಿಸುವುದೇ ಮುಕ್ತಿ ಅನ್ನುವುದಾದರೆ, ನಾನು ಪಾರಾಗುವುದು ನಿಜ, ಜಗತ್ತಿನ ಇತರ ಜೀವಾತ್ಮಗಳು ಮಾಯೆಯಲ್ಲಿರುವುದು ನಿಜ ಎಂದು ಹೇಳಿದಂತಾಗುವುದು. ಇದು ಒಂದು ರೀತಿಯ ವಿಚಿತ್ರ ಭ್ರಮೆ! ಜೀವ ಭ್ರಮೆಯೋ? ಜಗತ್ತು ಭ್ರಮೆಯೋ? ಇಲ್ಲದ ಮಾಯೆ ಭ್ರಮೆಯೋ? ಮುಕ್ತಿ ಭ್ರಮೆಯೋ? ವೈಯಕ್ತಿಕ ಮುಕ್ತಿಯ ನಂತರವೂ ಜೀವ ಜಗತ್ತು ಭ್ರಮೆಯಲ್ಲಿಯೋ ಮುಂದುವರಿಯುವುದೋ? ಒಟ್ಟಿನಲ್ಲಿ ಎಲ್ಲವೂ ನಿರುತ್ತರ–ಮಾಯಜಾಲ–ವಾಗಿಬಿಡುವುದು.

ವಿಶ್ವ ಮತ್ತು ಆತ್ಮ (ಅಥವಾ ಪರಮಾತ್ಮ) ಇವರ ನಡುವಣ ಭೇದವನ್ನು, ಭೇದ ಕಲ್ಪಿಸುವ ಸಂಗತಿಗಳನ್ನು ಬದಿಗಿರಿಸದೇ ಹೋದರೆ ಈ ಸಮಸ್ಯೆ ಬಗೆಹರಿಯುವುದಿಲ್ಲ. ನಾವು ಏಕಕಾಲಕ್ಕೆ ಎರಡನ್ನೂ, ಏಕತ್ವವನ್ನು ಮತ್ತು ಅನೇಕತ್ವವನ್ನು, ಅವ್ಯಕ್ತ ಮತ್ತು ವ್ಯಕ್ತವನ್ನು, ಒಪ್ಪಿದಾಗ ಮಾತ್ರ ಈ ಸಮಸ್ಯೆಯ ಮೇಲೆ ಕಣ್ಣಾಡಿಸಬಹುದು. ನಮ್ಮ ಏಕೈಕ ಪ್ರಜ್ಞೆಯು ಏಕಕಾಲಕ್ಕೆ ಅನೇಕ ವಸ್ತು, ವಿಷಯಗಳನ್ನು ಗ್ರಹಿಸುವಂತೆ, ಮೂಲದಲ್ಲಿನ ಪೂರ್ಣ ಪ್ರಜ್ಞೆಯು (ದಿವ್ಯ ಚೈತನ್ಯವು) ತನಗೆ ಬೇಕಾದ ರೀತಿಯಲ್ಲಿ ಪ್ರಕಟವಾಗುವುದರಲ್ಲಿ (ಬೇರೆ ಬೇರೆ ವಿಷಯ, ವಸ್ತುಗಳ ರೂಪವನ್ನು ತಾಳುವಲ್ಲಿ) ಏನು ಅಡ್ಡಿ ಇದೆ? ಈ ವಿಶ್ವದಲ್ಲಿ ನಿಜವಾಗಿ ಯಾವುದೂ ಬಂಧನದಲ್ಲಿಲ್ಲ, ಯಾವುದೂ ಮುಕ್ತವಾಗಿಲ್ಲ, ಯಾವುದೂ ಅಥವಾ ಯಾರೂ ಮುಕ್ತರಾಗಲು ಬಯಸುತ್ತಿಲ್ಲ, ಏಕೆಂದರೆ ಅದು ಅಥವಾ ಎಲ್ಲವೂ ಸದಾಕಾಲವೂ ಪರಿಪೂರ್ಣ ಸ್ವಾತಂತ್ರ್ಯದಲ್ಲೇ ಇದೆ. ಯಾವುದು ಸ್ವಾಂತತ್ರ್ಯ ಅಥವಾ ಮುಕ್ತತೆಯನ್ನು ಪಡೆದೇ ತೀರಬೇಕೆಂಬ ಬಂಧನದಲ್ಲಿಯೂ ಇಲ್ಲ. ಎಲ್ಲವೂ (ಅಥವಾ ತತ್) ಬದ್ಧನಂತೆ ಲೀಲೆ ಮಾಡಬಹುದು, ಆಟವಾಡಬಹುದು; ಆದರೆ ಸದಾಕಾಲವೂ ಸ್ವತಂತ್ರ್ಯವಾಗಿದ್ದುಕೊಂಡೇ ಬಂಧನದ ಆಟವಾಡಬಹುದು.

ವಿಶ್ವಾತೀತತೆಯು ಕೇವಲ ನಿರುಪಾಧಿಕ. ನಿರ್ಗುಣ ಸ್ಥಿತಿ. ಅದು ದೇಶ ಕಾಲಗಳ ಆಚೆಗಿನ ಮುಕ್ತ ಸ್ಥಿತಿ. ಅಲ್ಲಿ ಸಾಂತ, ಅನಂತ, ಮಾಯೆ ನಿರ್ಮಾಯ ಈ ರೀತಿಯ ಪ್ರಶ್ನೆಗಳೇ ಇಲ್ಲ. ಆದರೆ ವಿಶ್ವದಲ್ಲಿ ಪ್ರಕಟವಾದಾಗ ತನಗೆ ಹೇಗೆ ಬೇಕೋ ಹಾಗೆ ಪ್ರಕಟವಾಗುವ ಸ್ವಾತಂತ್ರ್ಯವನ್ನು ಅದು ಬಳಸಿಕೊಳ್ಳುತ್ತದೆ. ಮಾಯೆ ಅನ್ನುವುದು ಅದರ ಯೋಜನೆ. ಆ ಯೋಜನೆಯ ಪ್ರಕಾರ ಏಕತೆ–

ಅನೇಕತೆ, ಸಾಂತ–ಅನಂತಗಳೆಂಬ ದ್ವಂದ್ವಗಳನ್ನು ಸೃಷ್ಟಿಸುತ್ತದೆ. ಈ ಅನೇಕತೆಯ ಏಕತೆಯನ್ನದು ಮೂರು ಆಯಾಮಗಳಲ್ಲಿ ವ್ಯಕ್ತಪಡಿಸುತ್ತದೆ. ಸುಪ್ತಚೇತನ (ಅಥವಾ ಉಪಚೇತನದಲ್ಲಿ) ಈ ಏಕತೆಯ ಸ್ಪಷ್ಟತೆ ಇದ್ದರೂ ಬಾಹ್ಯದಲ್ಲಿ ಮಾತ್ರ ಅದು ವ್ಯಕ್ತವಾಗುವುದಿಲ್ಲ. ಚೇತನ ಅಥವಾ ಅಹಂ ಪ್ರಜ್ಞೆಯ ಸ್ತರದಲ್ಲಿ ಏಕತೆಯು ತನ್ನ ಶರೀರದ ವೈವಿಧ್ಯತೆಗೆ, ಬಾಹ್ಯ ಕೆಲಸ ಕಾರ್ಯಗಳ ಅನೇಕತೆಗೆ ಸೀಮಿತವಾಗಿರುತ್ತದೆ, ಇತರರ ಜೊತೆ, ಏಕತೆಯನ್ನು ಗುರುತಿಸಲು ವಿಫಲವಾಗುತ್ತದೆ. ಈ ವಿಶ್ವಾತ್ಮಕ "ನಾನು" ಎಂಬ ಅಹಂ ಪ್ರಜ್ಞೆಯೇ ವೈಯಕ್ತಿಕ ವ್ಯಕ್ತಿತ್ವದ ನಿರ್ಮಾಣಕ್ಕೆ ಕಾರಣವಾಗುತ್ತದೆ. ಈ ಅಹಂ ಪ್ರಜ್ಞೆಯು ಕರಗಿಹೋದಾಗ, ವೈಯಕ್ತಿಕತೆಯು ಕರಗಿ ಹೋಗಿ, ನಾವೀಗ ಯಾವುದನ್ನು ಅತಿಚೇತನ ಎಂದು ಕರೆಯುತ್ತೇವೆಯೋ ಅದು ಸ್ಥಾಪಿತವಾಗುತ್ತದೆ. ಆಗ ವಿಶ್ವಾತ್ಮಕ ಏಕತೆಯ ಅರಿವಾಗುತ್ತದೆ. ವೈಯಕ್ತಿಕ, ವಿಶ್ವಾತ್ಮಕ ಮತ್ತು ವಿಶ್ವಾತೀತ ಮೂರು ಒಂದೇ ಎಂಬ ಅನುಭವ ಆಗುತ್ತದೆ.

ಆದ್ದರಿಂದ ವೈಯಕ್ತಿಕ ಪ್ರತ್ಯಗಾತ್ಮನ ಮುಕ್ತಿಯ ನಿರ್ಧಾರಾತ್ಮಕ ದೈವೀ ಕಾರ್ಯದ ಮುಖ್ಯ ಕೇಂದ್ರವಾಗಿದೆ. ಇದು ಅತ್ಯಂತ ಅವಶ್ಯ ಆರಂಭಿಕ ಹೆಜ್ಜೆಯಾಗಿದೆ. ಇದರ ಮೇಲೆಯೇ ಎಲ್ಲವೂ ಅವಲಂಬಿತವಾಗಿದೆ. ಮುಕ್ತವಾದ ಆತ್ಮವು ಏಕತೆಯ ಅನುಭವನ್ನು ಉದ್ದಗಲಕ್ಕೆ ಎತ್ತರಕ್ಕೂ ಹರಡುತ್ತದೆ; ಅದು ವಿಶ್ವದ ಇತರ ಜೀವಿಗಳ ಜೊತೆಗೂ ಏಕತೆ ಅನುಭವಿಸುತ್ತದೆ, ವಿಶ್ವ ಮತ್ತು ವಿಶ್ವಾತೀತದ ಜೊತೆಗೂ ಏಕತೆ ಅನುಭವಿಸುತ್ತದೆ. ಈ ಉದ್ದಗಲಕ್ಕೂ ಹರಡಿದ ಏಕತೆಯು, ತನಗೆ ದೊರೆತ ಮುಕ್ತಿಯ ಅನುಭವವನ್ನು ಇತರ ಜೀವಾತ್ಮಗಳ ಜೊತೆಗೂ ಹಂಚುವುದರ ಮೂಲಕ ಏಕತೆ ಸಾಧಿಸುತ್ತದೆ. ದೈವೀ ಆತ್ಮವು ಹೀಗೆ ಅನೇಕ ಜೀವಾತ್ಮಗಳಲ್ಲಿ ಮುಕ್ತ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ. ಆದ್ದರಿಂದ ಒಂದೇ ಒಂದು ಜೀವಾತ್ಮ ಮುಕ್ತವಾದರೂ ಸಹ ಆ ಮುಕ್ತ ಪ್ರಜ್ಞಾ ಸ್ಥಿತಿಯು ಇತರ ಜೀವಿಗಳಿಗೂ ಸಹ ಹರಡಿ, ಸಮಸ್ತ ಜೀವಗಳಿಗೂ ವ್ಯಾಪಿಸುವ ಕ್ರಿಯೆ ನಡೆಯುತ್ತದೆ. ಇದನ್ನು ಇಲ್ಲಿಗೇ ಕೊನೆ ಎಂದು ಹೇಳಲು ಸಾಧ್ಯವೇ ಇಲ್ಲ. ದೈವೀ ಪ್ರಜ್ಞೆಗೆ, ದೈವೀ ಪ್ರಜ್ಞೆಗೆ, ದೈವೀ ವ್ಯಾಪ್ತಿಗೆ ಅಂತ್ಯವೆಂಬುದೆಲ್ಲಿದೆ? ಇಲ್ಲಿ ಬುದ್ಧನ ಉದಾಹರಣೆಯನ್ನು ನೋಡಬಹುದು: ನಿರ್ವಾಣದ ಅಂಚಿನಲ್ಲಿ ಅಸತ್ತಿನ ಅಂಚಿನಲ್ಲಿ ನಿಂತಿದ್ದ ಅವನ ಆತ್ಮವು ಹಿಂತಿರುಗಿ, ಈ ಭೂಮಿಯ ಮೇಲಿರುವ

ಎಲ್ಲ ಆತ್ಮಗಳು ಮುಕ್ತಿಯನ್ನು (ನಿರ್ವಾಣವನ್ನು) ಹೊಂದುವವರೆಗೆ ತಾನು ವಿಶ್ರಮಿಸುವುದಿಲ್ಲವೆಂದು ಪ್ರತಿಜ್ಞೆ ಮಾಡಿತೆಂದು ಹೇಳಲಾಗುವುದು.

ಏನೇ ಆಗಲಿ, ನಾವು ವಿಶ್ವದಲ್ಲಿದ್ದಕೊಂಡೇ ಅತ್ಯುನ್ನತ ಸಿದ್ಧಿಯನ್ನು ಪಡೆಯಲು ಸಾಧ್ಯವಿದೆ. ಆತ್ಮಕ್ಕೆ ಎರಡು ಬಗೆಯ ಸ್ವಾತಂತ್ರ್ಯಗಳಿವೆ–ಅಂತರಂಗದಲ್ಲಿ ಸಂಪೂರ್ಣ ಮುಕ್ತವಾಗಿರುತ್ತ ಬಾಹ್ಯದಲ್ಲಿ ಬುದ್ಧನಂತೆ ವರ್ತಿಸಬಹುದು. ಬೇಡವೆಂದರೆ ಬಂಧನವನ್ನು ಕಳಚಿ ಸದಾ ಮುಕ್ತನಾಗಿಯೂ ಇರಬಹುದು. ನಾವು ಕೂಡ ಆ ಪರಮ ಬ್ರಹ್ಮ "ತತ್"ನೇ ಆಗಿರುವುದುರಿಂದ ನಮಗೂ ಈ ಸ್ವಾತಂತ್ರ್ಯ ಇದೆ. ಇವೆರಡೂ ಸ್ಥಿತಿಗಳನ್ನೂ ಸಾಮರಸ್ಯದಿಂದ ಕಾಯ್ದುಕೊಂಡು ಹೋದಾಗ ಪರಿಪೂರ್ಣ ಜೀವನ ಸಿದ್ಧಿಸುತ್ತದೆ. ಅದು ದೈವೀ ಜೀವನವಾಗಬಲ್ಲದು. ಪ್ರಪಂಚವನ್ನು, ನಿರಾಕರಿಸಿ ವೈಯಕ್ತಿಕ ಮುಕ್ತಿ ಬಯಸುವುದು ತಪ್ಪೇನಲ್ಲ; ಪ್ರಪಂಚವನ್ನು, ಎಲ್ಲ ವ್ಯವಹಾರಗಳನ್ನು ಒಪ್ಪಿಕೊಂಡು ಎಲ್ಲದರಲ್ಲೂ ಏಕತೆಯನ್ನು ಅನುಭವಿಸುವುದು, ಏಕತೆಯನ್ನು ಸ್ಥಾಪಿಸುವುದು ಕೂಡ ಅಷ್ಟೇ ಸರಿ ನಾವು ವಿಚಾರ ಮಾಡಬೇಕಾದುದು ಇಷ್ಟೇ, ಯಾವುದನ್ನು ಸ್ವತಃ ಪರಮಾತ್ಮನೇ ಸಮರಸಗೊಳಿಸಿದ್ದಾನೆಯೋ, ಅದನ್ನು ತ್ಯಜಿಸಬೇಕೆಂಬ ಹಠ ನಮಗೇಕೆ? ಅವನಂತೆ ನಾವೂ ಪೂರ್ಣರಾಗಲೂ ಯತ್ನಿಸುವುದರಲ್ಲಿಯೇ ಪೂರ್ಣ ಸಿದ್ಧಿ ಇದೆ ಅಲ್ಲವೇ?

ಅವಿದ್ಯಯಾಂ ಮೃತ್ಯುಂತೀರ್ತ್ವಾ, ಅವಿದ್ಯೆ, ಅನೇಕತೆಯ ಮೂಲಕ ಹಾದು, ನಮ್ಮ ತಾತ್ಕಲಿಕ ಅಹಂ ಪ್ರಜ್ಞೆಯಿಂದ ಮುಕ್ತವಾಗಿ, ಸಾವು ನೋವುಗಳಿಂದ ಪಾರಾಗಿ; ವಿದ್ಯಾಯಾಂ ಅಮೃತಮಶ್ನುತೇ; ಅವಿದ್ಯೆಯನ್ನು ಒಪ್ಪಿಕೊಂಡು, ಅನೇಕತೆಯನ್ನು ಒಪ್ಪಿಕೊಂಡು, ಅಲ್ಲಿ ಏಕತೆಯನ್ನು ಅನುಭವಿಸುತ್ತ ನಾವು ಸಮಗ್ರ ಅಮರತ್ವವನ್ನು ಕೂಡ ಸಾಧಿಸಲು ಸಾಧ್ಯ. ಅಮರತ್ವದ ಆನಂದ ಪಡೆಯಲು ಸಾಧ್ಯ. ಅಸಂಭೂತಿ Unborn ಯನ್ನು ಸ್ಥಾಪಿಸುವ ಕೆಳಸ್ತರದ ಜನ್ಮ ಮತ್ತು ಮೃತ್ಯುವಿನಿಂದ ಪಾರಾಗಲೂ ಸಾಧ್ಯ; ಸಂಭೂತಿಯನ್ನು ವಾಸಿಸುವ ಮೂಲಕ Becomeing ಅಮರತ್ವವನ್ನು, ಅಮರವಾದ ಆನಂದವನ್ನು ಪಡೆಯಲು ಸಾಧ್ಯ; ಈ ವಿಶ್ವದಲ್ಲಿ ಆ ದೈವೀ ಪ್ರಜ್ಞೆಯ ಪ್ರಕಟಣೆಯ ಪ್ರಜ್ಞಾಪೂರ್ಣ ಕೇಂದ್ರವಾಗಿ ಬದಲಾಗಲು ಸಾಧ್ಯ.

(ಸಶೇಷ)

ಶತಮಾನ ಕಂಡ **"ಶಂ.ಬಾ. ಜೋಶಿ"**ಯವರ ಪ್ರಥಮ ಕೃತಿ

# "ಮಹರ್ಷಿ ಶ್ರೀ ಅರವಿಂದ ಘೋಷರ ಸಂಕ್ಷಿಪ್ತ ಚರಿತವು"

4

## ವಂಶ ವೃತ್ತಾಂತ

ಕೇಂಬ್ರಿಜ್ ಕಾಲೇಜಿಗೆ ಸೇರಿ, ತಂದೆಯ ಸಂಕೇತದಂತೆ ಆಯ್.ಸಿ.ಎಸ್. ಪರೀಕ್ಷೆಯ ತಯಾರಿಯನ್ನು ನಡೆಸಿದರು. ಈ ಪರೀಕ್ಷೆಗೆ ಹಿಂದುಸ್ತಾನದ ಯಾವುದಾದರೊಂದು ಭಾಷೆಯ ಜ್ಞಾನವು ಅವಶ್ಯವಿದ್ದುದರಿಂದ, ಇತರ ವಿದ್ಯಾರ್ಥಿಗಳಂತೆ ಅರವಿಂದರು ಬಂಗಾಳಿಯನ್ನು ಕಲಿಯಲಿಕ್ಕೆ ಆರಂಭಿಸಿದರು! ಅರವಿಂದರಿಗೆ ಅಭ್ಯಾಸದ ಹುಚ್ಚು ಬಹಳ. ಕೋಣೆಯಲ್ಲಿ ಏಕಾಕಿಯಾಗಿ ಕುಳಿತು ಅಭ್ಯಾಸದ ಪುಸ್ತಕಗಳನ್ನು ಕಂಠಪಾಠ ಮಾಡುವದು ಇವರ ರೂಢಿಯಾಗಿತ್ತು. ಶರೀರದ ಕಡೆಗೆ ಬಹಳ ದುರ್ಲಕ್ಷ್ಯದ ಸ್ವಭಾವವನ್ನು ಹೊಂದಿದ್ದರು. ಅದರಲ್ಲಿ ತಂದೆಯ ಉದಾರತನದ ಕಾರಣದಿಂದಾಗಿ ಆತನಿಗೆ ಮಕ್ಕಳ ಅಭ್ಯಾಸಕ್ಕಾಗಿ ಹೊತ್ತುಹೊತ್ತಿಗೆ ಹಣ ಕಳಿಸುವದಕ್ಕೂ ಆಗುತ್ತಿರಲಿಲ್ಲ! ಇದರಿಂದ ಆಗಾಗ್ಗೆ ಉಪವಾಸದ ಪ್ರಸಂಗಗಳೂ ಬರುತ್ತಿದ್ದವು. ಇಂಗ್ಲಂಡ ದೇಶ, ದುಡ್ಡಿದ್ದವನು ದೊಡ್ಡಪ್ಪ. ಚಿಕ್ಕ ವಯಸ್ಸಿನ ಅರವಿಂದನ ಸ್ಥಿತಿಯು ಎಷ್ಟು ಕಷ್ಟಕರವಾಗಿತ್ತೆಂಬುದನ್ನು ಹೇಳುವದೇ ಕಷ್ಟ. ಮೊದಲೇ ಪರದೇಶ, ಆಪ್ತರಿಲ್ಲ. ಇಷ್ಟರಿಲ್ಲ. ದುಡ್ಡಿನ ಸಂಬಂಧದಿಂದಲಾದರೂ ಜನರ ಸಹಾಯ ಸಿಕ್ಕೀತೆನ್ನಬೇಕೆ, ಹಾಗೆ ಸಹ ಇಲ್ಲ. ಅಂದ ಮೇಲೆ ಈ ಚಿಕ್ಕ ಮಕ್ಕಳ ಬೊಗಳಿಗೆ (ಆರ್ತನಾದಕ್ಕೆ) ವಾರಾವಾರವೇ (ಪರಿಹಾರವೇ) ಉಳಿಯಲಿಲ್ಲ. ಅರವಿಂದರಲ್ಲಿ ಒಂದು ತರಹದ ವಿಕ್ಷಿಪ್ತತೆಯು ಆರಂಭದಿಂದಲೇ ಇರುವದಂತೆ, ಪುಸ್ತಕದ ಕಡೆಗೆ ಎಷ್ಟೊತ್ತಿನವರೆಗು ನೋಡುತ್ತ ಕುಳಿತರೂ ಅದರಲ್ಲಿ ಏನು ಮಾಡುವೆನೆಂಬುದರ ಕಡೆಗೆ ಲಕ್ಷ್ಯವಿರುತ್ತಿರಲಿಲ್ಲ. ಗಡಿಯಾರ ನೋಡುತ್ತ ನಿಂತರೂ ಸಹಿತ ಎಷ್ಟು ಗಂಟೆಯಾಗಿದೆ ಎನ್ನುವದನ್ನೇ ತಿಳಿದುಕೊಳ್ಳಲು ಮರೆಯುವಂತಾಗಿರುವ ವಿಚಿತ್ರ ಪದ್ಧತಿಯಾಗಿತ್ತು. ಇದರಲ್ಲಿ ಉಪವಾಸ ಬೀಳುವ ಪ್ರಸಂಗಗಳಿಂದ ಶರೀರ ಮತ್ತು ಮನಸ್ಸಿನ ಮೇಲೆ ಆದ ಪರಿಣಾಮಗಳ ಭರತಿ(ಭಾರವೂ) ಬಿದ್ದಿತು.

1890ರಲ್ಲಿ ಆದ ಆಯ್.ಸಿ.ಎಸ್. ಪರೀಕ್ಷೆಗೆ ಶ್ರೀ ಅರವಿಂದರು ಹಾಜರಾದರು. 18ನೇ ವಯಸ್ಸಿನಲ್ಲಿ ಈ ಪರೀಕ್ಷೆಗೆ ಹಾಜರಾದ ಹಿಂದೀ ವಿದ್ಯಾರ್ಥಿಗಳು

ಸಿಕ್ಕುವರೋ ಇಲ್ಲವೋ ಸಂಶಯವೇ ಇದೆ. ಇಷ್ಟು ಚಿಕ್ಕ ವಯಸ್ಸಿನಲ್ಲಿ ಪರೀಕ್ಷೆಗೆ ಕುಳಿತರೂ, ಪ್ರತಿಯೊಂದು ವಿಷಯದಲ್ಲಿ ಅವರಿಗೆ ಉತ್ತಮ ಗುಣಗಳು ದೊರೆತವು. ಅದರೊಳಗೂ ಇತಿಹಾಸ ಮತ್ತು ಗ್ರೀಕ ಭಾಷೆಗಳ ಮೇಲೆ ಇವರ ಪ್ರಭುತ್ವವು ಹೆಚ್ಚಿಗಿತ್ತು. ಗ್ರೀಕ ಭಾಷಾ ವಿಷಯದಲ್ಲಿ ಇವರು ಮೊದಲನೆಯ ಸ್ಥಾನ ಪಡೆದಿದ್ದು, ಬೀಚಕ್ರಾಫ್ಟ ಎನ್ನುವವರು ಎರಡನೇ ಸ್ಥಾನದಲ್ಲಿದ್ದರು. ಈ **“ಬೀಚಕ್ರಾಫ್ಟ”**ರೇ ಮುಂದೆ ನ್ಯಾಯಾಧೀಶರಾಗಿದ್ದ ಅವಧಿಯಲ್ಲಿ ಶ್ರೀ ಅರವಿಂದರಿಗೆ ‘ದೇಶಸೇವೆ’ ಮಾಡಿದ ಘೋರ ಅಪರಾಧಕ್ಕಾಗಿ ಆರೋಪಿಯ ಪಂಜರದಲ್ಲಿ ಶೃಂಖಲಾಬದ್ಧಹಸ್ತರಾಗಿ ನಿಲ್ಲುವ ವೇಳೆ ಬಂತು! ಕಲ್ಪನಾ ಚತುರ ನಾಟಕಕಾರನಿಗೂ ಕಲ್ಪನೆಯಾಗದಂತಹ ಅದ್ಭುತ ದೃಶ್ಯಗಳನ್ನು ಜಗಚ್ಚಾಲಕನು ಭೂಲೋಕದ ರಂಗಭೂಮಿಯ ಮೇಲೆ ತೋರಿಸುತ್ತಿರುತ್ತಾನೆ.

ಆಯ್.ಸಿ.ಎಸ್. ಪರೀಕ್ಷೆಯ ಎಲ್ಲ ಪ್ರಶ್ನೆ ಪತ್ರಿಕೆಗಳು ಮುಗಿದವು. ಅರವಿಂದರು ಎಲ್ಲ ಪ್ರಶ್ನೆಗಳಿಗೂ ಉತ್ತರಗಳನ್ನು ಬರೆದರು. ಈ ಪರೀಕ್ಷೆಯನ್ನು ಪಾಸಾಗಲಿಕ್ಕೆ ಅಶ್ವಾರೋಹಣ ಕಲೆಯ ಜ್ಞಾನವೂ ಅವಶ್ಯವಿದೆ. ಶ್ರಿ ಅರವಿಂದರು ಈ ಅಶ್ವಾರೋಹಣ ಪರೀಕ್ಷೆಯಲ್ಲಿ ಪಾಸಾಗಲಿಲ್ಲವೆಂದು ಕೆಲವರೂ, ತಮ್ಮ ವಿಕ್ಷಿಪ್ತ ಸ್ವಭಾವದಂತೆ ಈ ಪರೀಕ್ಷೆಗೆ ಕೂಡಲಿಲ್ಲವೆಂದು ಕೆಲವರೂ ಅಭಿಪ್ರಾಯ ಪಡುತ್ತಾರೆ. ಒಂದು ವೇಳೆ ಪರೀಕ್ಷೆಗೆ ಕುಳಿತು ನಾಪಾಸಾಗಿದ್ದರೂ ಅರವಿಂದರ ಕೀರ್ತಿಗೆ ಎಳ್ಳಷ್ಟೂ ಧಕ್ಕೆ ಬರುವಂತಿಲ್ಲ. ಶಾರೀರಿಕ ಹಾಗೂ ಮಾನಸಿಕ ಅಸ್ವಾಸ್ಥ್ಯದ ಮೂಲಕ ಅವರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲಿಲ್ಲ; ಎಂಬುದೇ ಬಹು ಜನರ ಮತವಾಗಿದೆ.

ಆಯ್.ಸಿ.ಎಸ್. ಪರೀಕ್ಷೆ ನಾಪಾಸಾದುದು ಒಳಿತಾಯಿತೋ, ಕೆಡುಕಾಯಿತೋ? ಅರವಿಂದರ ಭೌತಿಕ ಐಶ್ವರ್ಯದಲ್ಲಿ ಪಾಲುದಾರರಾಗಿ ಮೋಜು ಮಾಡಲಿಚ್ಛಿಸಿ, ಹೊಂಚು ಹಾಕಿ ಕುಳಿತ ಕೆಲವು ಆಪ್ತ–ಇಷ್ಟರಿಗೆ ಇವರು ನಾಪಾಸಾದುದು ದುಃಖಕರವೆನಿಸಿದರೂ, ಭಾರತೀಯರ ದೃಷ್ಟಿಯಿಂದ ಒಳಿತೇ ಆಯಿತು ಎಂದು ಹೇಳಬಹುದು. ಆಯ್.ಸಿ.ಎಸ್. ಪರೀಕ್ಷೆಯಾದ ಬಳಿಕ ಸ್ವಲ್ಪ ಕಾಲ ವಿಶ್ರಾಂತಿ ತೆಗೆದುಕೊಂಡು, ಮತ್ತೆ ಹೆಚ್ಚಿಗೆ ಅಭ್ಯಾಸ ಮಾಡಲಿಕ್ಕೆ ‘ಕಿಂಗ್ಸ ಕಾಲೇಜು’ ಸೇರಿದರು. ಈ ಅವಧಿಯಲ್ಲಿಯೇ ಅವರ ತಂದೆಯು ದಿವಂಗತನಾದುದರಿಂದ, ಆರ್ಥಿಕ ಪರಿಸ್ಥಿತಿಯೂ ತೀರ ಸಂಕಷ್ಟಕ್ಕೆ ಸಿಲುಕಿತು.

ಆದರೂ ಎದೆಗುಂದದೆ, ಸ್ವಂತ ಕಾಲ ಮೇಲೆ ನಿಂತು ಅಭ್ಯಾಸ ಮಾಡುವದನ್ನು ನಿಶ್ಚಯಿಸಿದರು. ತಮ್ಮ ಬುದ್ಧಿ ಸಾಮರ್ಥ್ಯದಿಂದ ಕೆಲವು ವಿದ್ಯಾರ್ಥಿ ವೇತನಗಳನ್ನು ದೊರಕಿಸಿಕೊಂಡರು. 1892ರಲ್ಲಿ ಕೇಂಬ್ರಿಜ್ ವಿದ್ಯಾಪೀಠದ ಕಡೆಯ ಪರೀಕ್ಷೆಗೆ ಕುಳಿತು ಮೊದಲನೇ ಸ್ಥಾನದಲ್ಲಿ ಪಾಸಾದರು.

## 4. ಪೂರ್ವಾಶ್ರಮ

**'ದ್ವಿತೀಯಂ ಆಯುಷೋ ಭಾಗಂ ಕೃತದಾರೋ ಗೃಹೇ ವಸೇತ್'**

**– ಮನು**

ಶ್ರೀ ಅರವಿಂದರು ಕೇಂಬ್ರಿಜ್ ಕಿಂಗ್ಸ ಕಾಲೇಜಿನಲ್ಲಿ ಕಲಿಯುತ್ತಿದ್ದಾಗ, ಬಡೋದೆಯ ಪ್ರಜಾನುರಂಜಕ ಮಹಾರಾಜರಾದ ಶ್ರೀ ಸಯ್ಯಾಜಿರಾವ್ ಗಾಯಕವಾಡ ಇವರ ಪರಿಚಯವಾಯಿತು. ಶ್ರಿ ಸಯಾಜಿರಾಯರು ಒಳ್ಳೇ ಮನುಷ್ಯ ಪರೀಕ್ಷಕರೆಂದು(ಗುಣಗ್ರಾಹಿಯೆಂದು) ಹೆಸರಾಗಿದ್ದಾರೆ. ಉತ್ತಮೋತ್ತಮ ನರರತ್ನಗಳನ್ನು ಆರಿಸಿ, ಅವುಗಳನ್ನು ತಮ್ಮ ರಾಜ್ಯದಲ್ಲಿ ಉಪಯೋಗಿಸಿಕೊಂಡು ಪ್ರಜಾಸೌಖ್ಯವನ್ನು ವೃದ್ಧಿಂಗತ (ಅಭಿವೃದ್ಧಿ) ಮಾಡುವದರಲ್ಲಿ ಇವರು ತತ್ಪರರಾಗಿರುತ್ತಾರೆ. ಇವರೊಡನೆ ಇಂಗ್ಲಂಡನಲ್ಲಾದ ಅರವಿಂದರ ಪರಿಚಯವು ಸ್ನೇಹದಲ್ಲಿ ಪರಿಣಮಿಸಿತು. ಶ್ರೀ ಸಯಾಜಿರಾವ್ ಗಾಯಕವಾಡರು ಅರವಿಂದ ಬಾಬುಗಳ ಗುಣಗಳಿಗೆ ಲುಬ್ಧರಾಗಿ(ಪ್ರಭಾವಿತರಾಗಿ) ತಮ್ಮ ರಾಜ್ಯದಲ್ಲಿ ಕೆಲಸ ಮಾಡಬೇಕೆಂದು ಇಚ್ಛೆಯನ್ನು ಪ್ರಕಟಿಸಿದರು. ಆಯ್.ಸಿ.ಎಸ್. ಪರೀಕ್ಷೆ ನಾಪಾಸಾದರೂ ಅದರಷ್ಟೆ ಮಾನ್ಯತೆಯುಳ್ಳ ಅಧಿಕಾರವು ಅರವಿಂದರಿಗೆ ಸಿಗುವ ಪ್ರಸಂಗವೂ ಬಂದಿತು. ಅರವಿಂದರಾದರೂ ಮಹಾರಾಜರ ಇಚ್ಛೆಗೆ ಮಾನವಿಟ್ಟು (ಗೌರವಿಸಿ), ಅವರ ಖಾಸಗೀ ಕಾರಭಾರಿಯಾಗಲು ಒಪ್ಪಿದರು.

ಬಡೋದೆಯಲ್ಲಿ ಶ್ರೀ ಅರವಿಂರು 12 ವರ್ಷಗಳವರೆಗೆ ಭಿನ್ನ ಭಿನ್ನ ಹುದ್ದೆಗಳಲ್ಲಿ ಕೆಲಸ ಮಾಡಿದರು. ಎಲ್ಲಕ್ಕೂ ಮುಂಚೆ ಖಾಸಗೀ ಕಾರಭಾರಿಗಳಿದ್ದರು; ಬಳಿಕ ಕೆಲ ದಿನ ಮಹಾರಾಜರ ದಿವಾಣೀ ಆಫೀಸಿನಲ್ಲಿ ಕೆಲಸ ಮಾಡಿದರು, ನಂತರ ಕೆಲವು ಕಾಲದವರೆಗೆ ಬಡೋದೆಯ 'ಸ್ಟೇಟ ಕಾಲೇಜಿನಲ್ಲಿ' ಪ್ರೊಫೆಸರ್ ಆಗಿದ್ದರು. ಇಲ್ಲಿಂದ ಮಹಾರಾಜರ ಪ್ರೈವೇಟ್ ಸೆಕ್ರೆಟರಿ (ಖಾಸಗೀ ಕಾರ್ಯದರ್ಶಿಯಾಗಿ ಸ್ವಲ್ಪ ಕಾಲ ಸೇವೆ ಮಾಡಿದರು. ಕಟ್ಟಕಡೆಗೆ

ಆರಂಭದಲ್ಲಿ ಪ್ರೊಫೆಸರ್ ಆಗಿದ್ದ ವಿದ್ಯಾಲಯದಲ್ಲಿಯೇ 'ವ್ಹಾಯಿಸ ಪ್ರಿನ್ಸಿಪಾಲ್' ಆದರು. "ಮನುಷ್ಯನ ಪರೀಕ್ಷೆ ಮಾಡುವದಿದ್ದರೆ ಆತನಿಗೆ ಅಧಿಕಾರ ಕೊಟ್ಟು ನೋಡು" ಎಂದು ಹಿರಿಯರು ಹೇಳುವದುಂಟು. ಕ್ಷುಲ್ಲಕರಿಗೆ ಅಧಿಕಾರ ಸಿಕ್ಕುತ್ತಲೆ, ಅವರು ಹೆಮ್ಮೆಯಿಂದ ಮೆರೆಯುವದುಂಟು. ಸಜ್ಜನರ ವೃತ್ತಿಯು ಇದಕ್ಕೆ ತೀರ ವಿಪರೀತವಿರುತ್ತದೆ. ಅರವಿಂದರು ಯಾವ ಅಧಿಕಾರದ ಮೇಲೆ ಕೆಲಸ ಮಾಡಿದರೂ ಎಲ್ಲರಿಗೂ ಬೇಕಾದವರಾಗಿದ್ದರು. ವಿದ್ಯಾಲಯದಲ್ಲಿ ಅಧ್ಯಾಪಕರಾಗಿದ್ದಾಗ ವಿದ್ಯಾರ್ಥಿಗಳ ಪಂಚಪ್ರಾಣವಾಗಿದ್ದರು. ಶ್ರೀ ಅರವಿಂದರ ವಿಷಯಕ್ಕೆ ಶಿಷ್ಯ ವರ್ಗದಲ್ಲಿ ಎಷ್ಟು ಪೂಜ್ಯಬುದ್ಧಿ ಇತ್ತು ಎನ್ನುವದು ವ್ಯಕ್ತವಾಗುವ ಪ್ರಸಂಗವು ಮುಂದೆ ಒಮ್ಮೆ ಬಂತು; 1907ರಲ್ಲಿ ಅರವಿಂದರ ಮೇಲೆ ಆದ ಮೊದಲನೆಯ ಖಟ್ಲೆಯ ಕಾಲಕ್ಕೆ, ಬಡೋದೆಯ ವಿದ್ಯಾಲಯದ ವಿದ್ಯಾರ್ಥಿಗಳು ಅಧಿಕಾರಿಗಳ ಬೆದರಿಕೆಗೆ ಭಯಪಡದೇ ಸಭೆ ಕೂಡಿಸಿ, ತಮ್ಮ ಗುರುಗಳ ವಿಷಯಕ್ಕೆ ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿದರು! ಬಡೋದೆಯ ಸಂಸ್ಥಾನದ ಪ್ರಜೆಗಳು ತಮಗೆ ಇಂಥ ಅಧಿಕಾರಿಯು ದೊರೆತ ಬಗೆಗೆ ಅಭಿಮಾನ ಪಡುತ್ತಿದ್ದರು. ಇನ್ನು ಮಹಾರಾಜರ ವಿಷಯಕ್ಕೆ ಕೇಳಿದರೆ, ಅವರು ಅಲ್ಪಾವಧಿಯೊಳಗೇ ಶ್ರೀ ಅರವಿಂದರನ್ನು ದಿವಾನರನ್ನಾಗಿ ಮಾಡತಕ್ಕವರಿದ್ದರಂತೆ! ಸಂಸ್ಥಾನಗಳಲ್ಲಿ ಕೆಲಸ ಮಾಡುವದು ಬಿಗಿಯಾದದ್ದು (ಮಹತ್ತರ ಹೊಣೆಗಾರಿಕೆಯದು), ಯಾಕೆಂದರೆ ಅಧಿಪತಿಗಳ ಮನಸ್ಸಿನ ಲಹರಿಗಳಿಗೆ ಅನುಸರಿಸಿ ಕೈಕೆಳಗಿನವರ ಯೋಗ್ಯತೆಯ ಏರಿಳಿತಗಳಾಗುತ್ತವೆ. ಆದುದರಿಂದ ಸಂಸ್ಥಾನದಲ್ಲಿ ಕೆಲಸ ಮಾಡುವ ಅನೇಕರಿಗೆ ತಮ್ಮ ಪ್ರತಿಷ್ಠೆಯನ್ನು ಬೆಳೆಸಿಕೊಳ್ಳಲಿಕ್ಕೆ, ಲಾಂಗೂಲಚಾಲನಾದಿ (ಹಿಂಬಾಲಕರಾಗುವ) ವಾಮ ಮಾರ್ಗಗಳ ಅವಲಂಬನ ಮಾಡಬೇಕಾಗುವದು, ಇಲ್ಲವೆ ತಮ್ಮ ಮರ್ಯಾದೆಗೆ ಭಂಗ ಬರುವ ಲಕ್ಷಣಗಳು ಕಂಡೊಡನೆ, ಆ ಅಧಿಕಾರಕ್ಕೆ ಒದ್ದು ಹೊರಬೀಳಬೇಕಾಗುತ್ತದೆ. ಶ್ರೀ ಅರವಿಂದರು ಸರಳ ಮಾರ್ಗದಿಂದ ಕೆಲಸ ಮಾಡಿ, ತಮ್ಮ ಕಾರ್ಯಕುಶಲತೆಯಿಂದ ರಾಜ ಪ್ರಜೆಗಳಿಬ್ಬರಿಗೂ ಬೇಕಾಗಿದ್ದರು.

ಶ್ರೀ ಅರವಿಂದರು ಬಡೋದೆಗೆ ಬಂದು 3–4 ವರುಷಗಳಾಗಿದ್ದವು. 24ನೇಯ ವಯಸ್ಸು, ನೂತನ ತಾರುಣ್ಯ, ದೊಡ್ಡ ಸಂಬಳ; ಅಂದ ಮೇಲೆ ಸೃಷ್ಟಿಕ್ರಮದಂತೆ ವಿವಾಹದ ಉತ್ಸುಕತೆಯಾಗುವದು ಸ್ವಾಭಾವಿಕವಿದೆ, ಶ್ರೀ ಅರವಿಂದರಂಥ ಲಕ್ಷ್ಮೀ–ಸರಸ್ವತಿಯರ ವರಕೃಪೆಗೆ ಪಾತ್ರರಾದ ವರಗಳಿಗೆ

ಕನ್ಯಾದಾನ ಮಾಡಲಿಕ್ಕೆ ಒಲ್ಲದ ಕನ್ಯಾಪಿತನಾದರೂ ಯಾರು? ಶ್ರೀ ಅರವಿಂದರ ಅರ್ಧಾಂಗಿಯಾಗುವ ಭಾಗ್ಯವಿದ್ದ ವಂಗಕನ್ಯೆಯ ಪೂರ್ವ ಸುಕೃತವು ದೊಡ್ಡದೇ ಸರಿ. ಬಂಗಾಲದ ಅಗ್ರಿಕಲ್ಚರಲ್ ಖಾತೆಯ ವರಿಷ್ಠ ಅಧಿಕಾರಿಯ ಮಗಳಾದ ಮೃಣಾಲಿನಿ ಎಂಬುವಳು ವಧುವೆಂದು ನಿಶ್ಚಿತವಾಯಿತು. ಆಗ ಮೃಣಾಲಿನಿಗೆ 15 ವರ್ಷ ವಯಸ್ಸು. ಇವಳಿಗೆ ಓದಲು ಬರೆಯಲು ಚೆನ್ನಾಗಿ ಬರುತ್ತಿತ್ತು. ಮಾವನೂ ಶ್ರೀಮಂತನು. ವಿವಾಹವು ಯಥಾಸಾಂಗವಾಗಿ ವಿಜೃಂಭಣೆಯಿಂದ ನಡೆಯಿತು.

ಶ್ರೀ ಅರವಿಂದರು ತಮ್ಮ ಏಳನೇ ವಯಸ್ಸಿನಿಂದಲೇ ಇಂಗ್ಲಂಡಿನಲ್ಲಿ ಇದ್ದವರು; ಹಿಂದೂ ಆಚಾರ–ವಿಚಾರಗಳ ಸಂಪರ್ಕವಾಗಿ ಅವು ನೆಲೆಗೊಳ್ಳುವ ಮುಂಚಿತವಾಗಿಯೇ ಇಂಗ್ಲಂಡದಲ್ಲಿ ವಾಸವಾಗಿದ್ದು, ಆ ಕಾರಣದಿಂದ ಇಂಗ್ಲೀಷ ಪದ್ಧತಿಯ ನಿತ್ಯದ ವ್ಯವಹಾರಗಳೇ ಅರವಿಂದರ ಮೈಯ್ಯುಂಡಿದ್ದವು. (ರೂಢಿಯಾಗಿದ್ದವು) ಧೋತರವನ್ನು ಉಡಲಿಕ್ಕೆ ನಾಚಿಕೆ, ಬರಿಗಾಲಿನಿಂದ ನಡೆಯಲಿಕ್ಕೆ ಹೇಸಿಕೆ, ಹೀಗೆ ಅವರು ಹಿಂದುಸ್ತಾನದ ಆಚಾರವಿಚಾರಗಳೆಲ್ಲದರಿಂದಲೂ ದೂರವಾಗಿದ್ದರು. ಬಂಗಾಲಿಯ ಜ್ಞಾನವು ಅಗಾಧವಾಗಿತ್ತೆಂಬುದು ಹಿಂದೆ ಹೇಳಿದೆ. ಸಂಸ್ಕೃತದ ಪರಿಚಯವೂ ಅದರಂತೆಯೇ ಇತ್ತು. ನಾಸ್ತಿಕತನವು ರೋಮರೋಮಗಳಲ್ಲಿ ತುಂಬಿಕೊಂಡಿತ್ತು. ಆರ್ಯ ಸಂಸ್ಕೃತಿಯ ವಿಚಿತ್ರ ಆಚಾರಗಳನ್ನು ಕಂಡು ನಗೆ ಬರುತ್ತಿತ್ತು. ಆತ್ಮಾನಾತ್ಮ ವಿಚಾರವೆಂದರೆ ಅದೊಂದು ಹುಚ್ಚರು ಮಾಡಿದ ಮೂರ್ಖತನದ ಪ್ರದರ್ಶನವೆಂದು ಅವರ ಗ್ರಹಿಕೆಯಾಗಿತ್ತು.

ಸುದೈವದಿಂದ ಶ್ರೀ ಅರವಿಂದರ ಈ ಸಂಶಯವು ಬಹಳ ದಿನ ಉಳಿಯಲಿಲ್ಲ. ಆತ್ಮಸೂರ್ಯನ ಅರುಣೋದಯವು ಹೃದಯಾಕಾಶದಲ್ಲಿ ಕ್ರಮವಾಗಿ ಆಗಹತ್ತಿತು. ಪಾಶ್ಚಾತ್ಯ ದೃಷ್ಟಿಯಿಂದ ವಿಚಾರಿಸಿ ಏನೋ ಗೊತ್ತು ಮಾಡಿಟ್ಟುಕೊಂಡ ಸಿದ್ಧಾಂತಗಳು ಅನುಭವದ ವರೆಗಲ್ಲಿಗೆ ಹತ್ತದಾದವು. ಅವುಗಳಲ್ಲಿ ಹುರುಳಿಲ್ಲವೆಂದು ಸ್ವಲ್ಪ ಸ್ವಲ್ಪ ಅನುಭವಕ್ಕೆ ಬರತೊಡಗಿತು. ಮನುಷ್ಯನ ಮನಸ್ಸು ತಿರುಗಿಸಲಿಕ್ಕೆ ಕ್ಷುಲ್ಲಕ ಕಾರಣಗಳೂ ಸಾಕಾಗುತ್ತವೆ. ಕೆಲವರಿಗೆ ಪ್ರಿಯಜನರ ವಿರಹದಿಂದ ಉಪರತಿ(ವೈರಾಗ್ಯ)ವಾಗುವದು; ಬೇರೆ ಕೆಲವರಿಗೆ ಇಚ್ಛಿತ ಸಾಧ್ಯವಾಗದಿದ್ದರೆ ಮನಸ್ಸು ತಿರುಗುವದು(ಪರಿವರ್ತನಗೊಳ್ಳುವದು). ಇನ್ನು ಕೆಲವರಿಗೆ ಧನ ನಾಶದಿಂಧ ವೈರಾಗ್ಯವು ಬರುವದು. ಆಯುಷ್ಯದಲ್ಲಿ

ಪ್ರತಿಯೊಬ್ಬನಿಗೂ ವೈರಾಗ್ಯಪರವಾಗಿರುವ ವಿಚಾರಗಳು ಒಂದೆರಡು ಸಾರೆಯಾದರೂ ಬಂದು ಭೆಟ್ಟಿಯಾಗದೇ ಹೋಗುವದಿಲ್ಲ. ಸ್ಮಶಾನ ವೈರಾಗ್ಯ ಪ್ರಸೂತಿ ವೈರಾಗ್ಯಾದಿ ಒಂದಿಲ್ಲೊಂದು ಪ್ರಕಾರದ ವಿರಾಗವು ಮನುಷ್ಯನ ಮೇಲೆ ಒಂದೆರಡು ತಾಸು, ಕನಿಷ್ಠ ಒಂದೆರಡು ಮಿನಿಟ್‌ಗಳವರೆಗಾದರೂ ತನ್ನ ಅಮಲು (ಅಧಿಕಾರ) ನಡಿಸದೇ ಬಿಡುವದಿಲ್ಲ. ಆದರೆ ಬಂದ ಪ್ರಸಂಗದಿಂದ ಬುದ್ಧಿ ಕಲಿತು ವರ್ತನವನ್ನು ಸುಧಾರಿಸುವ ದೃಢ ನಿಶ್ಚಯಿಗಳಾದ ಪುಣ್ಯಾತ್ಮರೇ ವಿರಳ. ನಾಯಿಯ ಬಾಲದಂತಹ ವೃತ್ತಿಯ ಜನರೆ ಎಲ್ಲ ಕಡೆಯಲ್ಲಿ ಹರಡಿಕೊಂಡಿರುವರು. ಅಜ್ಞಾನವಸ್ಥೆಯಲ್ಲಿ ಅಜ್ಞಾನಜನ್ಯ ಅಪಕೃತಿಗಳು ಬೇಕಾದಷ್ಟಾಗಿದ್ದರೂ ಬೋಧವಾದ ಬಳಿಕ ಸಹ ಮೊದಲಿನಂತೆ ಅಧಮ ಮಾರ್ಗದಿಂದ ವರ್ತಿಸುವದೆಂದರೆ ತೀರ ನಿರ್ಲಜ್ಜತನದ ಮಾತು ಆಗುತ್ತದೆ. ಶ್ರೀ ತುಲಸೀದಾಸರಿಗೆ ಪತ್ನಿಯ ಎರಡು ನಿಷ್ಠುರ ವಚನಗಳು ಸನ್ಮಾರ್ಗಕ್ಕೆ ಹಚ್ಚಿದವು. ಶ್ರೀ ಪುರಂದರದಾಸರಿಗೆ ಪತ್ನಿಯ ನತ್ತು(ಮೂಗುತಿ) ಎಚ್ಚರದ ಮೇಲೆ ತಂದಿತು ಜಾಣನಿಗೆ ಮಾತಿನ ಪೆಟ್ಟು ಸಾಕು. ಕೋಣನಿಗೆ ಏತರಿಂದ ಹೊಡೆದರೂ ಅಷ್ಟೇ; ಯಾತರಿಂದ ಏನು ಆಗಬೇಕಾಗಿದೆ? ಖಟ್ಲೆ ಮೇಲೆ ಖಟ್ಲೆಗಳು ಮೈಮೇಲೆ ಬರಲಿ, ನಾಲ್ಕು ಏಟು ಥಳಿಸಿಕೊಳ್ಳಲಿ, ದೇಶಬಾಂಧವರು ಅಧಿಕಾರಿಗಳ ಗುಂಡಿಗೆ ಈಡಾಗಲಿ, ಬೇಕಾದುದು ಆಗಲಿ, ತನ್ನ ಮಾರ್ಗವಾದ ಸುಖಂಚಮೇ, ಶಯನಂಚಮೆಗೆ ತಪ್ಪುವಂತಿಲ್ಲ. ಧಿಕ್ಕಾರವಿರಲಿ, ಈ ಜನರಿಗೆ! ಶ್ರೀ ಅರವಿಂದರು ಬಡೋದೆಯಲ್ಲಿ ಹನ್ನೆರಡು ವರುಷ ಕೆಲಸದ ಮೇಲಿದ್ದರು, ಕೆಲದಿನ ವಿಲಾಸದಲ್ಲಿಯೇ ಕಳೆದರು; ಹಾಗೆ ಮುಂದೆಯೂ ಕಳೆಯಬೇಕೆಂದು ಯೋಚಿಸಿದ್ದಾರು; ಆದರೆ ಅವರ ಸದಸದ್ವಿವೇಕ ಬುದ್ಧಿಯು ಅವರಿಗೆ ಹಾಗೆ ಮಾಡಗೊಡಲಿಲ್ಲ.

ಸದಸದ್ವಿವೇಕ ಬುದ್ಧಿಯು ಇದ್ದುದರಿಂದಲೇ ಈ ಜಗತ್ತಿನಲ್ಲಿ ಸ್ವಲ್ಪ ಅಂಶದಿಂದ ನ್ಯಾಯವು ಇನ್ನೂ ಉಳಿದಿದೆ ಮತ್ತು ಮುಂದೆ ಹೆಚ್ಚಾಗುವ ಆಶೆಯೂ ಇದೆ. ಮನುಷ್ಯನಲ್ಲಿ ಇದು ಜಾಗ್ರತವಾಯಿತೆಂದರೆ ಆತನಿಕೆ ಕೂಳು–ನೀರುಗಳನ್ನು ಸಹ ಸವಿ ಹಚ್ಚಗೊಡುವದಿಲ್ಲ (ರುಚಿಸುವದಿಲ್ಲ). ಸ್ವೈರವೃತ್ತಿಯ ಜನರಿಗೆ ಸದಸದ್ವಿವೇಕವು ಒಂದು ಬಲವಾದ ಶತ್ರುವಾಗಿದೆ. ಈ ಜನರು ಇತರ ಪ್ರತಿಪಕ್ಷಿಗಳನ್ನು (ಎದುರಾಳಿಗಳನ್ನು) ವಾದದಲ್ಲಿ ಗೆದೆಯುವರು; ಸಂಪತ್ತಿನಿಂದ ತಣ್ಣಗೇ ಕೂಡ್ರಿಸುವರು; ಕೊಲೆಗಡುಕರಿಂದ ಪರಲೋಕಕ್ಕೆ ಕಳಿಸುವರು; ವೈರಿಯು ಎಷ್ಟು ಸಮೀಪದ ಆಪ್ತನಾಗಿರಲೊಲ್ಲನೇಕೆ, ಆತನನ್ನು ಇಲ್ಲದಂತೆ ಮಾಡಲಿಕ್ಕೆ ಈ

ಜನರು ಹಿಂದೆ ಮುಂದೆ ನೋಡುವದಿಲ್ಲ. ಆದರೆ ಪ್ರತ್ಯಕ್ಷ ಅವರ ಅಂತಃಕರಣದ ಮೂಲೆಯಲ್ಲಿ ಅಡಗಿಕೊಂಡು, ಹೊತ್ತು ಹೊತ್ತಿನಲ್ಲಿ ತಾಪಕೊಡುವ ಸದಸದ್ವಿವೇಕವನ್ನು ನಾಶ ಮಾಡುವದು ಅವರಿಗೆ ಅಸಾಧ್ಯವಾಗುತ್ತದೆ. ಧಾರ್ಮಿಕ ಗ್ರಂಥಗಳ ಅಥವಾ ರಾಷ್ಟ್ರಧರ್ಮಗಳ ವಾಚನ, ಶ್ರವಣ, ಮನನಗಳಿಂದ ಜಾಗ್ರತವಾದ ವಿವೇಕ ಬುದ್ಧಿಯು ಪೀಡಿಸಹತ್ತುತ್ತದೆ. ಆಗ ಈ ಜನರು ಅದಕ್ಕೆ ಏನಾದರೂ ಹೇಳಿ ಸಮಾಧಾನ ಮಾಡಲೆತ್ನಿಸುವರು.

ಶ್ರೀ ಅರವಿಂದರು ಬಡೋದೆಯಲ್ಲಿ ಇರುವಾಗಲೇ, ದೇಶದಲ್ಲಿ ಹಲವು ತರದ ಚಳವಳಿಗಳಿಗೆ ಆರಂಭವಾಗಿತ್ತು. ಅಧಿಕಾರಿಗಳ ಕಾಟಕ್ಕೆ ಜನರು ಬೇಸತ್ತಿದ್ದರು. (ಹೆಚ್ಚಿನ ವರ್ಣನೆ ಮುಂದಿನ ಪ್ರಕರಣದಲ್ಲಿದೆ). ಇದನ್ನು ಕಂಡು ಶ್ರೀ ಅರವಿಂದರಿಗೆ ಸಮಾಧಾನವೆನಿಸಲಿಲ್ಲ. ಅವರಿಗೆ ಬಡೋದೆಯ ಬಡೇಜಾವಿಲ್ಲಿ ಕಾಲ ಕಳೆಯುವದು ಸೇರದಾಯಿತು. ವೃತ್ತಪತ್ರ(ಸುದ್ದಿ ಪತ್ರಿಕೆ)ಕ್ಕೆ ಅವರು ಮುಂಚೆ ಲೇಖನಗಳನ್ನು ಬರೆಯುತ್ತಿದ್ದರು. ಆದರೆ ಯಾವಾಗಲಾದರೂ ಒಮ್ಮೆ ನಾಲ್ಕಕ್ಷರಗಳನ್ನು ಗೀಚಿ ದೇಶ ಸೇವೆಯನ್ನು ಮಾಡಿದೆನೆಂದು ಸಮಾಧಾನವನ್ನು ಹಚ್ಚಿಕೊಳ್ಳಲಿಕ್ಕೆ ಅವರಿಗೆ ಬೇಕಾದಷ್ಟು ಅವಕಾಶವಿತ್ತು. ದೊಡ್ಡ ಅಧಿಕಾರವಿದ್ದುದರಿಂದ ಕೈಕೆಳಗಿನ ಜನರ ಮೇಲೆ ಉಪಕಾರ ಮಾಡಿದರೆ ದೇಶಸೇವೆಯಾಯಿತೆಂದು ತಿಳಿಯಲಿಕ್ಕೆ ಬರುವಂತಿತ್ತು; ಆದರೆ ಈ ಯಾವುದಕ್ಕೂ ಅವರ ಮನಸ್ಸು ಕೇಳಲಿಲ್ಲ. ಹಗಲು ಹನ್ನೆರಡು ತಾಸು ದುಡಿದು ಮತ್ತೆ ಶಿಲ್ಕು(ಬಾಕಿ) ಇದ್ದರೆ ಮನೆಗೇ ದಪ್ತರು(ಫೈಲುಗಳನ್ನು) ತಂದು ಹಗಲಿರುಳೂ ದುಡಿಯುವಂತಹ ಹಾಗೂ ಆಫೀಸನ ಕೆಲಸವಾದ ಬಳಿಕ ಕ್ರಿಕೆಟ್ಟಾದಿ ವಿಲಾಸಗಳಿಗಾಗಿ ಉಳಿದ ತಾಸರ್ಧ– ತಾಸು ಯಾವುದಾದರೊಂದು ಸಭೆಯ ಅಧ್ಯಕ್ಷ ಸ್ಥಾನವನ್ನು ವಹಿಸಿ ದೇಶ ಸೇವೆಯನ್ನು ಮಾಡುತ್ತೇವೆಂದು ತಿಳಿಯುವ ದೇ.ಭಗಳು(ದೇಶಭಕ್ತರುಗಳು) ಶ್ರೀ ಅರವಿಂದರ ಚರಿತ್ರವನ್ನು ಓದಬೇಕಾಗಿದೆ.

1905ನೇ ಇಸವಿಯ ಜುಲೈ ತಿಂಗಳು. ಈ ಕಾಲಕ್ಕೆ ಶ್ರೀ ಅರವಿಂದರು ಬಡೋದೆಯಲ್ಲಿ ವ್ಹಾಯಿಸ್ ಪ್ರಿನ್ಸಿಪಾಲ್ ಆಗಿದ್ದರು. ತಿಂಗಳಿಗೆ 750 ರೂಪಾಯಿಗಳ ಸಂಬಳ; ಸುಂದರಳೂ, ಸುಶೀಲಳೂ, ವಿದ್ಯಾವತಿಯೂ ಆದ ತರುಣ ಪತ್ನಿ, ಅಲ್ಲದೇ ಅರವಿಂದರ ವಯಸ್ಸಾದರೋ ಸದಾ ವಿಲಾಸಕ್ಕೆ ಉತ್ತೇಜನವನ್ನೀಯುವಂತಹ ಸಮಯದ್ದು, ಅಷ್ಟೇ ಅಲ್ಲ, ಮಹಾರಾಜರ ಪೂರ್ಣ

ಕೃಪೆಗೆ ಪಾತ್ರರಾದಂಥ ವ್ಯಕ್ತಿ; ಮುಂದಿನ ದಿನಗಳಲ್ಲಿ ದಿವಾನರಾಗತಕ್ಕವರು; ಇಂತಹ ಸುಖ ಪರಂಪರೆಗಳು ಅರವಿಂದರನ್ನು ಮೋಹಿಸಲಿಕ್ಕೆ ಮೇಲಾಟವನ್ನು ನಡೆಸಿದ್ದವು. ತನ್ನ ದೇಶಬಾಂಧವರ ದುಃಖಗಳನ್ನು ಕಂಡು ಕರಗಿದ ಶ್ರೀ ಅರವಿಂದರ ಮನಸ್ಸು ಮೋಹ ಜಾಲದಲ್ಲಿ ಸಿಲುಕಿಕೊಳ್ಳಲಿಲ್ಲ; ಬಡೋದೆಯೊಳಗಿನ ಐಷಾರಾಮಿಯಾಗಿರುವ ಸ್ಥಿತಿಯು ದುಃಖಕರವೆನಿಸಹತ್ತಿತು! ಸುಖದಾಯಕ ವಸ್ತುಗಳಿಂದ ದುಃಖವುಂಟಾಗಹತ್ತಿತು. ಎಂಥ ವಿಚಿತ್ರ ಸ್ಥಿತಿ ಇದು! ಸಾಮಾನ್ಯರಿಗೆ ಸುಖಕರವೆನಿಸಬಹುದಾದ ಸಂಗತಿಗಳು ಅರವಿಂದರಿಗೆ ದುಃಖದಾಯಕವಾದವು. ಸಾಮಾನ್ಯರು ನಿದ್ರಿತರಾಗಿರುವ ವಿಷಯದಲ್ಲಿ ಅಸಾಮಾನ್ಯರು ಜಾಗ್ರತರಾಗಿರುತ್ತಾರೆ. ಅಸಾಮಾನ್ಯರು ದುರ್ಲಕ್ಷಿಸುವ ವಿಷಯದಲ್ಲಿ ಸಾಮಾನ್ಯರು ಎಚ್ಚರ ತಕ್ಕೊಳ್ಳುತ್ತಿರುತ್ತಾರೆ. ಶ್ರೀ ಅರವಿಂದರಾದರು ಯಾವ ಮೋಹ ಪಾಶಕ್ಕೂ ಒಳಗಾಗದೆ, ಅವರು ದಿನೇ ದಿನೇ ಹೆಚ್ಚುತ್ತಿರುವ ಮಾತೃಭೂಮಿಯ ದುರ್ದೆಶೆಯನ್ನು ಕಂಡು, ಕರಗಿದ ಅಂತಃಕರಣದವರಾಗಿ ತಮ್ಮ ಅಧಿಕಾರವನ್ನು ಒದ್ದು, 750 ರೂಪಾಯಿ ಪಗಾರಕ್ಕೂ, ಪರಂಪರೆಯಿಂದ ಪ್ರಾಪ್ತವಾಗುವ ನಾನಾ ಸುಖಗಳಿಗೆ ತಿಲಾಂಜಲಿಯನ್ನಿತ್ತು, ದೇಶ ಸೇವೆಗೆ ಟೊಂಕ ಕಟ್ಟಿದರು. ಸದಸದ್ವಿವೇಕ ಬುದ್ಧಿಯು ನಿರ್ದೇಶಿಸಿದ ಮಾರ್ಗವನ್ನು ಅವಲಂಬಿಸಿದರು. ಪ್ರೇಯ ಮಾರ್ಗವನ್ನು ಬಿಟ್ಟು ಶ್ರೇಯ ಮಾರ್ಗವನ್ನು ಹಿಡಿದರು. ದೇಶ ಸೇವೆಯ ಅಸಿಧಾರಾವ್ರತವನ್ನು ಅಂಗೀಕರಿಸಿದರು. ಅಂತಃಕರಣವು ಇಷ್ಟೊಂದು ಕಸಿವಿಸಿಗೊಂಡದ್ದರಿಂದ ಶ್ರೀ ಅರವಿಂದರು ದೇಶ ಸೇವೆಗೆ ತಮ್ಮನ್ನು ಅರ್ಪಿಸಿಕೊಂಡರಲ್ಲದೆ ಕೇವಲ ಲಬ್ಧಪ್ರತಿಷ್ಠಿತರಾಗಬೇಕೆಂದಲ್ಲ. ಕೀರ್ತಿಯ ಅಪೇಕ್ಷೆಯಿಂದ ದೇಶ ಸೇವಕರಾಗಲು ಇಚ್ಛಿಸುವವರ ಕೈಯಿಂದ ದೇಶ ಸೇವೆಯೇ ಆಗುವದಿಲ್ಲ. ಸಾಧ್ಯವು, ಕೀರ್ತಿಯಲ್ಲ, ದೇಶ ಸೇವೆ; ಆಗ ಕೀರ್ತಿಯು ಹಿಂಬಾಲಿಸಿಕೊಂಡು ಬರುವ ನೆರಳಿನಂತೆ ಇರುತ್ತದೆ. ಸೂರ್ಯನ ಕಡೆಗೆ ಮೋರೆ ಮಾಡಿ ನಡೆದರೆ ನೆರಳು ಹೇಗೆ ತಾನೇ ಬೆನ್ನು ಹತ್ತದೇ ಬಿಟ್ಟೀತು?

[ಸಶೇಷ]

# ಶ್ರೀ ಅರವಿಂದರ
# ‘ಭವಿಷ್ಯ ಕಾವ್ಯ’

**– ಅನು: ಪುಟ್ಟು ಕುಲಕರ್ಣಿ**

**ಪ್ರವೇಶಿಕೆ**

ಈ ಪುಸ್ತದ ಕನ್ನಡದ ಅವತರಣಿಕೆಯನ್ನು ಮೊದಲ ಬಾರಿ ಶ್ರೀ ಗೌರೀಶ ಕಾಯ್ಕಿಣಿ ಗೋಕರ್ಣ ರೂಪಿಸಿದ್ದಾರೆ. ಆದರೆ ಬಹಳ ಕಾಲ ಮುದ್ರಣ ಭಾಗ್ಯ ಕಾಣದೇ ಉಳಿದಿತ್ತು. ಕೊನೆಗೆ ಅವರ 86ನೇ ವರ್ಷದ ಅವಧಿಗೆ ಅಂದರೆ 1998ರಲ್ಲಿ ಬೆಂಗಳೂರಿನ ಮೀರಾಂಬಿಕಾ ಮುದ್ರಣಾಲಯದ ಮೂಲಕ ಮುದ್ರಿತವಾಗಿ, ಪಾಂಡಿಚೇರಿ ಶ್ರೀ ಅರವಿಂದಾಶ್ರಮದಿಂದ ಪ್ರಕಾಶನಗೊಂಡಿದೆ. ತದನಂತರದಲ್ಲಿ ಪ್ರತಿಗಳೂ ಲಭ್ಯವಿರಲಿಲ್ಲ. ಪಾಂಡಿಚೇರಿ ಆಶ್ರಮದ ಶ್ರೀ ಎಂ.ಪಿ. ಪಂಡಿತರು ಸಹಿತ ಈ ಕನ್ನಡದ ‘ಭವಿಷ್ಯ ಕಾವ್ಯ’ಕ್ಕೆ ಸಹಕಾರ ಕೊಟ್ಟಿದ್ದರು. ಆದರೆ ಪಾಂಡಿಚೇರಿಯಲ್ಲಿ ಕನ್ನಡದ ಮುದ್ರಣದ ವ್ಯವಸ್ಥೆ ಆಗ ಇರಲಿಲ್ಲವಾದ್ದರಿಂದ, ಪ್ರಕಾಶನಗೊಳ್ಳಲು ಮತ್ತೂ ತಡವಾಯಿತು. ಡಾ॥ ಮಂಗೇಶ ನಾಡಕರ್ಣಿಯವರ ಪ್ರಯತ್ನದಿಂದ ಈ ಕೃತಿ ಮುದ್ರಣ ಹಂತವನ್ನು ಕಾಣುವಂತಾಯಿತು. ಶ್ರೀ ಕಾಯ್ಕಿಣಿಯವರೇ ತಮ್ಮ ಮಾತಿನಲ್ಲಿ, “ಶ್ರೀ ಅರವಿಂದರ ‘ಭವಿಷ್ಯ ಕಾವ್ಯ’ದ ಸಮ್ಮಿಶ್ರ ವಾಕ್ಯಗಳನ್ನು ಮತ್ತೂ ವಿಶದವಾಗಿ ವಿವರಿಸಲು ನೂರಾರು ಪುಟಗಳೇ ಬೇಕಾಗುತ್ತವೆ” ಎಂದಿದ್ದಾರೆ.

ಭಾರತೀಯ ಸಾಹಿತ್ಯ ಪ್ರಪಂಚದಲ್ಲಿ ಶ್ರೀ ಅರವಿಂದರ ‘ಸಾವಿತ್ರಿ’, ‘ದಿವ್ಯ ಜೀವನ’, ‘ಭವಿಷ್ಯ ಕಾವ್ಯ’ ಮತ್ತು ‘ವೇದದ ರಹಸ್ಯ’ಗಳು ಎಂದರೆ ಆಧುನಿಕ ವೇದಗಳಿದ್ದಂತೆ. ಆಯಾ ಸಂದರ್ಭಕ್ಕೆ ಆಯಾ ಭಾಷಾ ಸ್ವರೂಪದಲಿ ಆಯಾಮ ಪಡೆದುಕೊಳ್ಳುತ್ತವೆ. ಈ ಹಿನ್ನೆಲೆಯಲ್ಲಿ, “ಶ್ರೀ ಅರವಿಂದರ 150ನೇ ಜನ್ಮ ದಿನಾಚರಣೆ”ಯ ವರ್ಷದ ಅಪೂರ್ವ ಸಂದರ್ಭದಲ್ಲಿ, ಇಂತಹ ಕೃತಿಗಳನ್ನು ಕನ್ನಡ ಭಾಷೆಯಲ್ಲಿಯೂ ಲಭ್ಯಗೊಳಿಸುವದು ‘ಅಖಿಲ ಭಾರತ ಪತ್ರಿಕೆ’ಯ ಅಭೀಪ್ಸೆಯಾಗಿದೆ.

* * *

## ಭವಿಷ್ಯ ಕಾವ್ಯ

## ಅಧ್ಯಾಯ 1

## ಮಂತ್ರ[1]

### 1. ಮಾತು ಮಂತ್ರವಾಗಬೇಕು

ಸಾಹಿತ್ಯಿಕ ವಿಮರ್ಶಾ ವಲಯದಲ್ಲಿ, ಅದೂ ಭಾರತದಲ್ಲಿ, ಏಕಕಾಲಕ್ಕೇ **ವಿಚಕ್ಷಣಾತ್ಮಕವಾಗಿಯೂ** ಮತ್ತು ಪರಾಮರ್ಶೆಯುಕ್ತ ಇಂಗಿತಪೂರ್ಣವಾಗಿ ರೂಪಿಸಲ್ಪಟ್ಟು, ನಮ್ಮನ್ನು ಓದಲಿಕ್ಕೆ, ಅನುಸಂಧಾನಿಸಲಿಕ್ಕೆ ಮತ್ತು ಚಿಂತನಾಶೀಲರನ್ನಾಗಿಸುವ ಶ್ರೇಷ್ಠ ಮಾದರಿಯ ವಿಮರ್ಶಾ ಕೃತಿಗಳು ಅಪರೂಪದಲ್ಲಿ ಕಾಣುತ್ತವೆ. ನಾನು ತೀರ ಇತ್ತೀಚೆಗೆ ಒಂದಕ್ಕಿಂತ ಹೆಚ್ಚು ಬಾರಿ ಓದಿದ, ಮತ್ತು ಪುನರಾವರ್ತಿತವಾಗಿ ಓದಿದಾಗಲೂ ಸಹಿತ ಅಲ್ಲಿ ಅನಂತಾನಂತ ಆನಂದವನ್ನು ಮತ್ತು **ಅನುಭೂತಿಯನ್ನು** ಒದಗಿಸಿದ ಕೃತಿ ಎಂದರೆ **ಮಿ.ಜೇಮ್ಸ್ ಕಜಿನ್**[2] ನಿರೂಪಿಸಿರುವ **"ಆಂಗ್ಲ ಸಾಹಿತ್ಯದಲ್ಲಿ ನೂತನ ಪಥಗಳು"** [**New Ways in English Litreature**][3]. ಇದು ಮೇಲ್ಕಂಡ ಮಾದರಿಯ ಅನನ್ಯ ಕೃತಿಯಾಗಿದೆ. ಇದು ಚಿಂತನವನ್ನು ಅರಳಿಸುತ್ತಿದ್ದು, ಲೇಖಕನು ನಿರ್ದಿಷ್ಟವಾಗಿಯೇ ಛಂದೋಬಂಧಗೊಳಿಸಿ ಓದುಗನನ್ನು ವಿಷಯದ **ಅತೀತಕ್ಕೆ** ಕರೆದೊಯ್ದು, ಜೊತೆಜೊತೆಗೆ ನಮ್ಮೆದುರು ಆಗಮಿಸಲಿರುವ ಯುಗದಲ್ಲಿ "ಭವಿಷ್ಯದಲ್ಲಿ ಬರಲಿರುವ ಕಾವ್ಯ"ದ ಬಗೆಗಿನ ಪ್ರಶ್ನೆಗಳಿಗೆಲ್ಲ ಉತ್ತರವನ್ನು ರೂಪಿಸಿರುವ ಸ್ವರೂಪದಲ್ಲಿದೆ. ಅಲ್ಲಿ ಉದ್ಭವಗೊಳ್ಳಲಿರುವ ಅಥವಾ ರೂಪಣೆಗೊಳ್ಳಲೇಬೇಕಾದ **"ಉನ್ನತೀಕರಣಗೊಳಿಸಲೇಬೇಕಾಗಿರುವ"** ಕಾರ್ಯಚಟುವಟಿಕೆಗಳ ಮೂಲಕ, ಮತ್ತು ಆ ರೂಪಣೆಯನ್ನು ಸದಾ **"ಮುಕ್ತ ಸ್ವರೂಪದಲ್ಲಿ"**ಯೇ ಇರಿಸಿಕೊಳ್ಳುವ ಕುರಿತಾಗಿ – ಈ ಕ್ರಿಯೆಯು ಇಲ್ಲಿಯವರೆಗೂ ಅಸಂಪೂರ್ಣ ಸ್ವರೂಪದಲ್ಲಿಯೇ ಪಾಲಿತಗೊಂಡಿದೆ – ಜೊತೆಗೆ **ಆಂಗ್ಲ ಸಾಹಿತ್ಯ ಒಂದು ಬದಿಗೆ ಹಾಗೂ ಭಾರತೀಯ ಮನಸ್ಸು ಮತ್ತು ಮನೋಧರ್ಮ (ಪ್ರಕೃತಿಸಹಜ ಸ್ವಭಾವ) ಇನ್ನೊಂದೆಡೆಗೆ,** ಹೀಗೆ ಈ ಎರಡು ಅಂಶಗಳು ಇಲ್ಲಿ ಈ ನೂತನ ಪ್ರವೃತ್ತಿಯನ್ನು ರೂಪಿಸುತ್ತಿವೆ. ಈ ಲೇಖಕನು (ಕಜಿನ್ಸ) ಮೂಲತಃ ಕವಿ, ಲೇಖಕ. ಅದರಲ್ಲೂ ಐರಿಷ ಗತಿವಿಧಿಯ (ಚಳವಳಿಯ) ಹಿನ್ನೆಲೆಯಲ್ಲಿರುವ ಇಬ್ಬರು ಶ್ರೇಷ್ಠ ಲೇಖಕರಲ್ಲಿ ಓರ್ವರಾಗಿದ್ದು

ಅತ್ಯಂತ ಮಹತ್ವದ ಸ್ಥಾನದಲ್ಲಿಯೇ ಗೌರವಿಸಲ್ಪಡುತ್ತಿದ್ದಾರೆ. ಪ್ರಸ್ತುತ ಈ ಗ್ರಂಥದ ಪುಟಪುಟದಲ್ಲಿಯೂ ತುಂಬಿರುವ, ಜೀವಂತಿಕೆಯಿಂದ ಕೂಡಿರುವ ಅಭಿವ್ಯಕ್ತಿಯ ವಿನ್ಯಾಸದಿಂದಾಗಿ ಆಕರ್ಷಿಸುತ್ತಿರುವುದಷ್ಟೇ ಅಲ್ಲದೇ **ಸಂತೃಪ್ತಿಯನ್ನೂ(ಆತ್ಮತೃಪ್ತಿ)**[4] ರೂಪಿಸುತ್ತಿದೆ. ತನ್ನದೇ ಅಸ್ಮಿತೆಯಿಂದ ಕೂಡಿ ಪರಿಪೂರ್ಣತೆಯ ವಿಧಾನದಿಂದ, ಕಮನೀಯ ಸ್ಪರ್ಶಗುಣದಿಂದ, ಅದರದೇ ಆದ ಉತ್ಕೃಷ್ಟತೆಯಿಂದ, ಗಂಭೀರ ಅವಲೋಕನೆಯಿಂದ ಹಾಗೂ ಅಂತರ್ದೃಷ್ಟಿಕೋನದ ವಿಶಿಷ್ಟತೆಯಿಂದ, ಸಂವೇದನಾಪೂರ್ಣ ಸಹಾನುಭೂತಿಯಿಂದ ಹಾಗೂ **ಗುಣದೋಷ ವಿವೇಚನಾ ಸ್ವರೂಪ**ದಿಂದ ಪ್ರಕಾಶಿಸುತ್ತದೆ.

## 2. ಪ್ರಶಿಕ್ಷಿತ ಮನಸ್ಸಿಗೆ ಕೇವಲ ಸಲಹೆ ಸಾಲದು[5]

ಈ ರೀತಿಯಾಗಿ ಗುಣವಿಶೇಷಗಳನ್ನು ಹೊಂದಿರುವ ಉದ್ದೇಶಗಳನ್ನು ಆಧಾರವಾಗಿರಿಸಿಕೊಂಡೇ ನಿರೂಪಿತವಾಗಿರುವ ಈ ಗ್ರಂಥದ ಪ್ರಬಂಧಗಳು, ಕೇವಲ 'ಬರೆಯಲೇಬೇಕೆಂದು ಉದ್ದೇಶಕ್ಕಾಗಿ ಬರೆದ ಲೇಖನಗಳಲ್ಲ'. ಆದರೆ ಇವೆಲ್ಲವುಗಳನ್ನೂ ಒಂದು ಸುವ್ಯವಸ್ಥಿತ ರೀತಿಯಲ್ಲಿ ಸಮಗ್ರೀಕರಿಸಿ ರೂಪಿಸಲಾಗಿದೆ. ಹೀಗಾಗಿ ಈ ವಿಮರ್ಶಾ ಗ್ರಂಥವು ಸೂಕ್ತವಾಗಿದೆ ಅಲ್ಲದೇ ಸಹಾಯಕಾರಿಯಾಗಿಯೂ ಇದೆ. ಆದಾಗ್ಯೂ ಒಂದು **ಮಹತ್ತರವಾದ ದೋಷದಿಂದ** ಬಳಲಿದೆ – ಈ ಗ್ರಂಥದ ಸಂಕ್ಷಿಪ್ತತೆಯೇ ಇದರ ದೋಷವಾಗಿದೆ. ಲೇಖಕ ಜೇಮ್ಸ ಕಜಿನ್ಸ ನಮಗೆ ಎಷ್ಟು ಅವಶ್ಯವಿದೆಯೋ ಅಷ್ಟನ್ನು ಮಾತ್ರ ಒದಗಿಸಿ ತೃಪ್ತಿ ಹೊಂದಿದಂತೆ ಭಾಸವಾಗುತ್ತಿದೆ. ಅದರಲ್ಲೂ **"ಪ್ರಶಿಕ್ಷಿತ ಮನಸ್ಸಿಗೆ"** ಎಷ್ಟನ್ನು ಒದಗಿಸಬೇಕಿದೆಯೋ ಅಷ್ಟನ್ನೇ ಮಾತ್ರ ಅವರು ಇಲ್ಲಿ ಒದಗಿಸಿದ್ದಾರೆ. ಈ ಮೂಲಕ ಇಲ್ಲಿ ಪ್ರಸ್ತುತ ಪಡಿಸಲಾಗಿರುವ ಲೇಖಕರ ಕೃತಿಗಳ ಕಾವ್ಯಾತ್ಮಕ–ಗುಣ ಮತ್ತು **ಅಂತರಂಗ ಭಾವದಲ್ಲಿ ಘನಿಷ್ಠವಾಗಿಯೇ** ಸಂವಹನಗೊಳ್ಳುವಂತೆ, ಆಕರ್ಷಣೆಯ ಮೂಲಕ ಹಿಡಿದಿಟ್ಟುಕೊಳ್ಳುವಂತೆ, ಆ ಕಾವ್ಯದ ಆತ್ಮವನ್ನು, ಅದರ ಸಂರಚನಾ ವಿನ್ಯಾಸವನ್ನು ನಮ್ಮ ಮುಂದೆ ಪ್ರಸ್ತುತ ಪಡಿಸಿದ್ದಾರೆ. ಇಲ್ಲಿ ಅದು ಕೆಲವೊಂದು ಹಂತದಲ್ಲಿ ಎಷ್ಟೊಂದು ಉತ್ಕೃಷ್ಟವಾಗಿದೆ ಎಂದರೆ ಅದು ಅದ್ವಿತೀಯವೂ ಆಗಿದೆ– ಕೇವಲ ಒಂದೇ ಒಂದು ಸ್ಪರ್ಶವಾದರೂ ಸಹಿತ ಅದು ಸರ್ವಾಧಿಕವಾಗಿರುವ ಸಾಮರ್ಥ್ಯದ ಪ್ರಮಾಣದಲ್ಲಿಯೇ ಇರುವಂತೆ

ರೂಪಿತಗೊಂಡಿದೆ. **'ಎಮರ್ಸನ'** ಕುರಿತು ಇರುವ ಪ್ರಬಂಧವಂತೂ ಈ ಮಾದರಿಯ ಒಂದು ಸರ್ವೋತ್ಕೃಷ್ಟ ಉದಾಹರಣೆಯಾಗಿದೆ. **'ಎಮರ್ಸನ'** ಕಾವ್ಯ/ಕವಿತೆಗಳ ಕುರಿತಾಗಿಯೇ ಹಲವಾರು ಪುಟಗಳಲ್ಲಿ ಉಲ್ಲೇಖಗಳಿವೆ. ಅದೂ ಪರಿಪೂರ್ಣ ಸ್ವರೂಪದ ಉಲ್ಲೇಖಗಳೇ ಆಗಿವೆ. ಏಕೆಂದರೆ ಇಲ್ಲಿ ಮತ್ತೆ ಅವುಗಳಿಗೆ ಹೆಚ್ಚಿನದೇನನ್ನೂ ಬಯಸುವ ಅವಶ್ಯಕತೆಯೇ ಇರುವದಿಲ್ಲ. ಮತ್ತೆ ಇಲ್ಲಿರುವ ಕೆಲವು ಪ್ರಬಂಧಗಳು ಅವುಗಳದೇ ಆದ **ಅಸ್ಮಿತೆಯಲ್ಲಿಯೇ ಪ್ರಶಂಸನೀಯವಾಗಿಯೇ ಇವೆ.** ಆದರೂ ಅವು ನಮ್ಮ ಆಶಯಕ್ಕೆ ಮಾತ್ರ ತುಂಬ ತುಂಬ ಸಾಮಾನ್ಯವೆಂದೇ ಭಾವನೆಯನ್ನು ಮೂಡಿಸುತ್ತವೆ. ಆದರೆ ಅಷ್ಟೊಂದು ವಿಸ್ತೃತವಾಗಿ ಈ ಗ್ರಂಥವು ಇರಬೇಕೆಂದು ಸ್ವತಃ ಕವಿಗೇ ಆಶಯವಿರಲಿಲ್ಲವೇನೋ ಎನಿಸುತ್ತದೆ. ಹೀಗಾಗಿ, ಮಿ.ಕಜಿನ್ಸ – ಬಹುತೇಕ ಭಾಗಗಳಲ್ಲಿ ಅತ್ಯಂತ ಜಾಣ್ತನದಿಂದಲೇ – ಇಲ್ಲಿಯೂ ಒಂದು ಅಪವಾದವಿರುವಂತೆ – ಅವರು ಯಾವ ಲೇಖಕನ/ಲೇಖಕರ ಕುರಿತು ದಯಾಪರತೆಯನ್ನು ಹೊಂದಿದ್ದಾರೆಯೋ, ಅಥವಾ ಯಾರನ್ನು ಅತೀ ಆತ್ಮೀಯತೆಯ ಮೂಲಕ **ತೀವ್ರತೆರನಾದ ಗುಣದೋಷತುಲನಾತ್ಮಕ** ಸ್ವಭಾವದಿಂದ ಕಾಣುತ್ತಿದ್ದಾರೋ – ಅಲ್ಲೆಲ್ಲ ಅತ್ಯಂತ ಜಾಣತನದಿಂದಲೇ ನಿರೂಪಿಸಿದ್ದಾರೆ. ಇಲ್ಲಿ ಪ್ರಕಟಗೊಂಡಿರುವ ಹಲವು ಲೇಖಕರ ಹೆಸರುಗಳಲ್ಲಿ – ಅದರಲ್ಲೂ ಕೆಲವು ಲೇಖಕರ ವಿಷಯದಲ್ಲಿ **ವೈಭವಪೂರ್ಣವಾದ ತುತ್ತೂರಿಯ ಮೂಲಕವೇ ಅವರ ಕೀರ್ತಿ**ಯನ್ನು ಕೊಂಡಾಡಲಾಗಿದೆ. ಯಶಸ್ಸು ಕಂಡಿರುವ ಕೆಲ ಲೇಖಕರ ವಿಷಯದಲ್ಲಂತೂ ಈ ತುತ್ತೂರಿಯ ಧ್ವನಿ ನಮ್ಮ ಕರ್ಣಗಳಿಗೆ ನೇರಾನೇರ ಕೇಳುವಂತೆಯೇ ಅನುರಣಿಸಿದ್ದಾರೆ. ಅದರಲ್ಲೂ **ಥಾಮ್ಸನ್, ಮ್ಯಾಸ್‌ಫೀಲ್ಡ್, ಹಾರ್ಡಿ** ಮೊದಲಾದವರು ಇಲ್ಲಿ ಉಲ್ಲೇಖಿಸಲ್ಪಡದಿದ್ದರೂ, ಅಥವಾ ಅಲ್ಪ ಪ್ರಮಾಣದಲ್ಲಿ **ಮೇಲ್ತೋರಿಕೆಯ ಸಂಕೇತ ಪ್ರಸಂಗಗಳಲ್ಲಿ** ಅಭಿವ್ಯಕ್ತಗೊಳಿಸಿದ್ದನ್ನು ಕಾಣುತ್ತೇವೆ. ಆದರೂ ಇಲ್ಲಿ **ಸಮಸಾಮಯಿಕ** ಲೇಖಕರಾದ ರವೀಂದ್ರನಾಥ ಠಾಕೂರ, ಎ.ಈ., ಹಾಗೂ ಯೀಟ್ಸ ಕುರಿತೂ ವಿವರಣೆಗಳನ್ನು ಒಳಗೊಂಡಿದೆ. ಜೊತೆಜೊತೆಗೆ ತೀರ ಇತ್ತೀಚಿನ ಕವಿ/ಲೇಖಕರಾಗಿರುವ **ಸ್ಟಿಫನ್ ಫಿಲಿಪ್ಸ, ಮೆರಿಡಿತ್, ಕಾರ್ಪೆಂಟರ್**ರಂತಹ ಸಾಧನೆಗೈದಿರುವ ಎಲ್ಲರ ಹೆಸರುಗಳನ್ನು ಉಲ್ಲೇಖಿಸುವದರ ಜೊತೆಗೇ, ನವೀನ ಲೇಖಕರ ವಿಷಯದಲ್ಲಿ ಅಲ್ಲಿ ಉಲ್ಲೇಖಗಳು ಇವೆ. ಈ ಪುಟ್ಟ ಗ್ರಂಥವು ಕೇವಲ 135 ಪುಟಗಳನ್ನು ಮಾತ್ರ

ಹೊಂದಿದ್ದು, ಅದೂ ಚಿಕ್ಕ ಗಾತ್ರದ ಪುಟದಲ್ಲಿ ರೂಪಿತಗೊಂಡಿದೆ. ಆದರೆ ಇದು ಒಳಗೊಂಡಿರುವ ಎಲ್ಲ ಆಕೃತಿ ಮತ್ತು ಆಶಯಗಳ ವಿಷಯದಲ್ಲಿ ಹೋಲಿಸಿದರೆ, ಇದೊಂದು **'ಪುಟ್ಟ ಪೀಠ'**ದಂತೆ ಇದೆ. ಇಂಗ್ಲೀಷ ಸಾಹಿತ್ಯದ ಓದುಗನಿಗೆ ಸಮಗ್ರವಾಗಿ ಅರ್ಥೈಸಿಕೊಳ್ಳಲು ಸಾಧ್ಯವಾಗದ ರೀತಿಯಲ್ಲಿದೆ. ಆದರೆ ಭಾರತದ ವಿಷಯದಲ್ಲಿ ಮಾತ್ರ, ಇಲ್ಲಿ ಈ ಇಂಗ್ಲೀಷ ಸಾಹಿತ್ಯದ ವಿಷಯದಲ್ಲಿ ಇನ್ನೂ ಹೆಚ್ಚಿನ ಅಜ್ಞಾನದ ವಾತಾವರಣವೇ ಇದೆ. ನಮ್ಮಲ್ಲಿ ಬಹುತೇಕವಾಗಿ **ಪ್ರಜ್ಞಾಪೂರ್ಣ ವಿಮರ್ಶೆಯ** ವಿಷಯದಲ್ಲಿ, ನಾವಿನ್ನೂ ಕಡಿಮೆ ಪ್ರಮಾಣದ ಪ್ರಶಿಕ್ಷಣವನ್ನೇ ಹೊಂದಿದ್ದೇವೆ. ಹೀಗಾಗಿ ಈ ವಿಷಯದಲ್ಲಿ ನಮಗೆ ಇನ್ನೂ ಸ್ವಲ್ಪ ಹೆಚ್ಚಿನ ಪ್ರಮಾಣದಲ್ಲಿಯೇ ವಿವರಗಳು ಅವಶ್ಯವಾಗಿದ್ದು, ಆ ಮೂಲಕ ನಮ್ಮ ಏಕಾಗ್ರತೆಯನ್ನು **ಏಕತ್ರ**ಗೊಳಿಸುವಲ್ಲಿ ಮತ್ತು ಚಿರಂತನವಾಗಿರುವ ಆಸಕ್ತಿಯನ್ನು ನಮ್ಮಲ್ಲಿ ರೂಪಿಸಿಕೊಳ್ಳುವ ಸಲುವಾಗಿ ವಿವರಗಳು ಬೇಕಾಗಿವೆ. ಪಥದ ಕಡೆಗೆ ತೋರುಬೆರಳಿನ ಮೂಲಕ ಸಂಕೇತಿಸುವ ಮಾರ್ಗದರ್ಶನವು ಭಾರತೀಯ ಓದುಗನಿಗೆ ಸಾಕಾಗುವದಿಲ್ಲ. ಅವನನ್ನು ಕೆಲಮೈಲುಗಳ (ಕೆಲವು ಸಾಧನೆಯ ವರೆಗೆ) ತನಕವೂ ಜೊತೆಯಲ್ಲಿಯೇ ಕರೆದೊಯ್ಯಬೇಕಾಗುತ್ತದೆ. ಅವನು ಮತ್ತೆ ಅದನ್ನು ಅನುಸರಿಸಿಕೊಂಡು ಮುಂದೆ ಸಾಗಬೇಕು ಎಂದು ಬಯಸಿದಲ್ಲಿ, ಅವನ ಕೈಹಿಡಿದೇ ಕೆಲವು ದೂರ ನಡೆಯಲೇಬೇಕಾಗಿದೆ; ನಡೆಸಲೇಬೇಕಾಗಿದೆ.

### 3. ಪುಟ್ಟ ಕಿಡಕಿಯ ಮೂಲಕ ಬಂದ ಕ್ಷೀಣ ಕಿರಣ

ಆದರೆ ಮಿ.ಕಜಿನ್ಸ ಇಲ್ಲಿ, ಭಾರತೀಯ ಮನೋಭೂಮಿಕೆಯ(ಚಿಂತನದ) ಓದುಗ ವಲಯಕ್ಕೆ ಒಂದು ಮಹತ್ತರವಾಗಿರುವ ಸೇವೆಯನ್ನೇ ನೀಡಿದ್ದಾರೆ. ಈ ಮೂಲಕ, ಒಂದು ಸೂಕ್ತವಾಗಿರುವ ಪಥವನ್ನು ಅರಸುವಲ್ಲಿ ಅನುಸರಿಸಬಹುದಾದ ಸಂಗತಿಯ ಸಲುವಾಗಿ, ಈ ಮಾರ್ಗದರ್ಶನದ ಮೂಲಕ ಎಲ್ಲ ಅವಕಾಶಗಳೂ ಲಭ್ಯವಾಗುವಂತೆ ನಿರ್ದೇಶನ ನೀಡಿದ್ದಾರೆ. **ಭಾರತೀಯ ಮನೋಚಿಂತನಕ್ಕೆ ಇಂಗ್ಲೀಷ ಸಾಹಿತ್ಯ ಮತ್ತು ಇಂಗ್ಲೀಷ ಭಾಷೆ ವ್ಯಾವಹಾರಿಕವಾಗಿ ಕೇವಲ ಒಂದು ಪುಟ್ಟ ಕಿಟಕಿಯಂತಿದೆ.**[6] ಅದೂ ಅತ್ಯಂತ ಶೀರ್ಣವಾದ ಹಾಗೂ ಅಸುವಿಧಾಜನಕ ಶಿಕ್ಷಣದ ಸ್ವರೂಪದಲ್ಲಿಯೇ ಒದಗಿಸಲ್ಪಟ್ಟಿದೆ. ಇದರ ಜೊತೆಗೇ **ಯುರೋಪಿಯನ್ ಚಿಂತನಾ ವಿಧಾನದಲ್ಲಿಯೇ ಪರಿಗ್ರಹಿಸಿಕೊಳ್ಳುವ ಮತ್ತು ಅದೇ ಭಾವದ**

**ಸಂಸ್ಕೃತಿಯಲ್ಲಿಯೇ ರೂಪಿಸಲ್ಪಟ್ಟಿದೆ.** ಆದರೆ ಇಲ್ಲಿಯವರೆಗೂ ಪರಿಗ್ರಹಿಸಿ–ಕೊಂಡಿರುವದೆಲ್ಲವೂ, ಯಾತನಾಪೂರಿತವಾಗಿದೆ; ನೋವಿನಿಂದಲೇ ತುಂಬಿಕೊಂಡಿದೆ; ಹೀಗಾಗಿ ಕ್ಷೀಣಗೊಂಡ ಸ್ಥಿತಿಯಲ್ಲಿ ಇದೆ. ಅಪರ್ಯಾಪ್ತವೂ ಆಗಿದೆ. ಕೇವಲ ಪ್ರಾರಂಭದ ಹಂತವನ್ನು ಮಾತ್ರವೇ ಹೊಂದಿದೆ. ಇಂಗ್ಲೀಷ ಕಾವ್ಯದ ವಿಷಯದಲ್ಲಿ – ಅದರಲ್ಲೂ ನಮ್ಮಲ್ಲಿ ಕೆಲವೇ ಕೆಲವರು **ಅಲಫ್ರೆಡ್ ಟೆನ್ನಿಸನ್[06–08–1809 ದಿಂದ 06–10–1892]** ಹಾಗೂ **ರಾಬರ್ಟ ಬ್ರೌನಿಂಗ್[07–05–1812 ರಿಂದ 12–12–1889]** ಹಂತಕ್ಕೇ ಸ್ಥಗಿತಗೊಳಿಸಿಕೊಂಡಿದ್ದಾರೆ – ಇದರಲ್ಲೂ ಮತ್ತೆ ಕೆಲವು ಮಾತ್ರ **ಲಾರ್ಡ ಭೈರನ್[22–01–1788 ರಿಂದ 19–04–1824] ಮತ್ತು ಪಿ.ಬಿ.ಶೆಲ್ಲಿಯ [04–08–1792 ರಿಂದ 08–07–1822. ಕೇವಲ 29 ವರ್ಷಗಳು ಮಾತ್ರ]** ಹಂತದಲ್ಲಿ ನಿಲ್ಲದಿದ್ದಲ್ಲಿ ಮಾತ್ರ. ಕೆಲವರು ಮಾತ್ರ ತೀರ ಇತ್ತೀಚಿನ ಕವಿಗಳ ಬಗೆಗೆ ಅರಿವು ಹೊಂದಿದ್ದಾರೆ. ಜೊತೆಗೆ ಕೆಲವು ಸಮಕಾಲೀನ ಕವಿಗಳ ಬಗೆಗೆ ತಿಳಿದುಕೊಂಡಿದ್ದಾರೆ. ಈ ರೀತಿಯಲ್ಲಿ ಇರುವವರನ್ನು ಎಣಿಸಬಹುದಾದಷ್ಟು ಕಡಿಮೆ ಸಂಖ್ಯೆಯಲ್ಲಿ ಇದ್ದಾರೆ. ಈ ಬೃಹದ್ ಪರ್ಯಾಯ ದ್ವೀಪವಾಗಿರುವ (ಭಾರತದಲ್ಲಿ) ಸಂಸ್ಕೃತಿಯ ವಿಷಯಕ್ಕೆ ಸಂಬಂಧಿಸಿದಂತೆ, ಅದರಲ್ಲೂ ಒಂದು ಅವಧಿಯಲ್ಲಿ ನಾಗರಿಕತೆಯ ಮಹತ್ವದ ಕೇಂದ್ರಗಳಲ್ಲಿಯೇ ಒಂದಾಗಿದ್ದ, ಸುದೀರ್ಘ ಅವಧಿಯಲ್ಲಿ ಪ್ರಾಂತ್ಯಗಳ ಪ್ರಾಂತವಾಗಿದ್ದ ಭಾರತ: (ಸಶೇಷ)

---

**ಟಿಪ್ಪಣಿಗಳು:**

1. **ಮಂತ್ರ;** ಇಲ್ಲಿ ಮಂತ್ರ ಎಂದಾಕ್ಷಣ ವೇದದ ಅಥವಾ ಉಪನಿಷತ್ತಿನ ಮಂತ್ರದ ಧಾರ್ಮಿಕ ವಿವರಣೆಗಿಂತ, ಒಂದು ಅಭಿವ್ಯಕ್ತಿಯು ಕಾಲಾತೀತವಾಗಿ ಅನ್ವಯಗೊಳ್ಳಬೇಕೆಂದರೆ ಅದು **'ಮಂತ್ರಸದೃಶ'**ವಾಗಿರಬೇಕು ಎನ್ನುವ ಹಿನ್ನೆಲೆಯಲ್ಲಿ ರೂಪಿತಗೊಂಡಿದೆ. ಮಂತ್ರವೂ ಶಬ್ದದ–ಅಕ್ಷರಗಳ ಸಮುಚ್ಚಯವೇ ಆಗಿದೆ; ಆದರೆ ಬಹುತೇಕವಾಗಿ ದೈನಂದಿನ ಬಳಕೆಯಲ್ಲಿರುವ ಶಬ್ದಗಳು ಆಯಾಮರಹಿತ ಸ್ಥಿತಿಯಲ್ಲಿಯೇ ಬಳಸಲ್ಪಡುತ್ತವೆ. ತಾತ್ಕಾಲಿಕ ಶಮನವನ್ನು ಒದಗಿಸುವ ಶಬ್ದಗಳು, ತಾತ್ಕಾಲಿಕ ಸಮಾಧಾನವನ್ನು ಒದಗಿಸುವ ಶಬ್ದಗಳು, ಬರೀ ಗೌಜು–ಗದ್ದಲದ ಶಬ್ದಗಳು... ಹೀಗೆ ವಸ್ತುಸ್ಥಿತಿವಾದದಲ್ಲಿಯೇ ನೆಲೆನಿಂತ ಮಾತಿನ ಆಭಿವ್ಯಕ್ತಿಗಳೂ ಸಹಿತ

ಶಬ್ದಗಳೇ ಆಗಿವೆ. ಆದರೆ ಇವೇ ಶಬ್ದದ ಮೂಲಕವೇ ಕಾಲಾತೀತವಾಗುವ ಗುಣವು ಶಬ್ದಕ್ಕೆ ಪ್ರಾಪ್ತಿಯಾಗುವದು ಆಯಾ ವ್ಯಕ್ತಿಯಿಂದ ಅಭಿವ್ಯಕ್ತಿಸಲ್ಪಟ್ಟ ರೀತಿ ಮತ್ತು ಅನುಭವವನ್ನು ಆಧರಿಸುತ್ತವೆ.

ಇಲ್ಲಿ ಮುಖ್ಯವಾದ ಸಂಗತಿ ಎಂದರೆ, ಧ್ವನಿಯ ಮೂಲಕ ಪ್ರಕಟಗೊಳ್ಳುವ 'ಮಾತು/ಶಬ್ದ'ವು ಮನುಷ್ಯನಿಂದಲೇ ಜನಿಸಿದಂತೆ ಕಂಡರೂ, ಇಲ್ಲಿ ಅವನೊಬ್ಬ ಕೇವಲ ಪ್ರತಿಫಲನಗೊಳಿಸಲು ಅಥವಾ ಪ್ರತಿಧ್ವನಿಗೊಳಿಸುವ ಒಂದು ಉಪಕರಣ ಮಾತ್ರವಗಿರುತ್ತಾನೆ. ಏಕೆಂದರೆ 'ಅಕ್ಷರದ ಸ್ಥಾನ ಆಕಾಶದಲ್ಲಿದೆ". ಅಲ್ಲಿಂದಲೇ ಅವತರಣಗೊಂಡು ಬರುವ 'ಧ್ವನಿಯು' ಮನುಷ್ಯನ ವಾಕ್–ಶಕ್ತಿಯ ಅಂಗಗಳಾದ ಧ್ವನಿಪೆಟ್ಟಿಗೆಯ ಮೂಲಕ ಪ್ರಕಟಗೊಳ್ಳುತ್ತದೆ. ಇಲ್ಲಿ ಮಾನವನ ದೇಹದ ಮುಖದ ಭಾಗದಲ್ಲಿರುವ ತುಟಿ, ಹಲ್ಲು, ಅಂಗುಳ, ತಾಲವ್ಯ, ಕಂಠ (ಓಷ್ಟ್ಯ–ದಂತ್ಯ–ತಾಲವ್ಯ–ಮೂರ್ಧನ್ಯ–ಕಂಠ್ಯ)ದ ಮೂಲಕವೇ ರೂಪ ಪಡೆದುಕೊಂಡು ಪ್ರಕಟಗೊಳ್ಳುತ್ತವೆ.

ಇವೆಲ್ಲವೂ ಧ್ವನಿಯು ರೂಪ ಪಡೆಯುವಲ್ಲಿ ಮತ್ತು ಪ್ರಕಟಗೊಳ್ಳುವಲ್ಲಿ ಸಹಾಯಕ ಅಂಶಗಳು ಮಾತ್ರ. ಅದಕ್ಕಿಂತ ಈ ಧ್ವನಿಯು ಆಕಾಶದಲ್ಲಿದ್ದಾಗ ನಾದವಾಗಿದ್ದು, ದೇಹವನ್ನು ಪ್ರವೇಶಿಸಿದಾಗ "ಧ್ವನಿ"ಯಾಗಿ ರೂಪಾಂತರಗೊಂಡು, ಆಯಾ ಸಂದರ್ಭದ ಹಿನ್ನಲೆಯಲ್ಲಿ ಪ್ರಕಟಗೊಳ್ಳಲು 'ಶಬ್ದ'ವಾಗಿ ಪರಿವರ್ತನಗೊಳ್ಳುತ್ತದೆ. ಇದನ್ನೇ ಕೇಶಿರಾಜನೂ ಸೂಕ್ಷ್ಮವಾಗಿ 'ನಾಭಿ ಮೂಲದಿಂ ಜನಿಯಿಸುಗಂ ಶಬ್ದದ್ರವ್ಯಂ' ಎಂದಿದ್ದಾನೆ.

ನಾದದ ಮೂಲಕ ದೇಹವನ್ನು ಪ್ರವೇಶಿಸಿ ಅಭಿವ್ಯಕ್ತಗೊಳ್ಳಲು ರೂಪು ಪಡೆದ ಶಬ್ದವು, ಪ್ರಕಟಗೊಂಡಾಗಲೂ 'ನಾದ'ವಾಗಿಯೇ ಇದ್ದರೆ ಅದು "ಮಂತ್ರ"ವಾಗಿಯೇ ಇರುತ್ತದೆ. ಅದಕ್ಕೇ ಆದ ಭೌಗೋಲಿಕ ಆಕಾರ/ಧ್ವನಿ/ಶಬ್ದವಾಗಿ ರೂಪುಗೊಂಡಿದ್ದರೂ ಸಹಿತ, ತನ್ನ ಮೂಲನೆಲೆಯ ಸಂಪರ್ಕದಿಂದಲೇ ಸ್ಪಂದಿಸುತ್ತಿದ್ದರೆ ಅದೇ 'ಮಂತ್ರ'ವಾಗಿರುತ್ತದೆ. ಅದಕ್ಕಾಗಿಯೇ ಅಕ್ಷರಗಳನ್ನು ಮಾತೃಕೆ ಎಂದು ಕರೆಯುತ್ತಾರೆ. ಇದು ಬೆಳಕಿನ ಸ್ವರೂಪದಲ್ಲಿಯೇ ಇರಬೇಕು ಎನ್ನುವದನ್ನು ಅಲ್ಲಮಪ್ರಭು

"ಮಾತೆಂಬುದು ಜ್ಯೋತಿರ್ಲಿಂಗ" ಎಂದಿದ್ದಾನೆ. ಕಾಲಾತೀತವಾಗುವ ಆಯಾಮವು ಶಬ್ದಕ್ಕೆ ಲಭ್ಯವಾಗುವದು ಅದು ಅಭಿವ್ಯಕ್ತಗೊಂಡ ಸಂದರ್ಭ, ಪ್ರಕೃತಿ, ಸಂಸ್ಕೃತಿ, ಬದುಕು ಮತ್ತು ಅಭಿವ್ಯಕ್ತಗೊಳಿಸುತ್ತಿರುವವನು ಇವೆಲ್ಲವುಗಳ ಜೊತೆಗೆ ಸಮನ್ವಯಗೊಂಡಿದ್ದಲ್ಲಿ ಮಾತ್ರ ಸಾಧ್ಯವಾಗುತ್ತದೆ. ಆಗ ಅದು 'ಮಂತ್ರ'ವಾಗಿಯೇ ಇರುತ್ತದೆ. ಇದು ಕೇವಲ ಭಾರತದ ಚಿಂತನ ಮಾತ್ರ ಅಲ್ಲ. ಇಡೀ ಜಗತ್ತಿನ ಚಿಂತನೆಗಳೆಲ್ಲವೂ–ಎಲ್ಲ ಭಾಷೆಗಳಲ್ಲಿಯೂ– ಮಂತ್ರಸದೃಶ ಅಭಿವ್ಯಕ್ತಿಗಳೇ ಈಗಲೂ ಅನುಸರಿಸಲ್ಪಡುತ್ತಿರುವದು ಈ ಹಿನ್ನೆಲೆಯಲ್ಲಿ.

2. ಮಿಸ್ಟರ್ ಜೇಮ್ಸ ಹೆನ್ರಿ ಕಜಿನ್ [22 ಜುಲೈ 1873 – 20 ಫೆಬ್ರುವರಿ 1956]; ಇಂಗ್ಲೀಷ ಮತ್ತು ಐರಿಷ ಕವಿ, ಲೇಖಕ. ಇವರಿಗೆ (Mac Oisin) ಮ್ಯಾಕ್ ಓಯಸೀನ್ ಮತ್ತು ಜಯರಾಮ ಎನ್ನುವ ಗುಪ್ತನಾಮಗಳೂ ಇದ್ದವು. ಶ್ರೀ ಅರವಿಂದರಾದಿಯಾಗಿ ಕನ್ನಡದ ಕವಿ ಕುವೆಂಪುರವರನ್ನೂ ಪ್ರಭಾವಿಸಿದ ವ್ಯಕ್ತಿ ಇವರು. ಕುವೆಂಪು ಅವರಿಗೆ "ಮಾತೃಭಾಷೆ"ಯಲ್ಲಿಯೇ ಅಭಿವ್ಯಕ್ತಿ ಇದ್ದಲ್ಲಿ ಸೃಷ್ಟಿಶೀಲ ಕಾವ್ಯ ರಚಿತಗೊಳ್ಳುತ್ತದೆ ಎನ್ನುವದನ್ನು ಮನದಟ್ಟು ಮಾಡಿಕೊಟ್ಟವರು. ಶ್ರೀಮತಿ ಆನಿಬೆಝುಂಟ್‌ರವರ ಸಹಾಯದ ಮೂಲಕ ಪೂರ್ವದೇಶಗಳಿಗೆ ಪಯಣಿಸಿ ಬಂದ ಇವರು ಜಪಾನಿನಲ್ಲಿಯೂ ಕೆಲಕಾಲ ನೆಲೆಸಿದ್ದರು. ರವೀಂದ್ರನಾಥ ಟಾಗೋರ, ರುಕ್ಮಿಣಿದೇವಿ ಆರುಂಡೇಲ್. ಮಹಾತ್ಮಾ ಗಾಂಧೀಯವರ ಸ್ನೇಹಿತರೂ ಆಗಿದ್ದರು. ಜೀವನದ ಅಂತಿಮ ಭಾಗದಲ್ಲಿ ಹಿಂದೂ ಪರಂಪರೆಯನ್ನು ಒಪ್ಪಿಕೊಂಡು, ಅದೇ ರೀತಿಯಲ್ಲಿ ಜೀವನ ರೂಪಿಸಿಕೊಂಡವರು.

3. ಇದು ಭಾರತದಲ್ಲಿಯೇ ಪ್ರಕಾಶನಗೊಂಡಿದೆ. ಈ ಗ್ರಂಥವು ಬಹುತೇಕ ಭಾರತೀಯ ಲೇಖಕರನ್ನು ಪ್ರಭಾವಿಸಿದೆ. ಏಕೆಂದರೆ, ಇದನ್ನು ಓದಿದ ಪ್ರಭಾವದಲ್ಲಿಯೇ ಈ 'ಭವಿಷ್ಯ ಕಾವ್ಯ'ವೂ ಇದೆ ಎಂದು ಪ್ರಥಮದಲ್ಲಿಯೇ ಶ್ರೀ ಅರವಿಂದರು ಈ ಗ್ರಂಥವನ್ನು ಸ್ಮರಿಸಿಕೊಂಡೇ ಸಾಗಿದ್ದಾರೆ. (Madras: Ganesh [1917]), and Do. rev. edn. (1919).

4. **ಆತ್ಮತೃಪ್ತಿ:** ಕಾಲಾತೀತವಾಗಿರುವ ಕಾವ್ಯ ಆತ್ಮತೃಪ್ತಿಯನ್ನು ಕೊಡುತ್ತದೆ. ಕವಿತೆ ಹೃದಯವನ್ನು ಸಂತುಷ್ಟಗೊಳಿಸುತ್ತದೆ. ಪದ್ಯ ಮನಸ್ಸನ್ನು ಉಲ್ಲಾಸಗೊಳಿಸುತ್ತದೆ.

5. **ಪ್ರಶಿಕ್ಷಿತ ಮನಸ್ಸು** [Trained Mind]; ಭಾರತೀಯರಿಗೆ ಇಂಗ್ಲೀಷ ಭಾಷೆಯನ್ನು ತರಬೇತಿಯ ಮೂಲಕವೇ ಕಲಿಸಲಾಗಿದೆ. ಅದೂ ನಿಗದಿಗೊಳಿಸಲ್ಪಟ್ಟ ಸೂತ್ರಗಳಲ್ಲಿ ಮತ್ತು ನಿರ್ಬಂಧಿತ ಸೂತ್ರಗಳಲ್ಲಿಯೇ, ಒಂದು ಉದ್ದೇಶವನ್ನು ನಿಖರಗೊಳಿಸಿಕೊಂಡೇ ಕಲಿಸಲಾಗಿದೆ. ಹೀಗಾಗಿ ಈಗಲೂ ಇಂಗ್ಲೀಷ ಭಾಷೆಯು ಭಾರತೀಯರಿಗೆ "ಒಂದು ಅವಸ್ಥಾ ಹಂತ"ದಲ್ಲಿಯೇ ಇದೆ. ಅದಿನ್ನೂ ಸಾಂಸ್ಕೃತಿಯ ಬೇರಿನ ಸಂಪರ್ಕ ಹೊಂದಿ ನಿಸರ್ಗ ಸಹಜವಾಗಿ ರೂಪಣೆಗೊಳ್ಳುವ ಭಾವವಿನಿಮಯದ ಭಾಷಾ ವ್ಯವಸ್ಥೆ ಆಗಿಯೇ ಇಲ್ಲ. ಹೀಗಾಗಿ ಈಗಲೂ ಇಂಗ್ಲೀಷನ್ನು ಈ ರೀತಿಯ ಪ್ರಶಿಕ್ಷಣ ವ್ಯವಸ್ಥೆಯಲ್ಲಿಯೇ ಮುಂದುವರೆದಿದೆ. ಈಗಲೂ ಸಹಿತ ಇಂಗ್ಲೀಷ ಭಾಷಾ ವ್ಯವಸ್ಥೆಯಲ್ಲಿ, ಅಧ್ಯಯನದ ಹಂತದಲ್ಲಿ, ಕೇವಲ ಪರೀಕ್ಷಾ ದೃಷ್ಟಿಯಿಂದ ನಿರ್ಮಿತಿಗೊಳ್ಳುವ ಪಠ್ಯಕ್ರಮದ ವಿಧಾನದಲ್ಲಿಯೇ ಸಾಹಿತ್ಯ ಮತ್ತು ವಿಮರ್ಶಾ ವಿಧಾನಗಳು ಚಲಾವಣೆಯಲ್ಲಿವೆ. ಭಾರತದ ಸಾಂಸ್ಕೃತಿಕ ವೈವಿಧ್ಯತೆ ಮತ್ತು ಆಯಾ ಭಾಗದ ಭಾಷಾ ವ್ಯವಸ್ಥೆಯಲ್ಲಿ, ಇಂಗ್ಲೀಷ ಈಗಲೂ ಹೃದಯಸ್ಪರ್ಶಿಯಾಗಿ ಸ್ಪಂದನಗೊಳ್ಳುತ್ತಿಲ್ಲ. ಇಂತಹ ಅವಧಿಯಲ್ಲಿ ಇಂಗ್ಲೀಷ ಭಾಷೆಯ ಈ ವಿಮರ್ಶಾ ಪದ್ಧತಿಯನ್ನು ಇಲ್ಲಿ – ಭಾರತದ ಆಯಾ ಭಾಷೆಗಳಲ್ಲಿ ರೂಪಿಸುವದೂ ಒಂದು ಸಾಹಸದ ಕಾರ್ಯವಾಗುತ್ತದೆ.

6. **ಪುಟ್ಟ ಕಿಡಕಿ; ಭಾ**ರತದ ಜನತೆಯ ಮೂಲಕವೇ ತನ್ನ ಆಡಳಿತವನ್ನು ಸುಸೂತ್ರವಾಗಿ ನಡೆಸಿಕೊಂಡು ಹೋಗುವ ಸಲುವಾಗಿಯೇ, ಅದರಲ್ಲೂ ಭಾರತದಂತಹದ ವಿಸ್ತಾರದ, ವೈವಿಧ್ಯತೆಯ ಆಗರವಾದ ಸಾಮ್ರಾಜ್ಯವನ್ನು ಸದಾ ತಮ್ಮ ನಿಯಂತ್ರಣದಲ್ಲಿಯೇ ಇರಿಸಿಕೊಳ್ಳುವ ಉದ್ದೇಶದಿಂದ, ಭಾರತೀಯರಿಗೂ ಇಂಗ್ಲೀಷ ಭಾಷೆಯ ತೀರ ಕೆಳಹಂತದ ಜ್ಞಾನವನ್ನು ಕೊಟ್ಟು, ಅದೇ ಚಿಂತನದಲ್ಲಿಯೇ ಅವರು ಸದಾ ಇರುವಂತೆ ರೂಪಿಸಿದ, ಆಗಿನ ಶಿಕ್ಷಣ ನೀತಿಯಲ್ಲಿ, ಮನೋವಿಕಸನಕ್ಕೆ ಮೂಲಹೇತುವಾಗಿರುವ ತಾತ್ತ್ವಿಕ ಚಿಂತನಗಳನ್ನು ದೂರವೇ ಇಡಲಾಯಿತು. ಇದು ಈಗಲೂ ಇಂಗ್ಲೀಷ ಪಠ್ಯಕ್ರಮದಲ್ಲಿ ಮುಂದುವರಿದೇ ಇದೆ.

**ಪಾರಿಭಾಷಿಕ ಪದಕೋಶ**

| ಅಧ್ಯಾಯ/ ಪುಟ/ಪ್ಯಾರಾ | ಕನ್ನಡ | ಇಂಗ್ಲೀಷ | ಇತರೇ |
|---|---|---|---|
| 1–1–1 | ಇಂಗಿತಪೂರ್ಣ ಪರಾಮರ್ಶೆ | Suggestive | |
| | ನಿರ್ಣಯಾತ್ಮಕ ಅಥವಾ ವಿಚಕ್ಷಕ | Discerny | |
| | ಅನುಭೂತಿ | Felt | ಕಾವ್ಯಾನಂದ/ ಕಾವ್ಯಾನುಭವ/ ಕಾವ್ಯಾನುಭೂತಿ |
| | ಅತೀತ | Beyond | ಲೋಕಾತೀತ/ ತದುತ್ತರ ಎಂದು ಆಧ್ಯಾತ್ಮಿಕ ಹಂತ |
| | ಉನ್ನತೀಕರಣ | Higher Function | |
| | ಗುಣದೋಷವಿವೇಚನಾ | Appreiciation | ಗುಣದೋಷ ಎನ್ನುವದು ಪಾರಿಭಾಷಿಕ ಶಬ್ದ |
| 1–1–2 | ಅಂತರಂಗ ಭಾವದಲ್ಲಿ ಘನಿಷ್ಠವಾಗಿ | Seize intimately | ಹೃದ್ಗತವಾಗುವಂತೆ |
| | ಅಸ್ಮಿತೆಯಲ್ಲಿಯೇ/ ಪ್ರಶಂಸನೀಯ | Admirable | |
| | ಗುಣದೋಷ– ತುಲನಾತ್ಮಕ ಸ್ವಭಾವ | Strong appreciation | |
| | ಮೇಲ್ತೋರಿಕೆಯ ಸಂಕೇತ ಪ್ರಸಂಗ | Passing allusion | |
| | ಸಮಸಾಮಯಿಕ | Contemporary | |
| | ಪುಟ್ಟ ಪೀಠ | Pedestal | |
| | ಏಕತ್ರ | Enchain | |

# ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್
## ಪ್ರಕಟವಾಗಿರುವ ಪುಸ್ತಕಗಳ ಪಟ್ಟಿ

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 1 | ಸಮಗ್ರ ಶಿಕ್ಷಣ |
| 2 | ಶ್ರೀ ಅರವಿಂದರು ದಿವ್ಯ ಜೀವನ |
| 3 | ಶ್ರೀ ಅರವಿಂದರು ಭಾರತೀಯ ಧರ್ಮ ಪರಂಪರೆ ಮತ್ತು ಭಗವಾನ್ ಶ್ರೀ ಅರವಿಂದರ ದರ್ಶನ |
| 4 | ಶ್ರೀ ಮಾತಾರವಿಂದರ ಪೂರ್ಣಯೋಗ |
| 5 | ಪ್ರಾರ್ಥನಾ ಪದ್ಯಗಳು |
| 6 | ರವಿ ಬೆಳಗಿದ ಪಥ (ಶ್ರೀಮಾತೆಯವರ ವಚನವೇದ ಸಂಕಲನ) |
| 7 | ನವ್ಹೆಂಬರ್ 24, 1926 ಅಧಿಮಾನಸ ಪ್ರಜ್ಞೆಯ ಅವರೋಹಣ ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ದೃಷ್ಟಿಯಲ್ಲಿ ಸಿದ್ಧಿದಿನದ ಮಹತ್ವ |
| 8 | ಶ್ರೀ ಅರವಿಂದರು (ಒಂದು ಸಂಕ್ಷಿಪ್ತ ಪರಿಚಯ) |
| 9 | ಶ್ರೀಮಾತೆ (ಒಂದು ಸಂಕ್ಷಿಪ್ತ ಪರಿಚಯ) |
| 10 | ಕೇಂಬ್ರಿಜ್‌ನ ಸುಗಂಧಿತ ಪುಷ್ಪ (ಮಾನವತೆಗೆ ಶ್ರೀ ಅರವಿಂದರ ಕೊಡುಗೆ) |
| 11 | ಅತಿಮಾನಸ ಹಾಗೂ ಹೊಸ ಜಗತ್ತೊಂದರ ಜನನ (ಶ್ರೀಮಾತೆ ಹಾಗೂ ಶ್ರೀ ಅರವಿಂದರ ಬರಹಗಳ ಸಂಕಲನ) |
| 12 | ಭಾರತ ಮತ್ತು ಭರತಮಾತೆಯ ದೈವನಿಯತಿ |
| 13 | ಆದರ್ಶ ಶಿಕ್ಷಕ |
| 14 | ಪೂರ್ಣಯೋಗ |
| 15 | ಶ್ರೀ ಅರವಿಂದರ ಧರ್ಮ ಹಾಗೂ ರಾಷ್ಟ್ರೀಯತ್ವ |
| 16 | ಶ್ರೀಮಾತೆಗೆ 72 (ಬಾಹತ್ತರ) ಕವನಗಳ ಅರ್ಪಣೆ |

| ಕ್ರಮ ಸಂಖ್ಯೆ | ಕೃತಿ ಹೆಸರು |
|---|---|
| 17 | ಶಿಕ್ಷಣ ಕುರಿತು ಶ್ರೀಮಾತಾರವಿಂದರ ವಿಚಾರಧಾರೆ |
| 18 | ಶ್ರೀ ಅರವಿಂದ ದರ್ಶನ |
| 19 | ಶ್ರೀಮಾತೆ ಭಾರತಮಾತೆ |
| 20 | ದುರ್ಗಾಸ್ತೋತ್ರ |
| 21 | ಚಿಂತನಗಳು ಮತ್ತು ಸೂಕ್ತಿಗಳು |
| 22 | ಯೋಗ ಸಮನ್ವಯ |
| 23 | ಶ್ರೀ ಅರವಿಂದಾಶ್ರಮ |
| 24 | ಪ್ರಸೂತಿ ಪೂರ್ವದ ಶಿಕ್ಷಣ ಶೋಭಾಯಮಾನ ಭವಿಷ್ಯತ್ತಿನೆಡೆಗೆ |
| 25 | ಮಗುವನ್ನು ಪೋಷಿಸುವುದು ಹೇಗೆ? |
| 26 | ಸುಪ್ರಮಾನಸದ ಶ್ರೀಮಾತೆ |
| 27 | ಸಾವಿತ್ರಿ (ಶ್ರೀ ಅರವಿಂದರ ಮಹಾಕಾವ್ಯದ ಸಾರಾಂಶ) |
| 28 | ಪೂರ್ಣಯೋಗದ ಪಥದಲ್ಲಿ |
| 29 | ಬೆಳಕಿನ ಕಿರಣಗಳು |
| 30 | 24th November 1926 (Descent of Overmental Consciousness) |
| 31 | ಶ್ರೀ ಅರವಿಂದರ ಸಾವಿತ್ರಿ |
| 32 | ಮಾನುಷ ಚಕ್ರ |
| 33 | ಚೈತ್ಯ ಪುರುಷ |
| 34 | ಭವಾನಿ ಭಾರತಿ |
| 35 | ಶಿಕ್ಷಣ |
| 36 | ಯೋಗಾರಂಭ |



ಜೊತೆಗಿದೋ ಇಲ್ಲಿ ಈ ಸೃಷ್ಟಿಶೀಲ ಶಾಶ್ವತದ ಚಕ್ಷುವಿಂದು
ಪ್ರೇರಣೆಗೆ ಸಂದು ಆ ದೇವಿಯಿಂದು ತಾನೊಲಿದು ಇಳಿದು ಬಂದು
ಮೃಣ್ಮಯದ ಮನುಜಕುಲ–ಮಾತೆಯಾಗಿ ದಿವ್ಯಸ್ತನ್ಯಪಾನಕಾಗಿ
ಚಿಂತನವನೀಗ ದಿವ್ಯತ್ವಗೊಳಿಸೆ ಅವಳೀಗ ನಿತ್ಯದಲ್ಲಿ
ಜೊತೆಗಿದೋ ಸತತ ಅಭಯವನು ಕೊಡುವ ಕಾರಣಿಕ–ವಾಣಿಯಲ್ಲಿ

**– ಪುಟ್ಟು ಕುಲಕರ್ಣಿ**
**(ಶ್ರೀ ಅರವಿಂದರ 'ಸಾವಿತ್ರಿ'; ದಳ 1 ರೇಣು 3 ಪುಟ 41)**

**RNI No. 22511/1971**
No. of Pages **72 + 4 (Cov. Page)**
KAR Reg No.: RNP/KA/BGS/368/2021-2023
Kannada Monthly Magazine
Date of Publication on 7th of Every Month
Permitted to Post 10th of Every Month. Reg. Valid till: 31-12-2023
Licensed to Post at BG PSO, Mysuru Road, Bengaluru - 560 026



ದಂಡಿಸುವೆನೀಗ ಆ ಭಂಡ–ಪುಂಡ–ಉದ್ದಂಡ ಪಿಂಡಗಳನು
ಲೋಕವನು ಶೋಕ ಸಾಗರಕೆ ನೂಕಿ ಅಮುಕಿರುವ ಕಾಕುಗಳನು
ಪ್ರತಿ ರಕ್ತ–ಕಣದಿ ಹುದುಗಿರುವ ಹತ್ಯೆ ಲಾಲಸೆಯ ಬೀಜಗಳನು
ಕತ್ತೆತ್ತದಂತೆ ಕತ್ತರಿಸಿ ಬಿಡುವೆ ಕತ್ತಲೆಯ ಚಿತ್ತಗಳನು
ನಾನಿರುವೆ ದುರ್ಗೆ, ಶಕ್ತಿಯಧಿದೇವಿ ದೃಢತೆಯಲಿ ಜ್ಯೋತಿಯಾಗಿ

**– ಪುಟ್ಟು ಕುಲಕರ್ಣಿ**

**(ಶ್ರೀ ಅರವಿಂದರ 'ಸಾವಿತ್ರಿ'; ದಳ 7 ರೇಣು 4 ಪುಟ 509)**

Ed: Sri Puttu Parashuram Kulkarni, Pub: Dr. Ajit Sabnis
Ptd. by M/s. Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bengaluru - 560 078. Phone: 080 - 22449882.